UNIVERSAL LIBRARY
OU_198569
UNIVERSAL LIBRARY

# ಅಶೋಕ ಮೌರ್ಯ

ಜಿ. ಪಿ. ರಾಜರತ್ನಂ.

**ಸತ್ಯಶೋಧನ ಪ್ರಕಟನ ಮಂದಿರ**
**ಬೆಂಗಳೂರು**

೧೯೪೫ | [ ಹತ್ತು ಆಣೆ

(ಈ ಪುಸ್ತಕದ ಸರ್ವಸ್ವಾಮ್ಯವೂ ಗ್ರಂಥಕರ್ತೃವಿಗೇ ಸೇರಿದೆ.)

CHECKED. 1951

Checked 1965

ಸುಬೋಧ ಮುದ್ರಣಾಲಯ, ಬೆಂಗಳೂರು ನಗರ.

## ಹಿರಿಯರಲ್ಲಿ ಬಿನ್ನಹ

ಈ ಪುಸ್ತಕವು ನಮ್ಮಲ್ಲಿನ ಹೆಂಗಸರು ಮಕ್ಕಳಿಗಾಗಿ ಬರೆದುದು. ಮಕ್ಕಳೆಂದರೂ ಸುಮಾರು ಹನ್ನೆರಡು ದಾಟಿದವರು. ಅವರನ್ನು ಉದ್ದೇಶಿಸಿ ಬರೆದ ಈ ಪುಸ್ತಕದಲ್ಲಿ ಆಚರಿಸಿರುವ ವಿಧಾನವನ್ನು ಕುರಿತು ಎರಡು ಮಾತು ಹೇಳಬೇಕಾಗಿದೆ.

ಅಶೋಕನ ಚರಿತ್ರೆಯನ್ನು ತಿಳಿಸುವಾಗ, ಅವನ ಕೆಲಸ ಕಾರ್ಯಗಳನ್ನೆಲ್ಲ ಅನುಕ್ರಮವಾಗಿ ನಾವೇ ನಿರೂಪಿಸುವುದೂ ಒಂದು ರೀತಿ. ಆದರೆ, ಅಶೋಕನ ಹೆಸರಿನೊಡನೆಯೇ ನಮ್ಮ ಸ್ಮೃತಿಪಥಕ್ಕೆ ಬಿಡದೆ ಬರುವುದು–ಆತನ ಶಾಸನಗಳು. ಅಶೋಕನ ವಿಚಾರ ತಿಳಿಯ ಬಯಸುವವರಿಗೆ ಅವನ ಶಾಸನ ವಾಣಿ ತಿಳಿಯುವುದೂ ಮುಖ್ಯ. ಅಶೋಕನು ಹೀಗೆ ಮಾಡಿದನೆಂದು ನಾವು ಹೇಳುವುದಕ್ಕಿಂತ, ಅವನು ತಾನೇ ಬಂದು, ನಾನು ಹೀಗೆ ಮಾಡಿದೆನೆಂದು ಹೇಳಿದರೆ ಮೇಲು. ಅದೆ ಗುರಿಯಿಂದ, ಪುಸ್ತಕದ ಉದ್ದಕ್ಕೂ ಅವನ ಶಾಸನಗಳಿಂದ ಭಾಗಗಳನ್ನು ಉದ್ಧರಿಸಿದುದಾಗಿದೆ. ಉದ್ಧರಿಸಿರುವ ಭಾಗಗಳು ಶಾಸನಗಳ ಭಾಷಾಂತರವಾದರೂ, ಮಕ್ಕಳಿಗೆ ಅರ್ಥ ಸುಲಭವಾಗಲೆಂದು, ಭಾವವನ್ನು ಬಿಡದೆ ಭಾಷೆಯನ್ನು ತಕ್ಕಂತೆ ಹೊಂದಿಸಿಕೊಂಡಿದೆ. ಓದುಗರಿಗೆ ಅಶೋಕನ ಶಾಸನಗಳನ್ನು ಪರಿಚಯ ಮಾಡಿಕೊಡುವುದೇ ಈ ಅನುಸರಣೆಯ ಗುರಿ.


ಇಲ್ಲಿ, ಚರಿತ್ರೆಯನ್ನು ಹೇಳುವಾಗ ಜನಜನಿತವಾದ ಕತೆಗಳನ್ನೂ ಸೇರಿಸಿದೆ. ಇದಕ್ಕೆ ಕಾರಣ ಎರಡು: ಚರಿತ್ರೆಯಲ್ಲಿ ಸಾಲದೆಬಂದ ಭಾಗಗಳನ್ನು ಈ ಕತೆಗಳು ಪೂರೈಸುತ್ತವೆ;

ಅಲ್ಲದೆ ಬಿಡಲಾರದ ಈ ಕತೆಗಳಿಂದ ಚರಿತ್ರೆಯು ಚಿಕ್ಕವರಿಗೆ ಹೆಚ್ಚು ಮೋಹಕವಾಗುತ್ತದೆ. ಆದರೆ ಪ್ರತೀತವಾದ ಕತೆಗಳನ್ನು ಹೇಳುವಾಗಲೆಲ್ಲ, ಅದು ಚರಿತ್ರೆಯಿರಲಾರದೆಂದು ಬೇಕಾದಷ್ಟು ಎಚ್ಚರಿಕೆ ಕೊಟ್ಟಿದೆ.

ಮುಂದಿನ ಮಾತು ಚಿತ್ರಗಳನ್ನು ಕುರಿತುದು. ಪುಟ ೪೯ರ ಎದುರು ಬ್ರಹ್ಮಗಿರಿ ಶಿಲಾಶಾಸನವನ್ನೂ, ೬೯ರಲ್ಲಿ ಪಳನೆಯ ಶಿಲಾಶಾಸನವನ್ನೂ, ಪುಟ ತೊಂಬತ್ತುಮೂರರಲ್ಲಿ ಬ್ರಾಹ್ಮೀ ಕರೋಷ್ಠೀ ಲಿಪಿಗಳ ಮಾದರಿಯನ್ನೂ ಕೊಡಲಾಗಿದೆ. ಇದು ಕೊಟ್ಟುದು—ಮಕ್ಕಳಿಗೆ ಶಾಸನ ಓದುವುದು ಕಲಿಸಬೇಕೆಂದಲ್ಲ. ಪುಸ್ತಕವನ್ನು ಓದಿ, "ಬ್ರಾಹ್ಮೀ ಕರೋಷ್ಠೀ ಲಿಪಿ ಎಂದರೇನು, ಹೇಗಿದೆ? ನಮ್ಮ ಕರ್ಣಾಟಕದಲ್ಲಿರುವ ಅಶೋಕನ ಶಿಲಾಶಾಸನವು ಕಣ್ಣಿಗೆ ಹೇಗೆ ಕಾಣುವುದು? ಮಾಗಧೀ ಎಂಬ ಆ ಭಾಷೆಯು ಓದಿದರೆ ಹೇಗಿರುವುದು?" ಎಂದು ಸಹಜವಾಗಿ ಏಳುವ ಕುತೂಹಲವನ್ನು ತೃಪ್ತಿಗೊಳಿಸಲು ಈ ಚಿತ್ರಗಳನ್ನು ಕೊಟ್ಟಿದೆ. ಉಳಿದ ಮೂರು ಚಿತ್ರಗಳನ್ನೂ ಅಶೋಕನ ಸಾಮ್ರಾಜ್ಯದ ಪಟವನ್ನೂ ಕುರಿತು ಏನೂ ಹೇಳಬೇಕಾಗಿಲ್ಲ.

ಈ ಪುಸ್ತಕವನ್ನು ಚಿತ್ರಗಳಿಂದ ಅಲಂಕರಿಸಲು ಮೈಸೂರು ಸಂಶೋಧನಾಲಯದವರೂ ಇತರ ಮಿತ್ರರೂ ವಿಶ್ವಾಸವಿಟ್ಟು ನೆರವಾಗಿರುವರು. ಅವರೆಲ್ಲರಿಗೂ ನಾನು ಋಣಿ.

ಪುಸ್ತಕವಿದು ಕಿರಿಯರ ಕೈಗಾಗಲಿ. ಇಲ್ಲಿನ ಉಪದೇಶ ಹಿತವಾದಗಳು ಅವರ ಮನಸ್ಸಿಗಾಗಲಿ. ಅಶೋಕ ಮಹಾನುಭಾವನ ಪರಿಚಯದಿಂದ ಎಲ್ಲರೂ ಉತ್ತಮರಾಗಲಿ.



ಸಾರನಾಥದ ಶಿಲಾಸಿಂಹ

[ಈ ವಿಗ್ರಹವು ಸಾರನಾಥದ ಶಿಲಾಸ್ತಂಭದ ಮೇಲೆ ಇದ್ದುದು. ಇದರಲ್ಲಿ ನಾಲ್ಕು ಸಿಂಹಗಳು ಬೆನ್ನಿಗೆ ಬೆನ್ನುಕೊಟ್ಟು ನಿಂತಿವೆ. ಪ್ರತಿ ಸಿಂಹದ ಕಾಲಿನ ಕೆಳಗೂ ಒಂದೊಂದು ಚಕ್ರವಿದೆ. ಎದುರು ಚಕ್ರದ ಬಲಭಾಗದಲ್ಲಿರುವುದು ಗೂಳಿ.]

# ತಿದ್ದುಪಡಿ

| ಪುಟ | ಪಂಕ್ತಿ | ತಪ್ಪು | ಒಪ್ಪು |
|---|---|---|---|
| ೯ | ೧೯ | ಸಭದ್ರಾಂಗಿ | ಸುಭದ್ರಾಂಗಿ |
| ೩೮ | ೯ | ಜಾಗಡ | ಜೌಗಡ |
| ೪೭ | ೩೪ | ಕಸರಾಲ | ಚಕಲರಾ |
| ೫೭ | ೭ | ಶಿಷ್ಯನು | ತಿಷ್ಯನು |
| ೫೮ | ೨೦ | ಮಗಳಿದ್ದರು | ಮಗಳಿದ್ದಳು |
| ೭೮ | ೧೪ | ಘೋಷ | ಘೋಷಕ |
| ೮೫ | ೯ | ಏಕಚ್ಛಕ್ರಾ | ಏಕಚ್ಛತ್ರಾ |
| ೯೨ | ೨೧ | ಆರು | ಏಳು |
| ೯೫ | ೫ | 'ಒಂದರಲ್ಲಿ' ಆದ ಮೇಲೆ — 'ಇನ್ನೊಂದು ವೇಷಭೂಷಣಗಳಲ್ಲಿ ಆಡಂಬರವಿರಬಾರದೆಂದು' ಎಂದು ಸೇರಿಸಿಕೊಳ್ಳಬೇಕು. | |

# ವಿವರ


**ಪ್ರವೇಶ** ೧

ಚಂದ್ರಗುಪ್ತ .... .... ೧

ಬಿಂದುಸಾರ .... .... ೩

ಅಶೋಕ ಮೌರ್ಯ .... .... ೪

**ಕಳಿಂಗ ಯುದ್ಧಕ್ಕೆ ಮುಂಚೆ** ೮

ಮೊದಲು .... .... ೮

ಅಶೋಕನ ಜನನ .... .... ೯

ಅಶೋಕನು ಚಕ್ರವರ್ತಿಯಾದುದು .... ೧೦

ಅಶೋಕನು ಬೌದ್ಧನಾದುದು .... .... ೧೨

**ಯುದ್ಧವಾದ ಮೇಲೆ** ೧೮

ಕಳಿಂಗ ಯುದ್ಧ .... .... ೧೮

ಅಶೋಕನ ಧರ್ಮಬೋಧೆ .... .... ೨೧

ಕಳಿಂಗ ಶಾಸನಗಳು .... .... ೨೪

ಹದಿನಾಲ್ಕು ಶಿಲಾಶಾಸನಗಳು .... .... ೨೭

**ಅಲ್ಲಿಂದ ಮುಂದೆ** ೪೧

ಅಶೋಕನ ಧರ್ಮಕಾರ್ಯ .... .... ೪೧

ಮೂರನೆಯ ಬೌದ್ಧ ಮಹಾಸಭೆ .... ೪೪

ಸಿಂಹಳದಲ್ಲಿ ಮತಪ್ರಚಾರ .... .... ೪೭

ಅಶೋಕನ ಕ್ಷೇತ್ರಯಾತ್ರೆ .... .... ೪೯

ಏಳು ಶಿಲಾಸ್ತಂಭ ಶಾಸನಗಳು .... ೫೩

**ಎರಡು ಕತೆ** ೬೦

ಅಶೋಕನ ತಮ್ಮ ವೀತಶೋಕ .... ೬೦

ಮನುಷ್ಯನ ಜೀವ ಏನು? .... .... ೬೪

**ಕಡೆಯ ದಿನಗಳು** **೭೦**
ಕುಣಾಲನ ಕಣ್ಣು .... .... ೭೦
ಅಗ್ರಮಹಿಷಿ ತಿಷ್ಯರಕ್ಷಿತೆ .... .... ೭೯
ಅಶೋಕನ ಮರಣ .... .... ೮೧
**ಅಶೋಕನ ಗುಣಗಾನ** **೮೭**

## ಪಟಗಳು

೧. ಸಾರನಾಥದ ಶಿಲಾಸಿಂಹ ... .... ಮುಖಚಿತ್ರ.
೨. ಅಶೋಕನ ಸಾಮ್ರಾಜ್ಯ .... .... ಪುಟ ಒಂದರ ಎದುರು.
೩. ಸಾಂಚಿ ಸ್ತೂಪ .... ... ಪುಟ ನಲವತ್ತೆಂಟರ ಎದುರು.
೪. ಬ್ರಹ್ಮಗಿರಿ ಶಿಲಾಶಾಸನ .... .... ಪುಟ ನಲವತ್ತೊಂಬತ್ತರ ಎದುರು.
೫ ‘ಗಜತಮೋ’ .... .... ಪುಟ ಎಂಬತ್ತೊಂಬತ್ತು.
೬. ಬ್ರಾಹ್ಮೀ ಮತ್ತು ಖರೋಷ್ಠೀ ಲಿಪಿ ... ಪುಟ ತೊಂಬತ್ತು ಮೂರು.

# ಪ್ರವೇಶ

## ಚಂದ್ರಗುಪ್ತ

ನಮ್ಮ ಭರತಭೂಮಿಯ ಇತಿಹಾಸದಲ್ಲಿ, ಮಹಾಭಾರತದ ಕಾಲದಿಂದ ಈಚೆ, ಸಾರ್ವಭೌಮ ಪದವಿಯನ್ನು ಸಾಧಿಸಿದ ಮೊದಲಿಗನೆಂದರೆ ಚಂದ್ರಗುಪ್ತ ಚಕ್ರವರ್ತಿ. ಚಂದ್ರಗುಪ್ತನ ತಂದೆಯಾದ ಮೌರ್ಯನನ್ನೂ, ತಮ್ಮಂದಿರು ತೊಂಬತ್ತೊಂಬತ್ತು ಮಂದಿಯನ್ನೂ, ಅವನ ದಾಯಾದರಾದ ನಂದರೆಂಬವರು ಮೋಸದಿಂದ ಕೊಲೆಮಾಡಿದ್ದರು. ಚಂದ್ರಗುಪ್ತನು ಮಾತ್ರ ತಾನು ಸೆರೆಯಿದ್ದ ಪಾಟಲೀಪುತ್ರದಿಂದ ತಪ್ಪಿಸಿಕೊಂಡು ಪ್ರತಿಕ್ರಿಯೆಗೆ ಉಪಾಯ ಹುಡುಕುತ್ತ ಪಂಚನದ ಪ್ರಾಂತದಲ್ಲಿ ಅಲೆಯುತ್ತಿದ್ದನು.

ಅದೇ ಸಮಯದಲ್ಲಿ ಸಿಕಂದರನೆಂಬ ಗ್ರೀಕ ದೊರೆಯು ಹಿಂದೂಸ್ಥಾನವನ್ನು ಗೆಲ್ಲಬೇಕೆಂದು ಬಂದನು. ಅವನಿಗೆ ಎದುರಾದ ಹಿಂದೂದೇಶದ ದೊರೆಗಳು ಮಹಾ ಪರಾಕ್ರಮಿಗಳು. ಆದರೆ ಅವರಲ್ಲಿ ಒಗ್ಗಟ್ಟಿರಲಿಲ್ಲ. ಬಂದವನೊಡನೆ ಎಲ್ಲರೂ ಒಟ್ಟಾಗಿ ಹೋರುವುದು ಬಿಟ್ಟು, ಪ್ರತಿಯೊಬ್ಬರೂ ತಾವು ತಾವೇ ಯುದ್ಧಮಾಡತೊಡಗಿದರು. ಅವರನ್ನು ಗೆಲ್ಲುವುದು ಸಿಕಂದರನಿಗೆ ಸುಲಭವಾಗದಿದ್ದರೂ ಅಸಾಧ್ಯವಾಗಲಿಲ್ಲ. ಆದರೆ ಹೆಜ್ಜೆ ಹೆಜ್ಜೆಗೂ ಅಂತಹ ವೀರರೊಡನೆ ಕಾದಿ ಕಾದಿ ಸಿಕಂದರನ ಸೈನಿಕರಿಗೆ ಸಾಕಾಯಿತು. ಅವರು ಇನ್ನು ಮುಂದೆ ಹೋಗುವುದಿಲ್ಲವೆಂದು ಹಠ ಹಿಡಿದರು. ಸಿಕಂದರನು ಹಿಂದಿರುಗಬೇಕಾ

ಯಿತು. ಸಿಕಂದರನು ಹಿಂದಿರುಗಿದ ಕೂಡಲೆ ಅವನು ಗೆದ್ದಿದ್ದ ರಾಷ್ಟ್ರಗಳ ಕ್ಷತ್ರಿಯರು ಪುನಃ ಮೇಲೆದ್ದರು. ಅಲ್ಲಿ ನೆಲೆಸಿದ್ದ ಯವನ ಗ್ರೀಕ ದಳಗಳನ್ನು ಓಡಿಸಿ, ತಾವೇ ತಾವಾದರು.

ಆ ವೇಳೆಗೆ, ಅಲೆಯುತ್ತಿದ್ದ ಚಂದ್ರಗುಪ್ತನಿಗೆ ವಿಷ್ಣು ಶರ್ಮನೆಂಬ ಬ್ರಾಹ್ಮಣನ ಪರಿಚಯವಾಗಿತ್ತು. ಆ ವಿಷ್ಣು ಶರ್ಮನು ರಾಜತಂತ್ರ ವಿಶಾರದನಾದ ಚಾಣಕ್ಯನೆಂದೂ, ಅರ್ಥ ಶಾಸ್ತ್ರ ಪರಿಣತನಾದ ಕೌಟಿಲ್ಯನೆಂದೂ ಪ್ರಸಿದ್ಧನಾದವನು. ಅವನ ಮಂತ್ರಿತ್ವದಿಂದ ಚಂದ್ರಗುಪ್ತನು ಹಲಕೆಲವು ರಾಜರನ್ನು ಸೇರಿಸಿಕೊಂಡು ನಂದರ ಮೇಲೆ ದಂಡೆತ್ತಿದನು. ನಂದರನ್ನು ನಾಶಮಾಡಿ ಮಗಧರಾಜ್ಯಕ್ಕೆ ದೊರೆಯಾದನು. ಸುತ್ತಮುತ್ತ ಲಿನ ಕೋಸಲ, ವತ್ಸ, ಅವಂತೀ, ಸೌರಾಷ್ಟ್ರ, ಶೌರಸೇನ. ಪಾಂಚಾಲ ಮುಂತಾದ ರಾಷ್ಟ್ರಗಳನ್ನೂ ಕೆಲವೇ ವರ್ಷಗಳಲ್ಲಿ ಗೆದ್ದು ರಾಜ್ಯವನ್ನು ವಿಸ್ತರಿಸಿದನು. ಹೀಗೆ ಚಂದ್ರಗುಪ್ತನಿಂದ ಮೌರ್ಯ ಚಕ್ರಾಧಿಪತ್ಯ ಸ್ಥಾಪಿತವಾಯಿತು.

ಸಿಕಂದರನು ಗ್ರೀಸ್, ಇರಾನೀ, ಈಜಿಪ್ಟ್ ರಾಜ್ಯಗಳಿಗೆ ಸ್ವಾಮಿಯಾಗಿದ್ದವನು. ಅವನು ಸತ್ತಮೇಲೆ ಅವನ ರಾಜ್ಯ ವನ್ನು ಅವನ ಸೇನಾಪತಿಗಳು ಹಂಚಿಕೊಂಡರು. ಅವರಲ್ಲಿ ಒಬ್ಬನಾದ ಸೆಲ್ಯೂಕಸ್ ಎಂಬವನು ಭರತಖಂಡದ ಪಕ್ಕದ ಪ್ರಾಂತಗಳಿಗೆ ರಾಜನಾದನು. ಭರತಖಂಡದ ಅರಸರನ್ನು ಗೆಲ್ಲುವುದು ಸಾಧ್ಯವೆಂದು, ಸಿಕಂದರನ ಜೊತೆಯಲ್ಲಿ ಹೋದಾಗ ಅವನು ಕಂಡಿದ್ದನು. ಸಿಕಂದರನು ಗೆದ್ದಿದ್ದುದನ್ನು ಹಿಂದೆ ಪಡೆ ಯುವುದು ಮಾತ್ರವಲ್ಲದೆ, ಅದರಿಂದ ಆಚೆಯ ಭಾಗಗಳನ್ನೂ ಗೆದ್ದು, ಸಿಕಂದರನಿಗಿಂದ ತಾನು ಹೆಚ್ಚಿನವನು ಎನ್ನಿಸಿಕೊಳ್ಳಬೇ

ಕೆಂದು ಸೆಲ್ಯೂಕಸನಿಗೆ ಆಸೆಯಾಯಿತು. ಅದಕ್ಕಾಗಿ ಸೇನಾ ಸಮೇತನಾಗಿ ಹೊರಟು. ಹಿಂದೂದೇಶದ ವಾಯುವ್ಯ ಸರಹದ್ದಿನಲ್ಲಿ ನಿಂತನು. ಆದರೆ ಈ ಸಲ ಅವನೆದುರು ನಿಂತುದು ಹಿಂದಿನಂತೆ ಪುಡಿ ಪುಡಿ ಸೇನೆಯಲ್ಲ. ಚಂದ್ರಗುಪ್ತ ಚಕ್ರವರ್ತಿಯ ಅಖಂಡ ಬಲದೊಡನೆ ಅವನು ಹೋರಾಡಬೇಕಾಯಿತು. ಸೆಲ್ಯೂಕಸನು ಸೋತುಹೋದನು. ಮೇರೆ ದಾಟುವ ಮುಂಚೆಯೇ ಅವನ ಆಸೆ ಮುಟ್ಟವಾಯಿತು. ಆದರೆ ಸೆಲ್ಯೂಕಸನು ಸೋತ ಹಾಗೆ ಹಿಂದಿರುಗಲಿಲ್ಲ. ಚಂದ್ರಗುಪ್ತನಂತಹ ವೀರವರನ ಸ್ನೇಹಬಾಂಧವ್ಯಗಳನ್ನು ಸಂಪಾದಿಸಬೇಕೆಂದು, ಈಗಿನ ಆಫ್ಘನಸ್ಥಾನ ಬಲೂಚಿಸ್ಥಾನಗಳನ್ನು ಅವನಿಗೆ ಬಿಟ್ಟುಕೊಟ್ಟುದಲ್ಲದೆ ತನ್ನ ಮಗಳನ್ನು ಅವನಿಗೆ ಮದುವೆಮಾಡಿದನು. ಚಂದ್ರಗುಪ್ತನು ಕೂಡ ತನಗೆ ಮಾವನಾದ ಸೋತ ಶತ್ರುವಿನಲ್ಲಿ ಔದಾರ್ಯ ಗೌರವಗಳಿಂದ ವರ್ತಿಸಿದನು.

ರಾಜ್ಯವು ಹೀಗೆ ವಾಯುವ್ಯದಲ್ಲಿ ಹಬ್ಬಿದಮೇಲೆ, ಚಂದ್ರಗುಪ್ತನು ಹಿಮಾಲಯ ವಿಂಧ್ಯಪರ್ವತಗಳ ನಡುವಣ ಉಳಿದ ಭಾಗವನ್ನೂ ಗೆದ್ದನು. ಈ ರೀತಿ ಮೇಲೆ ಹಿಮಾಚಲ, ಕೆಳಗೆ ವಿಂಧ್ಯಾಚಲ, ಎಡಗಡೆ ಪಾರ್ಸೀಸ್ಥಾನ, ಬಲಗಡೆ ಬರ್ಮಾದೇಶ —ಇವೇ ನಾಲ್ಕೂ ಕಡೆ ಎಲ್ಲೆಯಾದ ವಿಶಾಲ ಚಕ್ರಾಧಿಪತ್ಯವನ್ನು ಚಂದ್ರಗುಪ್ತನು ಅಜೇಯನಾಗಿ ಇಪ್ಪತ್ತುನಾಲ್ಕು ವರುಷ ಆಳಿದನು.

**ಬಿಂದುಸಾರ:—**

ಅವನಾದ ಮೇಲೆ ಪಟ್ಟಕ್ಕೆ ಬಂದವನು ಅವನ ಮಗ ಬಿಂದುಸಾರ. ಶತ್ರುಗಳು ಅವನ ಕೈಲಿ ಬಹಳ ಘಾಸಿಗೊಳ್ಳುತ್ತಿ

ಪ್ಪುದರಿಂದ, ಅವನಿಗೆ ಅಮಿತ್ರಘಾತ ಎಂಬ ಬಿರುದು ಬಂದಿತ್ತು. ಬಿಂದುಸಾರನು ತಂದೆಗೆ ತಕ್ಕ ಮಗ. ಚಂದ್ರಗುಪ್ತನು ಬಿಟ್ಟು ಹೋದ ವಿಶಾಲ ಸಾಮ್ರಾಜ್ಯವನ್ನು ಸರಿಯಾಗಿ ಆಳುವುದು ಮಾತ್ರವಲ್ಲದೆ, ಬಿಂದುಸಾರನು, ವಿಂಧ್ಯಗಿರಿಯ ದಕ್ಷಿಣಕ್ಕಿದ್ದ ರಾಜ್ಯಗಳನ್ನೂ ಗೆದ್ದನು. ಅವನ ರಾಜ್ಯವು, ಈಗಿರುವ ಮೈಸೂರು ಸಂಸ್ಥಾನದ ವರೆವಿಗೂ ದಕ್ಷಿಣದಲ್ಲಿ ಹಬ್ಬಿತು. ಬಿಂದುಸಾರನು ಕೂಡ ತಂದೆಯಂತೆಯೇ ಇಪ್ಪತ್ತುನಾಲ್ಕು ವರ್ಷ ಸಾಮರ್ಥ್ಯದಿಂದ ರಾಜ್ಯವಾಳಿದನು.

**ಅಶೋಕ ಮೌರ್ಯ**

ಅವನನಂತರ ಮೌರ್ಯ ಸಿಂಹಾಸನವನ್ನು ಏರಿದವನು, ಮೌರ್ಯಕುಲಕ್ಕೆ ತಿಲಕಪ್ರಾಯನೆನಿಸಿಕೊಂಡ ಅಶೋಕ. ಅಶೋಕನು ಬಿಂದುಸಾರನ ಮಗ, ಚಂದ್ರಗುಪ್ತನ ಮೊಮ್ಮಗ. ತಂದೆ ತಾತರಂತೆಯೇ ವಿಚಕ್ಷಣೆಯಿಂದ ರಾಜ್ಯವಾಳಿದರೂ, ಅಶೋಕನು, ಅವರಂತೆ ಹೊಸ ರಾಜ್ಯ ಸಂಪಾದಿಸಲಿಲ್ಲ. ಒಂದುಸಲ ಮಾತ್ರ ರಾಜ್ಯ ಸಂಪಾದನೆಗಾಗಿ ಯುದ್ಧಮಾಡಿದನು ; ಅದು ತಾನು ಪಟ್ಟಕ್ಕೆ ಬಂದ ಎಂಟು ವರ್ಷದ ಮೇಲೆ. ಯುದ್ಧದಿಂದ ಎಷ್ಟು ಜನರಿಗೆ ಏನೇನು ನಷ್ಟ ಅನರ್ಥಗಳು ಸಂಭವಿಸುವುವೆಂದು ಆಗ ಅಶೋಕನಿಗೆ ಗೊತ್ತಾಯಿತು. ಅಂದಿನಿಂದ ಯುದ್ಧಮಾಡುವುದಿಲ್ಲವೆಂದು ಮನಸ್ಸು ಮಾಡಿದನು. ಇರುವ ರಾಜ್ಯವನ್ನು ಕರುಣೆ ಪ್ರೇಮ ವಿಶ್ವಾಸಗಳಿಂದ ಆಳಲು ಪ್ರಯತ್ನಿಸಿದನು. ಆ ಪ್ರಯತ್ನಗಳನ್ನೂ, ಅವು ಎಷ್ಟು ಸಫಲವಾದುವೆಂಬುವನ್ನೂ ಕುರಿತು ಅನೇಕ ಶಾಸನಗಳನ್ನು ಬರೆಸಿದನು. ಅಶೋಕನ ದಿವ್ಯವಾದ ಜೀವನ ವಿಚಾರಗಳನ್ನು ತಿಳಿಯಲು ಆ

ಶಾಸನಗಳಂತಹ ಉಪಕರಣಗಳು ಬೇರೆ ಇಲ್ಲ. ಅಶೋಕನ ವಿಚಾರವಾಗಿ ಅನೇಕ ಕತೆಗಳಿವೆ. ಆದರೆ ಶಾಸನಗಳನ್ನು ನಂಬುವಂತೆ ಅವುಗಳನ್ನು ನಂಬಲು ಆಗುವುದಿಲ್ಲ.

ತನ್ನ ಶಾಸನಗಳನ್ನು ಎಲ್ಲರೂ ಓದಿ, ಅದರಂತೆ ನಡೆಯ ಲೆಂದು ಅಶೋಕನು ಅವುಗಳನ್ನು ರಾಜ್ಯದ ಮೂಲೆ ಮೂಲೆಗಳ ಲ್ಲಿಯೂ ಪ್ರಕಟಪಡಿಸಿದನು. ಆ ಶಾಸನಗಳು ಸೂರ್ಯಚಂದ್ರ ರಿರುವ ವರೆಗೂ ಜನರಿಗೆ ಮಾರ್ಗದರ್ಶಕಗಳಾಗಿ ಇರಲೆಂದು ಅವುಗಳನ್ನು ಕಲ್ಲುಗಳ ಮೇಲೆ ಕೆತ್ತಿಸಿದನು. ದೊಡ್ಡ ದೊಡ್ಡ ಬಂಡೆಗಳು ಸಹಜವಾಗಿ ಸಿಕ್ಕುವ ಕಡೆ, ಶಾಸನಗಳನ್ನು ಅವುಗಳ ಮೇಲೆ ಬರೆಸಿದನು. ಬಂಡೆಗಳು ಸಿಕ್ಕದ ಕಡೆಗೆ ಬಂಡೆಯಿಂದ ಕಡೆದ ದೊಡ್ಡ ಕಂಭಗಳನ್ನು ತರಿಸಿ, ಅವುಗಳ ಮೇಲೆ ಬರೆಸಿ ದನು.

ಬಂಡೆಗಳಮೇಲೆ ಸಿಕ್ಕಿರುವ ಶಾಸನಗಳಲ್ಲಿ ಹದಿನಾಲ್ಕು ಶಾಸನಗಳೆಂಬವು ಮುಖ್ಯವಾದವು. ಅವು ಹದಿನಾಲ್ಕೂ ಒಂದಾದ ಮೇಲೊಂದು ಒಟ್ಟಿಗಿವೆ. ಅಲ್ಲದೆ ಇನ್ನೂ ಹಲವು ಪುಟ್ಟ ಪುಟ್ಟ ಶಾಸನಗಳೂ ಬಂಡೆಗಳ ಮೇಲೆ ಸಿಕ್ಕಿವೆ. ವಾಯ ವ್ಯದಲ್ಲಿ ಷಾಬಾಸ್‌ಗರ್ಹಿ, ಮನ್ಸೇರಾ; ಮಧ್ಯದೇಶದಲ್ಲಿ ರೂಪ ನಾಥ್, ಸಹಸ್ರಾಂ, ಬೈರತ್; ಉತ್ತರದಲ್ಲಿ ಕಾಲ್ಸೀ; ಪಶ್ಚಿಮ ದಲ್ಲಿ ಗಿರಿನಾರ್; ಮೂಡಲಲ್ಲಿ ಧೌಲಿ, ಜೌಗಡ; ಬೊಂಬಾ ಯಿಯ ಬಳಿಯ ಸೊಪಾರ; ಹೈದರಾಬಾದು ಸಂಸ್ಥಾನದ ಮಸ್ಕಿ; ಮೈಸೂರು ಸಂಸ್ಥಾನದ ಬ್ರಹ್ಮಗಿರಿ, ಸಿದ್ಧಾಪುರ, ಜತಿಂಗ ರಾಮೇ ಶ್ವರ—ಇಲ್ಲಿ ಶಿಲಾಶಾಸನಗಳು ಸಿಕ್ಕಿವೆ.

ಕಲ್ಲು ಕಂಭಗಳ ಮೇಲೆ ಸಿಕ್ಕಿರುವ ಶಾಸನಗಳಲ್ಲಿ ಏಳು

ಶಾಸನಗಳೆಂಬವು ಮುಖ್ಯವಾದವು. ಅವು ಏಳೂ ಒಂದಾಪ ಮೇಲೊಂದು ಒಟ್ಟಿಗಿವೆ. ಅಲ್ಲದೆ ಇನ್ನೂ ಹಲವು ಪುಟ್ಟ ಪುಟ್ಟ ಶಾಸನಗಳೂ ಕಂಭಗಳ ಮೇಲೆ ಸಿಕ್ಕಿವೆ. ದೆಹಲಿಯ ಬಳಿಯ ತೋಪ್ರ, ಮೀರತ್; ಉತ್ತರ ಬಿಹಾರಿನ ಚಂಪಾರಣ್ಯದ ಬಳಿಯ ಲೌರಿಯಾ–ಅರರಾಜ್, ಲೌರಿಯಾ–ನಂದನಘರ ಮತ್ತು ರಾಂಪೂರ್ವಾ; ಅಲಹಾಬಾದಿನ ಬಳಿಯ ಕೌಶಾಂಬಿ; ಮಧ್ಯದೇಶದಲ್ಲಿ ಸಾಂಚಿ, ಸಾರನಾಥ್; ನೇಪಾಳದ ಬಳಿಯ ರುಮ್ಮಿಣದೈ, ನಿಗ್ಲೀವಾ—ಇಲ್ಲಿ ಶಿಲಾಸ್ತಂಭಗಳಮೇಲೆ ಶಾಸನಗಳು ಸಿಕ್ಕಿವೆ.

ಅಲ್ಲದೆ ದಕ್ಷಿಣ ಬಿಹಾರಿನ ಗಯೆಯ ಬಳಿ ಬರಾಬರ ಬೆಟ್ಟದ ಮೂರು ಗುಹೆಗಳಲ್ಲಿಯೂ ಅಶೋಕನ ಶಾಸನಗಳು ಸಿಕ್ಕಿವೆ. ಇಷ್ಟಾದರೂ ಅವನ ಶಾಸನಗಳು ಎಲ್ಲವೂ ಸಿಕ್ಕಿವೆಯೆಂದು ಹೇಳುವಂತಿಲ್ಲ.

ಶಾಸನಗಳಲ್ಲಿ, ಸಿಂಧುನದಿಯ ಪಶ್ಚಿಮಕ್ಕೆ ಸಿಕ್ಕಿರುವವು ಬಲದಿಂದ ಎಡಕ್ಕೆ ಬರೆಯುವ ಖರೋಷ್ಠೀ ಲಿಪಿಯಲ್ಲಿವೆ; ಉಳಿದವು ಎಡದಿಂದ ಬಲಕ್ಕೆ ಬರೆಯುವ ಬ್ರಾಹ್ಮೀಲಿಪಿಯಲ್ಲಿವೆ. ಈ ಬ್ರಾಹ್ಮೀಲಿಪಿಯಿಂದಲೇ ನಮ್ಮ ವರ್ಣಮಾಲೆಯು ಹುಟ್ಟಿದುದು. ಶಾಸನಗಳ ಭಾಷೆ ಮಾತ್ರ ಮಾಗಧೀ ಎಂಬ ಸಂಸ್ಕೃತದ ಪ್ರಾಕೃತ ರೂಪದಲ್ಲಿದೆ.

ಜಗತ್ತಿನಲ್ಲಿ, ಅಶೋಕನಿಗೆ ಹಿಂದೆ, ಅಶೋಕನಾದಮೇಲೆ, ಅನೇಕ ಪ್ರಭುಗಳು ಆಳಿ ಹೋದರು. ಆದರೆ ಅಶೋಕ ಚಕ್ರವರ್ತಿಯಂತಹವನು ಹಿಂದೆ ಇರಲಿಲ್ಲ, ಮುಂದೆ ಹುಟ್ಟಲಿಲ್ಲ, ಎಂಬುದು ಅವನ ಶಾಸನಗಳಿಂದ ತಿಳಿದು ಬರುವುದು. ಚಕ್ರ

ವರ್ತಿಯ ದಯೆಯು, ಅವನ ಸರಳ ಸ್ವಭಾವ, ಪ್ರಜಾವಾತ್ಸಲ್ಯವೇ ಮೊದಲಾದ ಸಕಲ ಸುಗುಣಗಳೂ ಆ ಶಾಸನಗಳಲ್ಲಿ ಪ್ರತಿಬಿಂಬಿತವಾಗಿವೆ. ಅಶೋಕನ ಶಾಸನಗಳಂತಹ ಶಾಸನಗಳು ಬೇರೆಯಿಲ್ಲ. ಅಶೋಕನಂತಹ ಚಕ್ರವರ್ತಿ ಇನ್ನಿಲ್ಲ. ಈ ಮಾತು ವಾಸ್ತವವಲ್ಲದ ಉತ್ಪ್ರೇಕ್ಷೆಯಲ್ಲ.

# ಕಳಿಂಗ ಯುದ್ಧಕ್ಕೆ ಮುಂಚೆ

**ಮೊದಲು:—**

ಅಶೋಕನು ಒಂದುಸಲ ಮಾತ್ರ ಯುದ್ಧ ಮಾಡಲು ಹೋದನೆಂದು ಹಿಂದೆ ಹೇಳಿದೆ. ತನ್ನ ಸಾಮ್ರಾಜ್ಯಕ್ಕೆ ಸೇರದ ದಕ್ಷಿಣ ತೀರಪ್ರದೇಶದಲ್ಲಿದ್ದ ಕಳಿಂಗ ರಾಜ್ಯವನ್ನು ಗೆಲ್ಲಲು ಮಾಡಿದ ಯುದ್ಧವದು. ಅಶೋಕನ ವಿಚಾರವಾಗಿ ಐತಿಹಾಸಿಕ ದೃಷ್ಟಿಯಿಂದ ನಮಗೆ ಸಿಕ್ಕುವ ಮೊದಲ ಮುಖ್ಯ ಸಂಗತಿಯು ಇದೇ. ಕಳಿಂಗ ಯುದ್ಧ ನಡೆದಾಗ, ಅಶೋಕನಿಗೆ ಪಟ್ಟಾಭಿಷೇಕವಾಗಿ ಎಂಟು ವರ್ಷವಾಗಿತ್ತು. ಪಟ್ಟಾಭಿಷೇಕವಾದಾಗ ಅವನಿಗೆ ಸುಮಾರು ಮುವ್ವತ್ತುನಾಲ್ಕು ವಯಸ್ಸು. ಕಳಿಂಗ ಯುದ್ಧಕ್ಕೆ ಮೊದಲು ಅವನು ಏನೇನು ಮಾಡಿದನೆಂಬದು ಸ್ಪಷ್ಟವಾಗಿ ತಿಳಿದು ಬಂದಿಲ್ಲ. ಅವನ ಶಾಸನಗಳಿಂದ ಗೊತ್ತಾಗಿರುವುದು ಇಷ್ಟುಮಾತ್ರ: ಕ್ರಿ. ಪೂ. ೨೭೩ರಲ್ಲಿ ಬಿಂದುಸಾರನು ಮಡಿಯಲು ಅಶೋಕನು ಮೌರ್ಯ ಸಿಂಹಾಸನವನ್ನು ಏರಿದನು. ನಾಲ್ಕು ವರ್ಷದಮೇಲೆ, ಎಂದರೆ ಕ್ರಿ. ಪೂ. ೨೬೯ರಲ್ಲಿ ಅವನಿಗೆ ಪಟ್ಟಾಭಿಷೇಕವಾಯಿತು. ಕ್ರಿ. ಪೂ. ೨೬೩ರಲ್ಲಿ ಬುದ್ಧದೇವನ ಧರ್ಮವನ್ನು ಅನುಸರಿಸಲು ಮೊದಲು ಮಾಡಿದನು. ಅದಾದ ಎರಡು ಮೂರು ವರ್ಷದಮೇಲೆ, ಎಂದರೆ ಕ್ರಿ. ಪೂ. ೨೬೧ರಲ್ಲಿ ಕಳಿಂಗ ಯುದ್ಧ ನಡೆಯಿತು. ಇದಕ್ಕಿಂತ ಹೆಚ್ಚಿನ ವಿಚಾರವೇನೂ ಸಿಕ್ಕುವುದಿಲ್ಲವಾದರೂ, ಅದೇ ವಿಚಾರವನ್ನು ಕುರಿತು ಬೌದ್ಧರಲ್ಲಿ ಕೆಲವು ಕತೆಗಳಿವೆ. ಆ ಕತೆಗಳನ್ನು ಶಾಸನಗಳಂತೆ

ನಂಬಲು ಆಗುವುದಿಲ್ಲವೆಂದು ಹಿಂದೆ ಹೇಳಿದೆ. ಆದರೂ ಅವುಗಳನ್ನು ಕತೆಗಳೆಂದೇ ಬಗೆದು ನೋಡೋಣ.

**ಅಶೋಕನ ಜನನ—**

ಬಿಂದುಸಾರನು ಮಗಧ ದೇಶದಲ್ಲಿ ರಾಜ್ಯವಾಳುತ್ತಿದ್ದಾಗ, ಚಂಪೆ ಎಂಬ ನಗರದಲ್ಲಿ ಸುಭದ್ರಾಂಗಿ ಎಂಬ ಬ್ರಾಹ್ಮಣ ಕನ್ಯೆಯಿದ್ದಳು. ಅವಳು ಹುಟ್ಟಿದಾಗ ಹಲವರು ಜ್ಯೋತಿಷಿಗಳು ಬಂದು "ಈ ಕನ್ಯೆಯು ಮಹಾರಾಜನ ಕೈಹಿಡಿಯುವಳು. ಈಕೆಯು ಪಡೆಯುವ ಇಬ್ಬರು ಮಕ್ಕಳಲ್ಲಿ ಒಬ್ಬನು ಚಕ್ರವರ್ತಿಯಾಗಿ ಪ್ರಖ್ಯಾತನಾಗುವನು; ಇನ್ನೊಬ್ಬನು ಸಂನ್ಯಾಸಿಯಾಗಿ ಪ್ರಸಿದ್ಧನಾಗುವನು" ಎಂದರು. ಆ ಮಾತು ಕೇಳಿ ಆಕೆಯ ತಂದೆಯು ಸಂತೋಷಪಟ್ಟನು. ಮಗಳಿಗೆ ತಕ್ಕ ವಯಸ್ಸಾಗಲು, ಆಕೆಯನ್ನು ಪಾಟಲೀಪುತ್ರಕ್ಕೆ ಕರದುಕೊಂಡು ಹೋಗಿ ಬಿಂದುಸಾರನಿಗೆ ಧಾರೆಯೆರೆದನು.

ಸುಭದ್ರಾಂಗಿಯ ರೂಪವನ್ನು ಕಂಡು ಅಂತಃಪುರದ ಇತರ ರಾಣಿಯರಿಗೆ ಅಸೂಯೆ ಹುಟ್ಟಿತು. ಅವಳ ರೂಪಕ್ಕೆ ಅರಸನು ಮೋಹಗೊಂಡು ತಮ್ಮನ್ನು ಮರೆತಾನೆಂದು ಅವರು ಹೆದರಿದರು. ಅದರಿಂದ, ಕೂದಲು ಕತ್ತರಿಸುವ ವಿದ್ಯೆಯನ್ನು ಅವಳಿಗೆ ಹೇಳಿಕೊಟ್ಟು ಅಂತಃಪುರದಿಂದ ಹೊರಗೆ ಹಾಕಿದರು. ದೊರೆಯ ತಲೆಗೂದಲು ಕತ್ತರಿಸಿ ಬಾಚುವ ಕೆಲಸವು ಸುಭದ್ರಾಂಗಿಯ ಪಾಲಿಗೆ ಬಿತ್ತು.

ಅರಸನಿಗೆ, ತನ್ನ ಅನೇಕ ಕಾರ್ಯಗಳ ಮಧ್ಯೆ, ಸುಭದ್ರಾಂಗಿಯನ್ನು ಮದುವೆಯಾದುದೇ ಮರೆತು ಹೋಗಿತ್ತು. ಒಂದು

ಏನ ಅವಳ ಕೈಗೆಲಸಕ್ಕೆ ಮೆಚ್ಚಿ, ಅವಳನ್ನು ಬಹುಮಾನಿಸಬೇಕೆಂದು ಬಯಸಿದನು. ಆಕೆಯು ಬಿಂದುಸಾರನನ್ನು ಮದುವೆಯಾಗಬೇಕೆಂದಳು. ತನ್ನ ಕೂದಲು ಕತ್ತರಿಸುವವಳನ್ನು ಮದುವೆಯಾಗಲು ಅರಸನು ಹಿಂಜರಿದನು. ಆಗ ಅವಳು ತನ್ನ ಕತೆಯನ್ನೆಲ್ಲ ಅವನಿಗೆ ಹೇಳಿಕೊಂಡಳು. ಬಿಂದುಸಾರನು ಅದು ಕೇಳಿ, ಸುಭದ್ರಾಂಗಿಯನ್ನು ಗುರುತಿಸಿ, ಅವಳನ್ನು ತನ್ನ ರಾಣಿಯಾಗಿ ಸ್ವೀಕರಿಸಿದನು.

ಕೊಂಚ ಕಾಲವಾದಮೇಲೆ ಆಕೆಗೆ ಒಬ್ಬ ಮಗನು ಜನಿಸಿದನು. ಆ ಮಗು ಹುಟ್ಟುವಾಗ ತಾಯಿಗೆ ಕೊಂಚವೂ ಕಷ್ಟವಾಗದೆ ಇದ್ದುದಕ್ಕಾಗಿ ಅದಕ್ಕೆ ಅಶೋಕ ಎಂದು ಹೆಸರಿಟ್ಟರು. ಅದಾದಮೇಲೆ ಎರಡನೆಯ ಮಗುವನ್ನು ಹೆರುವಾಗಲೂ ನೋವು ಕಾಣಿಸದಿರಲು, ಆ ಮಗುವಿಗೆ ವೀತಶೋಕನೆಂದು ಹೆಸರಿಟ್ಟರು.

## ಅಶೋಕನು ಚಕ್ರವರ್ತಿಯಾದುದು

ಬಿಂದುಸಾರನಿಗೆ ಅನೇಕ ಮಕ್ಕಳಿದ್ದರು. ಅವರಲ್ಲಿ ಅಶೋಕನ ಮೈ ಕೋಮಲವಾಗಿರಲಿಲ್ಲ, ಒರಟಾಗಿತ್ತು. ಅದರಿಂದ ಬಿಂದುಸಾರನು ಅವನನ್ನು ಹೆಚ್ಚಾಗಿ ಪ್ರೀತಿಸುತ್ತಿರಲಿಲ್ಲ. ಒಂದು ಸಲ ಬಿಂದುಸಾರನು, ತಾನಾದಮೇಲೆ ತನ್ನ ಮಕ್ಕಳಲ್ಲಿ ಯಾರು ಪಟ್ಟಕ್ಕೆ ಬರುವರೋ ಪರೀಕ್ಷಿಸಬೇಕೆಂದು, ಅವರನ್ನು ಕರೆದುಕೊಂಡು ಪಿಂಗಳ ವತ್ಸಾಜೀವನೆಂಬ ಬೌದ್ಧ ಸನ್ಯಾಸಿಯ ಬಳಿ ಹೋದನು. ಅಶೋಕನೇ ರಾಜನಾಗತಕ್ಕವನೆಂದು ವತ್ಸಾಜೀವನಿಗೆ ತಿಳಿಯಿತು. ಆದರೂ ನಿಜ ಹೇಳಿದರೆ ಅರಸನಿಗೆ ಸಂತೋಷವಾಗದೆಂದು ಅವನಿಗೆ ಗೊತ್ತಿತ್ತು. ಅದಕ್ಕಾಗಿ

"ಈ ಕುಮಾರರಲ್ಲಿ ಯಾರಿಗೆ ಅತ್ಯುತ್ತಮವಾದ ವಾಹನ, ಪೀಠ, ಆಹಾರ, ಪಾನೀಯ, ಪಾತ್ರೆಗಳಿವೆಯೋ ಅವನೇ ಚಕ್ರವರ್ತಿಯಾಗುವನು" ಎಂದು ಪಿಂಗಳನು ಹೇಳಿದನು.

ಪಿಂಗಳನು ಹೇಳಿದುದೆಲ್ಲವೂ ಅಶೋಕನಿಗೆ ಸರಿಯಾಗಿ ಹೊಂದಿತ್ತು. ಅವನು ಬರುವಾಗ ಆನೆಯೇರಿ ಬಂದಿದ್ದನು. ಬರುವಾಗ ತಾಯಿಯು ಕಟ್ಟಿಕೊಟ್ಟ ಮೊಸರನ್ನವನ್ನು ಮಣ್ಣಿನ ಪಾತ್ರೆಯಲ್ಲಿಟ್ಟು ತಿಂದು, ನೀರು ಕುಡಿದಿದ್ದನು. ಭೂಮಿಯೇ ಅವನ ಆಸನವಾಗಿತ್ತು. ಪಿಂಗಳನು ಅಶೋಕನನ್ನು ಉದ್ದೇಶಿಸಿ ಹೇಳಿದನೆಂದು ಬಿಂದುಸಾರನಿಗೆ ತಿಳಿಯಲಿಲ್ಲ.

ಕೊಂಚ ಕಾಲದಮೇಲೆ, ಬಿಂದುಸಾರನು ಒಂದು ದಂಗೆಯನ್ನಡಗಿಸಲು ತಕ್ಷಶಿಲೆಗೆ ಹೋಗಬೇಕಾಯಿತು. ತಾನು ಹೋಗದೆ ತನ್ನ ಮಗ ಅಶೋಕನನ್ನು ಕಳುಹಿಸಿದನು. ಅಶೋಕನು ಅನಾಯಾಸವಾಗಿ ತಕ್ಷಶಿಲೆಯನ್ನು ವಶಪಡಿಸಿಕೊಂಡನು. ಅದೇ ಸಮಯದಲ್ಲಿ ಶ್ವಶಸ್ ರಾಜ್ಯವನ್ನೂ ಜಯಿಸಿದನು. ವಿಜಯಿಯಾಗಿ ತಂದೆಯ ಬಳಿಗೆ ಹಿಂದಿರುಗಿದನು.

ಇನ್ನೊಂದು ದಿವಸ, ಬಿಂದುಸಾರನ ಪ್ರಿಯಪುತ್ರನಾದ ಸುಸೀಮನು ಖಲ್ಲಾತಕನೆಂಬ ಮಂತ್ರಿಯಮೇಲೆ ತನ್ನ ಕೈಚೀಲವನ್ನು ಹುಡುಗಾಟಕ್ಕೆ ಎಸೆದನು. ಖಲ್ಲಾತಕನು "ಇಂದು ಕೈಚೀಲವನ್ನು ಬಿಸುಟವನು ಅರಸಾದಮೇಲೆ ಧರ್ಮವನ್ನೂ ಬಿಸುಡಲು ಹೇಸನು. ಅದರಿಂದ ಇವನು ಅರಸಾಗದಂತೆ ನೋಡಿಕೊಳ್ಳಬೇಕು" ಎಂದು ಯೋಚಿಸಿದನು. ಅಶೋಕನೇ ಚಕ್ರವರ್ತಿಯಾಗತಕ್ಕವನೆಂದು ಪಿಂಗಳನ ಮಾತಿನಿಂದ ಅವನಿಗೆ ಗೊತ್ತಾಗಿತ್ತು. ಅದೆಲ್ಲವನ್ನೂ ಮಿಕ್ಕ ಮಂತ್ರಿಗಳಿಗೆ ತಿಳಿಸಿದನು. ಎಲ್ಲರೂ ಅಶೋಕನ ಕಡೆ ಬಂದರು.

ಅಷ್ಟರಲ್ಲಿ ತಕ್ಷಶಿಲೆಯವರು ಪುನಃ ದಂಗೆಯೆದ್ದರು. ಅವರನ್ನು ಅಡಗಿಸಲು ಸುಸೀಮನು ಹೋಗಿ ಸೋತು ಹೋದನು. ಅತ್ತ ಪಾಟಲೀಪುತ್ರದಲ್ಲಿ ಬಿಂದುಸಾರನಿಗೆ ಮರಣ ಸಮೀಪಿಸಿತ್ತು. ಸಾಯುವ ಮುಂಚೆ ಸುಸೀಮನಿಗೆ ಪಟ್ಟಕಟ್ಟಿ, ಅಶೋಕನನ್ನು ತಕ್ಷಶಿಲೆಯಲ್ಲಿ ನಿಲ್ಲಿಸಬೇಕೆಂದು ಅವನ ಮನಸ್ಸು. ಆದರೆ ಸುಸೀಮನು ಇನ್ನೂ ಹಿಂದಿರುಗಿರಲಿಲ್ಲ. ಮಂತ್ರಿಗಳು ಅಶೋಕನಿಗೆ ರಾಜವೇಷವನ್ನು ತೊಡಿಸಿ "ಈಗ ಅಶೋಕನನ್ನು ಸಿಂಹಾಸನಕ್ಕೇರಿಸಿ. ಸುಸೀಮನು ಬಂದಮೇಲೆ ಅವನಿಗೆ ಪಟ್ಟಕಟ್ಟೋಣ" ಎಂದರು. ಬಿಂದುಸಾರನು ಉರಿದುಬಿದ್ದನು. ಆಗ ಅಶೋಕನು "ನಾನು ಚಕ್ರವರ್ತಿಯಾಗುವುದು ನಿಜವಾದರೆ ದೇವತೆಗಳು ನನಗೆ ಕಿರೀಟವಿಡಲಿ" ಎಂದನು. ದೇವತೆಗಳು ಅವನ ತಲೆಯಮೇಲೆ ಕಿರೀಟವಿಟ್ಟರು. ಬಿಂದುಸಾರನು ಅದ ಕಂಡು, ರಕ್ತ ಕಕ್ಕುತ್ತ ಪ್ರಾಣಬಿಟ್ಟನು.

ಅಶೋಕನಿಗೆ ಪಟ್ಟವಾದುದು ಸುಸೀಮನಿಗೆ ತಿಳಿಯಿತು. ಅಶೋಕನನ್ನು ಧ್ವಂಸಮಾಡಬೇಕೆಂದು ಅವನು ರೋಷದಿಂದ ಪಾಟಲೀಪುರಕ್ಕೆ ಓಡಿಬಂದನು. ಪಟ್ಟಣದ ಸುತ್ತ ಒಳ್ಳೆಯ ಕಾವಲಿತ್ತು. ನಗರದ ಮಹಾದ್ವಾರದ ಮುಂದೆ ಮಂತ್ರಿಗಳು ದೊಡ್ಡ ಹಳ್ಳ ತೆಗೆದು, ಅದರಲ್ಲಿ ಕೆಂಡ ತುಂಬಿ, ಮುಚ್ಚಿದ್ದರು. ಸುಸೀಮನು ನುಗ್ಗಿ ಬರುತ್ತ, ಬರುವ ಕೋಪದಲ್ಲಿ ಕಣ್ಣುಕಾಣದ ಆ ಹಳ್ಳಕ್ಕೆ ಬಿದ್ದು ಭಸ್ಮವಾದನು. ಅಶೋಕನು ನಿರಾತಂಕನಾಗಿ ಚಕ್ರವರ್ತಿಯಾದನು.

**ಅಶೋಕನು ಬೌದ್ಧನಾದುದು**

ಬೌದ್ಧನಾಗುವ ಮೊದಲು ಅಶೋಕನನ್ನು ಚಂಡಾಶೋಕ

ನೆಂದೂ, ಬೌದ್ಧನಾದಮೇಲೆ ಧರ್ಮಾಶೋಕನೆಂದೂ, ಬೌದ್ಧರ ಕತೆಗಳು ಕರೆದು ವರ್ಣಿಸುತ್ತವೆ. ಎಂದರೆ, ಬೌದ್ಧನಾಗುವ ಮುಂಚೆ ಆತನು ಅನೇಕ ಹಿಂಸೆ ಹತ್ಯೆಗಳನ್ನು ಮಾಡುತ್ತಿದ್ದನೆಂದೂ, ಬೌದ್ಧನಾದಮೇಲೆ ಧರ್ಮಕಾರ್ಯಗಳಲ್ಲಿಯೇ ನಿರತನಾದನೆಂದೂ ಆ ಕತೆಗಳು ಹೇಳುತ್ತವೆ. ಬೌದ್ಧನಾದಮೇಲೆ ಅಶೋಕನು ಅನೇಕ ಧರ್ಮಕಾರ್ಯಗಳನ್ನು ಬಹು ಶ್ರದ್ಧೆಯಿಂದ ಮಾಡಿದುದು ಸತ್ಯ. ಆದರೆ ಕತೆಗಳು ಹೇಳುವಂತೆ, ಅದಕ್ಕೆ ಮುಂಚೆ ಅವನು ತನ್ನ ತಮ್ಮಂದಿರನ್ನೂ ಅಂತಃಪುರದ ಸ್ತ್ರೀಯರನ್ನೂ ಅನೇಕ ಮಂತ್ರಿಗಳನ್ನೂ ಕೊಲ್ಲಿಸಿದನೆಂದು ಹೇಳುವುದಕ್ಕೆ ಏನೇನೂ ಆಧಾರವಿಲ್ಲ. ಆ ಕತೆಗಳೆಲ್ಲ ಬೌದ್ಧಧರ್ಮದ ಹೆಚ್ಚುಗೆಯನ್ನು ತೋರಿಸುವುದಕ್ಕೋಸ್ಕರ ಬರೆದುವು. ಆದರೂ ಪಟ್ಟಾಭಿಷೇಕವಾದ ಐದು ವರುಷದಮೇಲೆ ಅಶೋಕನು ಬೌದ್ಧನಾದನು. ಅದನ್ನು ಅವನೇ ಹೇಳಿಕೊಂಡಿದ್ದಾನೆ. ತಾನು ಬೌದ್ಧನಾದುದಕ್ಕೆ ಕಾರಣ ಮಾತ್ರ ಹೇಳಿಕೊಂಡಿಲ್ಲ. ಅಶೋಕನ ವಿಷಯವಾಗಿ ರೂಢಿಯಲ್ಲಿರುವ ಅನೇಕ ಕತೆಗಳಲ್ಲಿ, ಆತನು ಬೌದ್ಧನಾದ ಸಂದರ್ಭವನ್ನು ತಿಳಿಸುವ ಈ ಕೆಳಗಿನ ಕತೆಯೂ ಒಂದು.

ಅಶೋಕನು ಬಹು ಕ್ರೂರಿಯಾಗಿದ್ದನು. ಅನೇಕಸಲ ಜನರನ್ನು ತಾನೇ ಹಿಂಸಿಸುತ್ತಿದ್ದನು. ಅವನ ಮಂತ್ರಿಗಳು ಅದು ಕಂಡು, ಅಂತಹ ಹಿಂಸೆಗಳನ್ನು ದೊರೆಯು ತಾನೇ ಮಾಡಬಾರದೆಂದೂ, ಅದಕ್ಕಾಗಿ ಒಬ್ಬ ಹಿಂಸಕನನ್ನು ನೇಮಿಸಬೇಕೆಂದೂ ಸೂಚಿಸಿದರು. ಅಂತಹ ಕೆಲಸಕ್ಕೆ ತಕ್ಕವನೊಬ್ಬನು ಪಾಟಲೀಪುರದ ಸಮೀಪದಲ್ಲಿಯೇ ಇದ್ದನು. ಅವನ ಹೆಸರು

ಚಂಡಗಿರಿಕ. ಅವನಿಗೆ ಜೀವಿಗಳ ಪ್ರಾಣ ತೆಗೆಯುವುದೇ ಆಟ ವಾಗಿತ್ತು. ದೊರೆಯು ಹಿಂಸಕನ ಕೆಲಸಕ್ಕೆ ಅವನನ್ನೇ ಆರಿಸಿ ದನು. ಊರ ನಡುವೆ ಒಂದು ಸೊಗಸಾದ ತೋಟ ಬೆಳೆಸಿ ಅಲ್ಲಿ ಗಿರಿಕನನ್ನು ನಿಲಿಸಿದನು. ಆ ತೋಟಕ್ಕೆ ಬಂದವರನ್ನೆಲ್ಲಾ ದಾಕ್ಷಿಣ್ಯವಿಲ್ಲದೆ ಕೊಲ್ಲಬೇಕೆಂದು ಗಿರಿಕನಿಗೆ ಆಜ್ಞೆಯಾಯಿತು. ಗಿರಿಕನಿಗೆ ಬಹು ಸಂತೋಷವಾಯಿತು. ದೊರೆಯ ಆಜ್ಞೆಗೆ ಎಳ್ಳಷ್ಟು ತಪ್ಪದೆ ನಡೆಯುತ್ತಿದ್ದನು.

ಒಂದುಸಲ ಸಮುದ್ರನೆಂಬ ಬೌದ್ಧ ಸಂನ್ಯಾಸಿಯು ಊರಿಂದ ಊರು ಸಂಚರಿಸುತ್ತ ಪಾಟಲೀಪುರಕ್ಕೆ ಬಂದನು. ಬಂದು, ಅರಿಯದೆ ಗಿರಿಕನ ವನವನ್ನು ಹೊಕ್ಕನು. ಅಲ್ಲಿಯ ಶಿಕ್ಷೆಗಳನ್ನು ಕಂಡು ಅಸಹ್ಯಪಟ್ಟು ಹೊರಗೆ ಬರಲೆತ್ನಿಸಿದರೆ, ಗಿರಿಕನು ಬಿಡಲಿಲ್ಲ. ಆಗ ತನ್ನ ಮರಣಕಾಲವು ಸಮೀಪಿಸಿ ತೆಂದು ಸಮುದ್ರನಿಗೆ ತಿಳಿಯಿತು. ಚಂಡಗಿರಿಕನಿಂದ ಒಂದು ವಾರದ ಅವಧಿ ಪಡೆದು, ಸಮುದ್ರನು ಬುದ್ಧಗುರುವನ್ನು ಧ್ಯಾನ ಮಾಡುತ್ತ ಕುಳಿತನು. ಎಂದಾದರೂ ಒಂದು ದಿನ ಸಾಯಲೇ ಬೇಕೆಂದು ಮನಸ್ಸನ್ನು ಸ್ತಿಮಿತಕ್ಕೆ ತಂದು, ಒಂದೇ ಮನಸ್ಸಿನಿಂದ ಬುದ್ಧನನ್ನು ನೆನೆದನು. ಹೀಗೆ ಆರು ದಿವಸ ಧ್ಯಾನಮಾಡಿ, ಮಳನೆಯ ದಿವಸ ಸಾಯಲು ಸಿದ್ಧನಾದನು.

ವನದ ನಡುವೆ ಒಂದು ಒಲೆ ಉರಿಯುತ್ತಿತ್ತು- ಧಗ ಧಗನೆ ಉರಿಯುತ್ತಿದ್ದ ಒಲೆಯಮೇಲೆ ಕೊಪ್ಪರಿಗೆಯಲ್ಲಿ ನೀರು ಕುತಕುತನೆ ಕುದಿಯುತ್ತಿತ್ತು. ಗಿರಿಕನು ಸಮುದ್ರನನ್ನು ಆ ನೀರಿಗೆ ಎಸೆದನು. ಒಲೆಗೆ ಇನ್ನೂ ಉರಿ ಹಾಕಿ ನೀರು ಕುದಿಸಿ ದನು. ಸಮುದ್ರನಿಗೆ ಕೊಂಚವೂ ಬಿಸಿ ತಾಗಲಿಲ್ಲ. ಶೀತಲ

ವಾದ ಜಲದಲ್ಲಿದ್ದಂತೆ ಅವನಿಗೆ ಹಿತವಾಗಿತ್ತು. ಆರು ದಿವಸ ಧ್ಯಾನಮಾಡಿ ಸಮುದ್ರನ ಮೈ ಮನಸುಗಳು ಪರಿಶುದ್ಧವಾಗಿದ್ದುವು. ಅವನು ಮಹಾಪುರುಷನಾಗಿದ್ದನು. ಅದರಿಂದ ಬೆಂಕಿ ಅವನನ್ನು ಸುಡಲಿಲ್ಲ. ಆ ಕೊಪ್ಪರಿಗೆಯಲ್ಲಿ ಒಂದು ಸಹಸ್ರದಳ ಕಮಲವು ಹುಟ್ಟಿ, ಅವನನ್ನು ತನ್ನಮೇಲೆ ಕುಳ್ಳಿರಿಸಿಕೊಂಡಿತು. ಅದು ಕಂಡು ಗಿರಿಕನಿಗೆ ಬಹು ಆಶ್ಚರ್ಯವೂ ಭಯವೂ ಉಂಟಾಯಿತು. ಬೇಗನೆ ಓಡಿ, ಎಲ್ಲ ಸಮಾಚಾರಗಳನ್ನೂ ಅಶೋಕನಿಗೆ ತಿಳಿಸಿದನು.

ಗೌತಮ ಬುದ್ಧನ ಹಿಂದೆ ಕಾಶ್ಯಪ ಬುದ್ಧನೆಂಬ ಹೆಸರಿನಿಂದ ಹುಟ್ಟಿದ್ದನು. ಆ ಕಾಲದಲ್ಲಿ ಅಶೋಕನು ಒಬ್ಬ ಕುರುಬರ ಹುಡುಗನಾಗಿ ಜನಿಸಿದ್ದನು. ಆಗ ಒಂದು ದಿನ ಕಾಶ್ಯಪ ಬುದ್ಧನು ಭಿಕ್ಷೆಗೆ ಹೊರಟು, ದಾರಿಯಲ್ಲಿ ಸಿಕ್ಕಿದ ಆ ಕುರುಬನನ್ನೂ ಭಿಕ್ಷೆ ಬೇಡಿದನು. ಹುಡುಗನ ಹತ್ತಿರ ಏನೂ ಇರಲಿಲ್ಲ. ಆದರೂ ಇಲ್ಲವೆನ್ನಲು ಮನಸ್ಸು ಬಾರದೆ, ಬುದ್ಧನಿಗೆ ಒಂದುಹಿಡಿ ಮಣ್ಣು ಕೊಟ್ಟನು. ಬುದ್ಧನು ಅದನ್ನು ಸ್ವೀಕರಿಸಿ "ಈ ದಿನ ದಾನ ಕೊಟ್ಟುದರ ಫಲವಾಗಿ ನೀನು ಮುಂದೆ ಜಂಬೂ ದ್ವೀಪದ ಚಕ್ರವರ್ತಿಯಾಗುವೆ. ಅಶೋಕನೆಂಬ ಹೆಸರಿನಿಂದ ಬುದ್ಧನ ಧರ್ಮವನ್ನು ಅನುಸರಿಸುವೆ" ಎಂದು ಆ ಕುರುಬನನ್ನು ಅನುಗ್ರಹಿಸಿದನು. ಅದರ ಫಲವಾಗಿಯೆ ಕುರುಬನು ಈಗ ಅಶೋಕನೆಂಬ ಚಕ್ರವರ್ತಿಯಾಗಿದ್ದನು. ಅವನ ಅಂದಿನ ಪುಣ್ಯ ಪಕ್ವವಾಗಿ, ಬುದ್ಧನ ಧರ್ಮವನ್ನು ಅನುಸರಿಸುವ ಕಾಲವೂ ಬಂದಿತ್ತು.

ಗಿರಿಕನು ಹೇಳಿದುದನ್ನು ಅಶೋಕನು ನಂಬಲಾರದೆ ಹೋದನು. ಕಣ್ಣಾರೆ ನೋಡಬೇಕೆಂದು ತಾನೇ ಆ ವನಕ್ಕೆ

ಒಂದನು. ಅಶೋಕನು ಬೌದ್ಧನಾಗುವ ಕಾಲ ಬಂದಿತೆಂದು ಸಮುದ್ರನಿಗೆ ತಿಳಿದಿತ್ತು. ಅವನ ಗಮನವನ್ನು ತನ್ನ ಕಡೆಗ ತಿರುಗಿಸಲೋಸುಗ ಸಮುದ್ರನು ಅನೇಕ ಅದ್ಭುತ ಶಕ್ತಿಗಳನ್ನು ತೋರಿಸಿದನು. ಕೊಪ್ಪರಿಗೆಯಿಂದ ಎದ್ದು ಆಕಾಶದಲ್ಲಿ ಹಂಸ ದಂತೆ ಹಾರಿದನು. ಅವನ ದೇಹದ ಒಂದು ಕಡೆಯಿಂದ ಬೆಂಕಿ ಯೂ ಇನ್ನೊಂದು ಕಡೆಯಿಂದ ನೀರೂ ನೆಗೆದು ಧುಮುಕಿತು. ಸಮುದ್ರನ ಉದ್ದೇಶ ಸಫಲವಾಯಿತು. ಅಶೋಕನಿಗೆ ಸಮು ದ್ರನ ಅದ್ಭುತಶಕ್ತಿ ಕಂಡು ಆಶ್ಚರ್ಯವಾಗಿ, ಭಕ್ತಿ ಹುಟ್ಟಿತು. ಕೈ ಮುಗಿದುಕೊಂಡು ಅವನ ಕ್ಷಮೆ ಬೇಡಿದನು.

ಸಮುದ್ರನು ಅವನ ಮಾತನ್ನು ಮನ್ನಿಸಿದನು. ಮನ್ನಿಸಿ, "ಅಶೋಕ ರಾಜ! ನಾನು ಬುದ್ಧದೇವನ ಧರ್ಮವನ್ನು ಅನುಸ ರಿಸುವ ಸಂನ್ಯಾಸಿ. ಹಿಂದೆ ಕಾಶ್ಯಪ ಬುದ್ಧನು ನೀನು ಚಕ್ರವ ರ್ತಿಯಾಗಿ ಬೌದ್ಧ ಧರ್ಮವನ್ನು ಕೈಕೊಳ್ಳುವೆಯೆಂದು ಅನುಗ್ರ ಹಿಸಿದ್ದನು. ಗೌತಮ ಬುದ್ಧನು ಕೂಡ, ತಾನು ಸತ್ತ ನೂರು ವರ್ಷದಮೇಲೆ ಅಶೋಕನೆಂಬ ಚಕ್ರವರ್ತಿಯು ಧರ್ಮದಿಂದ ರಾಜ್ಯವಾಳುವನು, ಎಂದು ನುಡಿದನು. ಆದರೆ ನೀನು ಭೂಮಿ ಯಲ್ಲಿಯೇ ಇಂತಹ ನರಕವನ್ನು ಕಟ್ಟಿ, ಬಹಳವಾಗಿ ಜೀವಹತ್ಯೆ ಮಾಡುತ್ತಿರುವೆ. ರಾಜ! ಬುದ್ಧರ ಮಾತನ್ನು ನೆನೆ. ಕೊಲೆಯ ಕ್ರಿಯನ್ನು ತಡೆ. ದಯಾಮೂಲವಾದ ಧರ್ಮವನ್ನು ಸ್ವೀಕರಿಸು. ಧರ್ಮದಿಂದ ರಾಜ್ಯವಾಳಿ, ಎಲ್ಲರನ್ನೂ ಕರುಣೆಯಿಂದ ಕಾಣು. ಅಧರ್ಮವನ್ನು ಬಿಟ್ಟು, ಧರ್ಮವನ್ನೇ ಆಚರಿಸು" ಎಂದನು.

ಹೀಗೆಂದ ಸಮುದ್ರನ ಮಾತು ಕೇಳಿ, ಅಶೋಕನ ಮನ ಸ್ಸು ಕಲಕಿಹೋಯಿತು. ಮತ್ತೆ ಎಂದೆಂದೂ ಯಾರಿಗೂ ಹಿಂಸೆ

ಮಾಡುವುದಿಲ್ಲವೆಂದು ವಾಗ್ದಾನ ಮಾಡಿದನು. ಹಿಂದಿನದಕ್ಕೆ ಪರಿತಪಿಸಿ, ಸಮುದ್ರನಿಂದ ಉಪದೇಶ ಪಡೆದು, ಅಶೋಕನು ಬೌದ್ಧನಾದನು. ಅಂದಿನಿಂದ ಅಶೋಕನ ರಾಜ್ಯದಲ್ಲಿ ಕೊಲೆಯು ಸದರೇ ನಿಂತುಹೋಯಿತು. ಪ್ರಜೆಗಳ ಹಿತಚಿಂತನೆಯೊಂದೇ ಅರಸನ ಕರ್ತವ್ಯವಾಯಿತು. ಅದುವರೆಗೆ ಚಂಡಾಶೋಕನೆನಿಸಿ ಕೊಂಡಿದ್ದವನು ಅಂದಿನಿಂದ ಧರ್ಮಾಶೋಕನಾದನು.

ಅಶೋಕನು ಬೌದ್ಧನಾದುದು ಹೇಗೆಂದು ಬೌದ್ಧರು ಕತೆ ಹೇಳುವರು.

---

# ಯುದ್ಧವಾದ ಮೇಲೆ

**ಕಳಿಂಗ ಯುದ್ಧ:—**

ಅಶೋಕನು ತಾನು ಬೌದ್ಧನಾದನಷ್ಟೆ. ಬೌದ್ಧನಾದ ಎರಡು ವರ್ಷದಮೇಲೆ ಅವನು ಕಳಿಂಗ ರಾಜ್ಯದೊಡನೆ ಯುದ್ಧ ಮಾಡಬೇಕಾಯಿತು. ಅದುವರೆಗೆ ಅಶೋಕನು ಯುದ್ಧವೆಂಬುದನ್ನೇ ಕಂಡಿರಲಿಲ್ಲ. ಆ ಮೊದಲ ಯುದ್ಧವನ್ನು ಕಂಡು ಅವನು ಪೇಸಿದನು. ಯುದ್ಧದಿಂದ ಆದ ಅನರ್ಥ ಪರಂಪರೆಯನ್ನು ಕಂಡು ಬಹು ಸಂಕಟಪಟ್ಟನು. ತನ್ನ ಕ್ರೌರ್ಯವನ್ನು ಕಂಡು ಅವನಿಗೇ ಅನುತಾಪ ಹುಟ್ಟಿತು. ಅಲ್ಲಿಂದ ಮುಂದೆ ಪುನಃ ಯುದ್ಧ ಮಾಡುವುದಿಲ್ಲವೆಂದು ಮನಸ್ಸು ಮಾಡಿದನು. ತಾನು ಬೌದ್ಧ ಧರ್ಮದಲ್ಲಿ ಕಲಿತ ಅಹಿಂಸೆ, ದಯೆ, ಕರುಣೆ, ಪ್ರೇಮ ಮುಂತಾದ ಸದ್ಗುಣಗಳನ್ನು ಅವಲಂಬಿಸಿ ಪ್ರಜೆಗಳನ್ನು ಕಾಪಾಡಬೇಕೆಂದು ನಿಶ್ಚಯಿಸಿದನು. ಹೀಗೆ ಕಳಿಂಗ ಯುದ್ಧದಿಂದ ತನ್ನಲ್ಲಿ ಉಂಟಾದ ಬದಲಾವಣೆಯನ್ನು. ತಾನು ಬರೆಯಿಸಿದ ಅನೇಕ ಶಾಸನಗಳಲ್ಲಿ ಒಂದಾದ ಹದಿಮೂರನೆಯ ಶಿಲಾಶಾಸನದಲ್ಲಿ, ಅಶೋಕನೇ ಹೇಳಿಕೊಂಡಿದ್ದಾನೆ. ಆ ಶಾಸನದಲ್ಲಿ ಹೇಳುವ ಧರ್ಮಬೋಧೆಯನ್ನೇ ಎಲ್ಲಾ ಶಾಸನಗಳಲ್ಲಿಯೂ ಒತ್ತಿ ನುಡಿದಿದ್ದಾನೆ. ಹೀಗೆ ಪ್ರಜೆಗಳಲ್ಲಿ ಧರ್ಮವನ್ನು ಬೆಳೆಸುವುದಕ್ಕಾಗಿ ಬರೆಸಿದುದರಿಂದ ಆ ಶಾಸನಗಳನ್ನು "ಧರ್ಮಶಾಸನ" "ಧರ್ಮಲಿಪಿ" ಎಂದು ಕರೆದಿದ್ದಾನೆ. ಅಂತಹ ಮಹಾ ಪುಣ್ಯಕಾರ್ಯವನ್ನು ಕೈಕೊಂಡು, ಇತ್ತ ಪ್ರಜೆಗಳ ಅನುರಾಗವನ್ನೂ

ಅತ್ತ ದೇವತೆಗಳ ಪ್ರೀತಿಯನ್ನೂ ಸಂಪಾದಿಸಿ, ಅಶೋಕನು "ಪ್ರಿಯದರ್ಶಿ","ದೇವಾನಾಂ ಪ್ರಿಯ" ಎಂದು ಪ್ರಖ್ಯಾತನಾದನು. ಜನರಿಗೆ ನೋಡಲು ಬೇಕಾದವನಾದುದರಿಂದ "ಪ್ರಿಯದರ್ಶಿ" ಯಾದನು. ದೇವತೆಗಳಿಗೆ ಬೇಕಾದವನಾದುದರಿಂದ "ದೇವಾನಾಂ ಪ್ರಿಯ"ನಾದನು. ಹೀಗೆ ಎಲ್ಲ ಕಡೆಯೂ ಪ್ರಸಿದ್ಧಿ ಪಡೆದ ಅಶೋಕ ಮೌರ್ಯನ ೧೩ನೆಯ ಶಾಸನವನ್ನು ನೋಡೋಣ.

"ದೇವಾನಾಂ ಪ್ರಿಯ ಪ್ರಿಯದರ್ಶಿ ಪ್ರಭುವು ತನಗೆ ಅಭಿಷೇಕವಾದ ಎಂಟನೆಯ ವರ್ಷದಲ್ಲಿ ಕಳಿಂಗ ರಾಜ್ಯವನ್ನು ಜಯಿಸಿದನು. ಆಗ ದೇಶಬಿಟ್ಟು ಓಡಿಹೋದವರು ಒಂದೂವರೆ ಲಕ್ಷ; ಗಾಯ ಹೊಂದಿದವರು ಒಂದು ಲಕ್ಷ; ಸತ್ತವರು ಬಹಳ ಮಂದಿ.

"ಕಳಿಂಗರು ಸ್ವಾಧೀನರಾಗಿ ಈಗ. ದೇವಾನಾಂ ಪ್ರಿಯನ ಧರ್ಮಾಚರಣೆಯೂ, ಧರ್ಮಕಾಮತೆಯೂ, ಧರ್ಮಬೋಧೆಯೂ ಹೆಚ್ಚಾಗಿರುವುದು. ಇದು ಕಳಿಂಗರನ್ನು ಗೆದ್ದುದಕ್ಕೆ ಹುಟ್ಟಿದ ಅನುತಾಪದ ಫಲ. ಒಂದು ರಾಜ್ಯವನ್ನು ಗೆಲ್ಲುವಾಗ ಅನೇಕರು ಸಾಯುವರು, ಅನೇಕರಿಗೆ ಗಾಯವಾಗುವುದು, ಅನೇಕರು ದೇಶಬಿಟ್ಟು ಓಡುವರು. ಈ ಬಾಧೆಯನ್ನು ಕಂಡು ದೇವಾನಾಂ ಪ್ರಿಯನಿಗೆ ಸಂಕಟವಾಗುವುದು. ಅಲ್ಲದೆ ಗೆದ್ದ ದೇಶದಲ್ಲಿ ಅನೇಕ ಮತದವರು ಇರುವರು. ಹಿರಿಯರಿಗೆ ವಿಧೇಯರಾಗಿ. ತಂದೆ ತಾಯಿಗಳು ಹೇಳಿದಂತೆ ಕೇಳಿ, ಗುರುಗಳಲ್ಲಿ ಭಕ್ತಿಯಿಂದಿರುವವರು ಅನೇಕರುಂಟು. ಸ್ನೇಹಿತರು, ಪರಿಚಿತರು, ಜೊತೆಗಾರರು, ಗುಲಾಮರು, ಸೇವಕರು ಮುಂತಾದವರಲ್ಲಿ ದಯೆಯುಳ್ಳ ಗೃಹಸ್ಥರೂ ಭಿಕ್ಷುಗಳೂ ಬ್ರಾಹ್ಮಣರೂ ವಾಸಿಸುತ್ತಿರ.

ಷವು. ಅಂತಹವರಿಗೆ ನೋವಾದರೆ, ಅವರ ಕೊಲೆಯಾದರೆ. ಅವರಿಗೆ ಪ್ರಿಯ ಜನ ವಿಯೋಗವುಂಟಾದರೆ ದೇವಾನಾಂ ಪ್ರಿಯ ನಿಗೆ ಇನ್ನೂ ಸಂಕಟವಾಗುವುದು. ಆಗ ಕಳಿಂಗದಲ್ಲಿ ಹತರಾ ದವರ, ಪ್ರಾಣಬಿಟ್ಟವರ, ದೇಶಾಂತರಗತರಾದವರ ಸಂಖ್ಯೆಯಲ್ಲಿ ನೂರರಲ್ಲಿ ಒಂದು ಪಾಲು, ಸಾವಿರದಲ್ಲಿ ಒಂದು ಪಾಲು ಈಗ ಆದರೂ ದೇವಾನಾಂ ಪ್ರಿಯನಿಗೆ ಬಹು ಸಂಕಟವಾಗುವುದು.

"ಯಾರು ಏನೇ ಅನ್ಯಾಯ ಮಾಡಲಿ, ಕ್ಷಮಿಸಲಾಗುವು ದನ್ನು ಕ್ಷಮಿಸಬೇಕೆಂದು ದೇವಾನಾಂ ಪ್ರಿಯನ ಮತ. ತನ್ನ ರಾಜ್ಯಕ್ಕೆಸೇರಿದ ಕಾಡಿನ ನಿವಾಸಿಗಳನ್ನು ಕೂಡ ಪ್ರಿಯದರ್ಶಿಯು ಸಂತೈಸಿ ಧರ್ಮದ ದಾರಿಗೆ ತರುವನು. ಏಕೆಂದರೆ, ಯಾವ ಜೀವಿಗೂ ಬಾಧೆಯಾಗದೆ, ಎಲ್ಲರೂ ಮನಶ್ಶಾಂತಿ ಸಂತೋಷ ಗಳನ್ನು ಪಡೆಯಲೆಂಬುದೇ ದೇವಾನಾಂ ಪ್ರಿಯನ ಆಸೆ.

"ಧರ್ಮ ವಿಜಯವೇ ಮುಖ್ಯವಾದ ವಿಜಯ. ಇದು ತನ್ನ ರಾಜ್ಯದಲ್ಲಿ ಮಾತ್ರವಲ್ಲದೆ, ತನ್ನ ರಾಜ್ಯಕ್ಕೆ ಆರುನೂರು ಯೋಜನ ದೂರದ ಪ್ರಾಂತ ರಾಜ್ಯಗಳಲ್ಲಿ—ಎಂದರೆ ಯವನ ಪ್ರಭು ಅಂಟಿಯೋಕನ ರಾಜ್ಯ, ಅಂಟಿಯೋಕನ ಆಚೆಯ ತುರ ಮಾಯ, ಅಂತಿಕಿನಿ, ಮಕ ಮತ್ತು ಅಲಿಕ ಸುಂದರ ಎಂಬ ನಾಲ್ಕು ರಾಜರ ನಾಡಿನಲ್ಲಿಯೂ ತನ್ನ ವಿಜಯವನ್ನು ಪ್ರಿಯ ದರ್ಶಿಯು ಹಬ್ಬಿಸಿರುವನು. ದಕ್ಷಿಣದ ಚೋಳ ಪಾಂಡ್ಯ ಸಿಂಹ ಳಗಳಲ್ಲಿಯೂ, ನೊರೆಯ ರಾಜ್ಯದ ಯವನ, ಕಾಂಭೋಜ, ನಾಭಕ, ನಭಿತಿ, ಭೋಜ, ಪೈಟೇನಿಕ, ಪುಳಿಂದರಲ್ಲಿಯೂ ನೊರೆಯ ಧರ್ಮಾನುಶಾಸನೆಯು ಆಚರಣೆಯಲ್ಲಿದೆ. ನೊರೆಯ ದೂತರು ಹೋಗದ ರಾಜ್ಯದವರು ಕೂಡ ದೇವಾನಾಂ ಪ್ರಿಯನ

ಧರ್ಮಾಚರಣೆ, ಧರ್ಮವಿಧಾನ, ಧರ್ಮಾನುಶಾಸನಗಳನ್ನು ಕೇಳಿ, ತಾವಾಗಿಯೇ ಅವನ್ನು ಅನುಸರಿಸುವರು. ಇವರಿಂದ ಎಲ್ಲ ಕಡೆಯೂ ಬರುವ ಜಯವು ಪ್ರೀತಿಯಿಂದ ಕೂಡಿದುದು. ಈ ಧರ್ಮವಿಜಯದಿಂದ ಬರುವ ಪ್ರೀತಿಯು ಅಗಾಧವಾದುದು.

"ಹೊಸ ವಿಜಯವನ್ನು ಪಡೆಯಬೇಕೆಂದು ಆಶಿಸಬಾರದು. ಒಂದು ಹೊಸ ವಿಜಯವಾದರೆ ಶಾಂತಿಯನ್ನು ಹಿಡಿಯಬೇಕು. ಬಹುವಾಗಿ ದಂಡಿಸಬಾರದು. ಧರ್ಮವಿಜಯವೇ ಮಹಾವಿಜಯವೆಂದು ತಿಳಿಯಬೇಕು. ಇದು ನನ್ನ ಮಕ್ಕಳು ಮೊಮ್ಮಕ್ಕಳಿಗೆ ತಿಳಿಯಲೆಂದು ಈ ಧರ್ಮಲಿಪಿಯನ್ನು ಬರೆಸಲಾಗಿದೆ. ಇದು ಇಹಕ್ಕೂ ಒಳ್ಳೆಯದು, ಪರಕ್ಕೂ ಒಳ್ಳೆಯದು. ಧರ್ಮದಲ್ಲಿ ಪ್ರೀತಿಯಿಡುವುದೇ ಅವರ ಸಂತೋಷವಾಗಲಿ! ಅದೇ ಇಹಪರಗಳಲ್ಲಿ ಶ್ರೇಯಸ್ಸನ್ನು ಉಂಟುಮಾಡುವುದು."

## ಅಶೋಕನ ಧರ್ಮಬೋಧೆ

ಕಳಿಂಗ ಯುದ್ಧದಿಂದ ಹುಟ್ಟಿದ ಅನುತಾಪದ ಫಲವಾಗಿ ಅಶೋಕನು ಧರ್ಮಕ್ಕೆ ಹೆಚ್ಚು ಮನಸ್ಸು ಕೊಟ್ಟನು. ಬೌದ್ಧ ಸಂನ್ಯಾಸಿಗಳ ಜೊತೆಯಲ್ಲಿಯೇ ಇದ್ದು, ಬುದ್ಧದೇವನ ದಯಾಮೂಲವಾದ ಧರ್ಮವನ್ನು ಚೆನ್ನಾಗಿ ತಿಳಿದನು. ಆ ಧರ್ಮವನ್ನು ತಾನು ಆಚರಿಸಿದುದು ಮಾತ್ರವಲ್ಲದೆ, ಅದನ್ನು ತನ್ನ ಪ್ರಜೆಗಳೂ ಆಚರಿಸಲೆಂದು ಪ್ರಯತ್ನಿಸಿದನು. ಅದನ್ನು ಕುರಿತು ಒಂದು ಶಾಸನವನ್ನು ಬರೆಸಿದ್ದಾನೆ. ಅದಕ್ಕೆ ರೂಪನಾಥ ಶಾಸನವೆಂದು ಹೆಸರು.

"ದೇವಾನಾಂ ಪ್ರಿಯನು ಹೀಗೆ ಹೇಳುವನು. ನಾನು

ಶಾಕ್ಯನಾಗಿ ಎರಡೂವರೆ ವರುಷದ ಮೇಲಾಯಿತು. ಆದರೆ ನನಗೆ ಧರ್ಮದಲ್ಲಿ ಹೆಚ್ಚು ಶ್ರದ್ಧೆಯಿರಲಿಲ್ಲ. ಆದರೆ ನಾನು ಬೌದ್ಧ ಸಂನ್ಯಾಸಿಗಳ ಸಂಘಕ್ಕೆ ಸೇರಿ ಒಂದು ವರುಷದ ಮೇಲಾಯಿತು. ಈಗ ಧರ್ಮವಲ್ಲಿ ಬಹುವಾಗಿ ಶ್ರದ್ಧೆಯಿಂದ ನಡೆದಿರುವೆನು. ಹೀಗಾಗಿ ಹಿಂದೆ ದೇವತೆಗಳ ಸಂಗವಿಲ್ಲದ ಜಂಬೂ ದ್ವೀಪದ ಜನರು ಈಗ ದೇವತೆಗಳೊಡನೆ ಸೇರಿರುವರು. ಇದು ಧರ್ಮದಲ್ಲಿ ನಾನು ತೋರಿಸಿರುವ ಪರಾಕ್ರಮದ ಫಲ. ಇದು ದೊಡ್ಡವರಿಗೆ ಮಾತ್ರ ಸಿಕ್ಕುವುದೆಂದು ತಿಳಿಯಬಾರದು. ಅಲ್ಪನೂ ಪರಾಕ್ರಮದಿಂದ ನಡೆದರೆ, ಅವನಿಗೆ ವಿಶೇಷವಾದ ಸ್ವರ್ಗಸುಖವು ಸಿಕ್ಕುವುದು. ಅದರಿಂದ, ಅಲ್ಪರೂ ಅಧಿಕರೂ ಪರಾಕ್ರಮದಿಂದ ಧರ್ಮವನ್ನು ಆಚರಿಸಲೆಂದು ನಾನು ಹೇಳುವೆನು.

"ನನ್ನ ನೆರೆಯವರು ಕೂಡ ಈ ಬೋಧೆಯನ್ನು ಕಲಿಯಬೇಕು. ಮೇಲೆ ಹೇಳಿದ ಧರ್ಮಪರಾಕ್ರಮವು ಬಹುಕಾಲ ನಡೆಯಲಿ. ಈ ಪರಾಕ್ರಮವು ಹೆಚ್ಚುವುದರಲ್ಲಿ ಸಂದೇಹವಿಲ್ಲ. ಬಹುವಾಗಿ ಹೆಚ್ಚುವುದು. ಈಗಿನದಕ್ಕಿಂತ ಒಂದೂವರೆಯಷ್ಟು ಹೆಚ್ಚುವುದು.

"ಸಮಯ ಸಿಕ್ಕಿದಾಗಲೆಲ್ಲ ಇದನ್ನು ಪರ್ವತಗಳ ಮೇಲೆ ಬರೆಸಬೇಕು. ಪರ್ವತಗಳು ಇಲ್ಲದ ಕಡೆ ಕಲ್ಲುಕಂಭಗಳ ಮೇಲೆ ಬರೆಸಬೇಕು. ಈ ಶಾಸನದ ನುಡಿಯಂತೆ ನಡೆಸಲು ನಿಮ್ಮ ಪ್ರಾಂತಕ್ಕೆ ಒಬ್ಬೊಬ್ಬ ಅಧಿಕಾರಿಯನ್ನು ನೇಮಿಸಬೇಕು."

ಹೀಗೆ ತಾನು ಧರ್ಮದ ಅಭಿವೃದ್ಧಿಗೆ ಮಾಡುತ್ತಿದ್ದ ಪರಾಕ್ರಮವನ್ನು ಕುರಿತು, ತನ್ನ ಎಂಟನೆಯ ಶಿಲಾಶಾಸನದಲ್ಲಿ

ಅಶೋಕನು ಹೀಗೆ ಹೇಳಿದ್ದಾನೆ:

"ಹಿಂದೆ ದೊರೆಗಳು ವಿಹಾರಯಾತ್ರೆ ಹೋಗುತ್ತಿದ್ದರು. ಆಗ ಬೇಟೆಯೇ ಮುಂತಾದ ವಿನೋದಗಳು ಜರುಗುತ್ತಿದ್ದುವು. ದೇವಾನಾಂ ಪ್ರಿಯ ಪ್ರಿಯದರ್ಶಿ ಪ್ರಭುವು, ತಾನು ಪಟ್ಟಕ್ಕೆ ಬಂದ ಹತ್ತನೆಯ ವರ್ಷದಲ್ಲಿ ಸಂಬೋಧಿಗೆ ಹೋದನು. ಅಲ್ಲಿಂದ ಮುಂದೆ ಧರ್ಮಯಾತ್ರೆಗೆ ಮೊದಲು ಮಾಡಿದನು. ಆಗ ಭಿಕ್ಷುಗಳು ಬ್ರಾಹ್ಮಣರು ಮೊದಲಾದ ಅನೇಕ ಮಹಾತ್ಮರನ್ನು ದರ್ಶಿಸಿದನು. ಬಹುವಾಗಿ ದಾನಗಳನ್ನು ಕೊಟ್ಟನು. ನಾಡಿನ ಜನರನ್ನು ಕಂಡು ವಿಚಾರಿಸಿದನು. ಧರ್ಮವನ್ನು ತಾನು ಕೇಳಿ ತಿಳಿದುಕೊಂಡುದಲ್ಲದೆ, ಧರ್ಮವನ್ನು ಪ್ರಕಟಪಡಿಸಿದನು. ದೇವಾನಾಂ ಪ್ರಿಯ ಪ್ರಿಯದರ್ಶಿ ಪ್ರಭುವಿಗೆ ಈ ಸೆಟ್ಟಿನ ಭಾಗ್ಯದಿಂದ ಬಹಳ ಆನಂದವಾಗುವುದು."

ಅದೇ ಸಮಯದಲ್ಲಿ ತನ್ನ ಜನರ ಹಿತಸುಖಗಳಿಗಾಗಿ ಮತ್ತೊಂದು ಧರ್ಮಲಿಪಿಯನ್ನು ಬರೆಸಿದನು. ಅದನ್ನು ಭಬ್ರು ಶಿಲಾಶಾಸನವೆಂದು ಕರೆಯುತ್ತಾರೆ. ಆ ಶಾಸನವು ಅಶೋಕನ ರಾಜ್ಯದಲ್ಲಿನ ಬೌದ್ಧ ಸಂನ್ಯಾಸಿಗಳನ್ನು ಕುರಿತು ಬರೆದುದು. "ಆರ್ಯ ಬುದ್ಧನು ಹೇಳಿರುವುದೆಲ್ಲ ಸುಭಾಷಿತವು. ಆದರೆ, ಸದ್ಧರ್ಮವು ಚಿರವಾಗಿರಲಿ ಎಂದು ಆ ಬುದ್ಧವಚನವಲ್ಲಿ ನಾನು ಕೆಲವನ್ನು ಆರಿಸಿರುವೆನು" ಎಂದು ಹೇಳಿ, ಸತ್ಯ, ದಯೆ, ದಾನ, ಅಹಿಂಸೆ ಮುಂತಾದ ಸದ್ಗುಣಗಳನ್ನು ಬೋಧಿಸುವ ಭಾಗಗಳನ್ನು ಬುದ್ಧನ ಉಪದೇಶಗಳಿಂದ ಆರಿಸಿದನು. ಆರಿಸಿ, "ಭಿಕ್ಷುಗಳೂ ಭಿಕ್ಷುಣಿಯರೂ ಈ ವಚನಗಳನ್ನು ಕಿವಿಯಾರೆ ಕೇಳಿ ಮನನ ಮಾಡಬೇಕು. ಗಂಡಸರು ಹೆಂಗಸರೆನ್ನದೆ ನನ್ನ ಪ್ರಜೆಗಳೆಲ್ಲರೂ

ಇದೇ ರೀತಿ ಆಚರಿಸಬೇಕು" ಎಂದು ಕೋರಿದನು.

**ಕಳಿಂಗ ಶಾಸನಗಳು**

ಹೀಗಿರಲು, ಕಳಿಂಗವನ್ನು ಗೆದ್ದು ಮೂರು ವರ್ಷವಾ ಗುತ್ತ ಬಂತು. ಆ ಮೂರು ವರ್ಷಗಳ ಕಾಲ, ಅಶೋಕನು ತಾನು ಗೆದ್ದ ಕಳಿಂಗದವರನ್ನೂ ತನ್ನ ಪ್ರಜೆಗಳಂತೆಯೇ ಕಾಪಾ ಡುತ್ತಿದ್ದನು. ಅವರ ಭಯವನ್ನು ಹೋಗಲಾಡಿಸಿ, ಅವರ ಏಳ್ಗೆಗಾಗಿ ಬಹಳ ಕೆಲಸ ಮಾಡಿದನು. ಆ ತನ್ನ ಪ್ರಯತ್ನಗಳನ್ನು ಕುರಿತು ಎರಡು ಶಾಸನ ಬರೆಸಿ, ಅವುಗಳನ್ನು ಕಳಿಂಗರಾಜ್ಯದ ಸ್ಥಳಗಳಲ್ಲಿ ನಿಲಿಸಿದನು. ಆ ಶಾಸ ನಗಳಲ್ಲಿ ಪ್ರಜೆಗಳಿಗೆ ಅರಸನ ಅಭಯವು ನಿರೂಪಿತವಾಗಿತ್ತು. ಅಲ್ಲದೆ, ರಾಜ್ಯದ ಮೇಲುವಿಚಾರಣೆಗಾಗಿ ನಿಯಮಿತರಾಗಿದ್ದ 'ನಗರ ವ್ಯಾವಹಾರಕ ಮಹಾಮಾತ್ರ'ರೆಂಬ ಅಧಿಕಾರಿಗಳ ಕರ್ತವ್ಯವೂ ಅದರಲ್ಲಿ ಬರೆಯಲಾಗಿತ್ತು.

ಆ ಎರಡು ಶಾಸನಗಳಲ್ಲಿ ಧೌಲಿಯ ಶಾಸನದ ಸಾರವಿದು:

"ದೇವಾನಾಂಪ್ರಿಯನ ಮಾತಿನಂತೆ ತೋಸಲಿಯ ನಗರ ವ್ಯಾವಹಾರಕ ಮಹಾಮಾತ್ರರಿಗೆ ಹೀಗೆ ಹೇಳಬೇಕು.

"ನನಗೆ ಸರಿಯೆಂದು ಕಂಡುದನ್ನು ಕಾರ್ಯತಃ ನಡೆಸಲು ನಾನು ಅನೇಕ ವಿಧಗಳಲ್ಲಿ ಯತ್ನಿಸುವೆನು. ಆ ಪ್ರಯತ್ನವು ಸಫಲವಾಗಬೇಕಾದರೆ, ನಿಮಗೆ ನನ್ನ ಅನುಶಾಸನೆಯನ್ನು ತಿಳಿ ಸುವುದೇ ಮುಖ್ಯ ಸಾಧನೆ. ಏಕೆಂದರೆ ಸಹಸ್ರಾರು ಜನರೊಡನೆ ಇದ್ದು ಅವರ ಅನುರಾಗವನ್ನು ಸಂಪಾದಿಸಬಲ್ಲವರು ನೀವು. ಎಲ್ಲ ಪ್ರಜೆಗಳೂ ನನ್ನ ಮಕ್ಕಳು. ನನ್ನ ಸ್ವಂತ ಮಕ್ಕಳಿಗೆ ಇಹ

ಪರಗಳಲ್ಲಿ ಸುಖ ಕೋರುವಂತೆಯೇ ಎಲ್ಲ ಪ್ರಜೆಗಳಿಗೂ ಕೋರುವೆನು.

"ಇದನ್ನು ಎಷ್ಟು ಜನರು ತಿಳಿಯುವರೆಂಬುದು ನಿಮಗೆ ತಿಳಿಯದು. ಯಾವನೋ ಒಬ್ಬನಿಗೆ ಇದು ಗೊತ್ತಾಗುವುದು. ಅವನು ಕೂಡ ಕೊಂಚವಲ್ಲದೆ ಎಲ್ಲವನ್ನೂ ತಿಳಿಯನು.

"ನೀವು ಸುಖವಾಗಿದ್ದರೂ ಇದನ್ನು ಗಮನಿಸಬೇಕು. ರಾಜನೀತಿಯನ್ನು ಪಾಲಿಸುವಾಗ ಕೆಲವರಿಗೆ ಬಂಧನವಾಗುವುದು, ಕೆಲವರಿಗೆ ಬಿಡುಗಡೆಯಾಗುವುದು. ಇಂತಹ ಶಿಕ್ಷೆಗಳಾಗುವಾಗ ಅನ್ಯಾಯವಾಗದಂತೆ ಸಮವಾಗಿ ನಡೆಯಲು ನೀವು ಯತ್ನಿಸಬೇಕು. ಆದರೆ ಹೊಟ್ಟೆಕಿಚ್ಚು, ಕೋಪ, ನಿಷ್ಠುರತೆ, ಆತುರ, ಅನಭ್ಯಾಸ, ಸೋಮಾರಿತನ, ಆಲಸಿಕೆಗಳು ಇಲ್ಲದವನು ಮಾತ್ರ ಸಮವಾಗಿ ನಡೆಯಬಲ್ಲನು. ಆದರಿಂದ ಇವು ಯಾವುದೂ ನಿಮ್ಮಲ್ಲಿ ಬಳದಂತೆ ನೋಡಿಕೊಳ್ಳಬೇಕು. ಹಾಗೆ ಇರಬೇಕಾದರೆ ಕೋಪವಿರಬಾರದು. ಕೆಲಸ ಮಾಡುವುದರಲ್ಲಿ ಅವಸರ ಮಾಡಬಾರದು. ನೀತಿ ವ್ಯವಹಾರದಲ್ಲಿ ಸೋಮಾರಿಯಾದವನಿಗೆ ಮೇಲಾಗುವುದಿಲ್ಲ. ಆದುದರಿಂದ ಸರಿಯಾಗಿ ನಡೆಯಬೇಕು.

"ಇದನ್ನು ಗಮನಿಸಿದವನು 'ದೊರೆಯ ಋಣವನ್ನು ತೀರಿಸಿ. ದೇವಾನಾಂ ಪ್ರಿಯನ ಅನುಶಾಸನೆಯು ಹೀಗಿದೆ' ಎಂದು ಇತರರಿಗೆ ಹೇಳಬೇಕು. ಹೀಗೆ ಆಚರಿಸಿದರೆ ಬಹು ಪುಣ್ಯವುಂಟು. ಆಚರಿಸದಿರುವುದು ಮಹಾ ಪಾಪ. ಹೀಗೆ ಆಚರಿಸದಿದ್ದರೆ ಸ್ವರ್ಗಪ್ರಾಪ್ತಿಯೂ ಇಲ್ಲ, ರಾಜನ ಅನುಗ್ರಹವೂ ಇಲ್ಲ. ಈ ಕೆಲಸವನ್ನು ನೀವು ಸರಿಯಾಗಿ ನಿರ್ವಹಿಸದಿದ್ದರೆ, ನನಗೆ ಹೇಗೆ ಸಂತೋಷವಾದೀತು ? ಆದರೆ ನಾನು ಹೇಳಿದಂತೆ ನಡೆಸಿದರೆ

ನಿಮಗೆ ಸ್ವರ್ಗ ಸಿಗುವುದು. ನೀವು ನನ್ನ ಋಣವನ್ನು ತೀರಿಸು ವಿರಿ........

"ಅಕಸ್ಮಾತ್ತಾಗಿ ಮರಿತು ಯಾರಿಗಾದರೂ ತೊಂದರೆ ಯಾಗಲಿ ಸಂಕಟವಾಗಲಿ ಆಗದಂತೆ ನಗರ ವ್ಯಾವಹಾರಿಕ ಮಹಾಮಾತ್ರರು ಎಲ್ಲ ಸಮಯಗಳಲ್ಲೂ ನೋಡಿಕೊಳ್ಳಬೇಕು. ಜನರು ನನ್ನ ಧರ್ಮವನ್ನು ಶ್ರದ್ಧೆಯಿಂದ ಆಚರಿಸುವರೋ ಇಲ್ಲ ವೋ ಎಂದು ನೋಡುವುದಕ್ಕಾಗಿ ಸಾಧುವೂ ಅಕ್ರೂರನೂ ಆದ ವನನ್ನು ಐದೈದು ವರುಷಗಳಿಗೊಮ್ಮೆ ರಾಜ್ಯದಲ್ಲಿ ಕಳುಹಿಸು ವೆನು. ಉಜ್ಜಯಿನಿಯಿಂದ ನನ್ನ ಕುಮಾರರು ಕೂಡ ಇದೇ ಗುಣಗಳುಳ್ಳವನನ್ನು ಇದೇ ಕಾರ್ಯಕ್ಕಾಗಿ ಮೂರು ವರುಷಗಳಿ ಗೊಮ್ಮೆ ಕಳುಹಿಸಬೇಕು. ತಕ್ಷಶಿಲೆಯಿಂದಲೂ ಹೀಗೆಯೇ. ಹೀಗೆ ಕಳುಹಿಸಲ್ಪಟ್ಟ ಮಹಾಮಾತ್ರರು ತಮ್ಮ ಧರ್ಮವನ್ನು ಮರೆಯದೆ, ನಗರ ವ್ಯಾವಹಾರಿಕರು ರಾಜಶಾಸನವನ್ನು ಹೇಗೆ ಪಾಲಿಸುವರೆಂದು ತಿಳಿದು ಬರತಕ್ಕದು."

ಮೇಲೆ ಹೇಳಿದ ಧೌಲಿಯ ಶಾಸನದಲ್ಲಿ ಹೇಳಿರುವುದ ನ್ನೆಲ್ಲ ಜೌಗಡದ ಶಾಸನದಲ್ಲಿ ಪುನಃ ಹೇಳಿದ್ದಾನೆ. ಈ ಶಾಸ ನವು ಸಮಾಪಾ ಎಂಬಲ್ಲಿಯ ಮಹಾಮಾತ್ರರನ್ನು ಕುರಿತು ಬರೆ ದುದು. ಇದರಲ್ಲಿ ಧೌಲಿಯ ಶಾಸನಕ್ಕಿಂತ ಸ್ಪಷ್ಟವಾಗಿ ಪ್ರಜೆಗ ಳಿಗೆ ಅಭಯವನ್ನು ನೀಡಿದ್ದಾನೆ.

"ಜನರೆಲ್ಲರೂ ನನ್ನ ಮಕ್ಕಳು. ನನ್ನ ಸ್ವಂತ ಮಕ್ಕಳಿಗೆ ಇಹಪರ ಸುಖಗಳನ್ನು ಕೋರುವಂತೆಯೇ ಎಲ್ಲರಿಗೂ ಕೋರು ವೆನು.

"ನಾನು ಜಯಿಸಿರುವ ನನ್ನ ಪ್ರಾಂತವಾಸಿಗಳು 'ದೊರೆಯು

ನಮ್ಮನ್ನು ಏನು ಮಾಡಬಯಸುವನು ?" ಎಂದು ಕೇಳಬಹುದು. ನನ್ನ ಪ್ರಾಂತವಾಸಿಗಳು ನನಗ ಹೆದರಬೇಕಾಗಿಲ್ಲ. ಅವರಿಗೆ ನನ್ನಿಂದ ಸುಖವಲ್ಲದೆ ದು ಖವಲ್ಲ. ರಾಜನು ಕ್ಷಮಿಸತಕ್ಕ ದನ್ನು ಕ್ಷಮಿಸುವನು. ಪ್ರಜೆಗಳು ಧರ್ಮಾಚರಣೆಯಲ್ಲಿ ನಿರತ ರಾಗಬೇಕು. ಅವರು ಇಹಪರಗಳಲ್ಲಿ ಸುಖಪಡೆಯಲೆಂಬುದೇ ರಾಜನ ಆಸೆ............

"ಮಹಾಮಾತ್ರರು ತಮ್ಮ ಧರ್ಮವನ್ನು ನಡೆಸುತ್ತ 'ದೊರೆಯು ನಿಮಗ ತಂದೆಯಂತಿರುವನು. ನಿಮ್ಮನ್ನು ತನ್ನಂ ತೆಯೇ ಪ್ರೀತಿಸುವನು. ನೀವು ದೊರೆಗ ಸ್ವಂತ ಮಕ್ಕಳಂತೆ' ಎಂದು ತಿಳಿಸಿ, ಪ್ರಜಗಳ ವಿಶ್ವಾಸವನ್ನು ಸಂಪಾದಿಸಬೇಕು."

**ಹದಿನಾಲ್ಕು ಶಿಲಾ ಶಾಸನಗಳು—**

ಮೇಲೆ ಕಂಡ ಎರಡು ಕಳಿಂಗ ಶಾಸನಗಳನ್ನು ಬರಸಿದ ಮುಂದಿನ ಎರಡು ವರ್ಷಗಳಲ್ಲಿ ಅಶೋಕನು ತನ್ನ ಪ್ರಸಿದ್ಧವಾದ ಹದಿನಾಲ್ಕು ಶಿಲಾ ಶಾಸನಗಳನ್ನು ಬರಸಿದನು. ಕಳಿಂಗ ಯುದ್ಧದ ಫಲವಾಗಿ ಅವನಲ್ಲಿ ಆದ ಬದಲಾವಣೆಗಳನ್ನು ಆ ಶಾಸನಗಳು ಸ್ಪಷ್ಟವಾಗಿ ಚಿತ್ರಿಸುತ್ತವೆ. ತಾನು ಬರಸಿದ ಧರ್ಮಶಾಸನಗ ಳನ್ನು ಕುರಿತು ಅಶೋಕನು ತನ್ನ ಹದಿನಾಲ್ಕನೆಯ ಶಾಸನದಲ್ಲಿ ಹೀಗೆ ಹೇಳುತ್ತಾನೆ:

"ಈ ಧರ್ಮಶಾಸನಗಳಲ್ಲಿ ಕೆಲವು ಚಿಕ್ಕದಾಗಿವೆ. ಕೆಲವು ಸಾಧಾರಣವಾಗಿವೆ. ಕೆಲವು ದೊಡ್ಡದಾಗಿವೆ. ಇವುಗಳನ್ನು ದೇವಾನಾಂ ಪ್ರಿಯ ಪ್ರಿಯದರ್ಶಿ ಪ್ರಭುವು ಬರೆಸಿದನು. ಆದರೆ ಎಲ್ಲವನ್ನೂ ಎಲ್ಲಿ ಕಡೆಯೂ ಬರೆಸಲಾಗಿಲ್ಲ. ಏಕೆಂದರೆ ನಾನು ಜಯಿಸಿರುವ ರಾಜ್ಯವು ಬಲು ದೊಡ್ಡದು. ಈಗಾಗಲೇ ಬಹು

ವಾಗಿ ಬರೆಸಿರುವೆನು. ಇನ್ನೂ ಬರೆಯಿಸುವೆನು. ಈ ಶಾಸನಗಳಲ್ಲಿ ಕೆಲವು ಭಾಗಗಳು ಬಹು ಮಧುರವಾಗಿವೆ. ಜನರು ಅದರಂತೆ ನಡೆಯಲೆಂದು ಅವುಗಳನ್ನು ಪುನಃ ಪುನಃ ಹೇಳಲಾಗಿದೆ".

ಅಲ್ಲದೆ, ತಾನು ಶಾಸನ ಬರೆಸಿದ ಉದ್ದೇಶವನ್ನು ಕುರಿತು, 'ಪ್ರಜೆಗಳು ಈ ಧರ್ಮಾಚರಣೆಯನ್ನು ಬೆಳೆಸಲೆಂದು, ಅದಕ್ಕೆ ಹಾನಿ ತರದಿರಲೆಂದು ಇದನ್ನು ಬರೆಸಲಾಗಿದೆ", "ಈ ಶಾಸನವು ಚಿರವಾಗಿ ನಿಲ್ಲಲೆಂದು, ನನ್ನ ಪ್ರಜೆಗಳು ಇದರಂತೆ ನಡೆಯಲೆಂದು ಈ ಧರ್ಮಲಿಪಿಯು ಬರೆಸಲಾಯಿತು", "ನನ್ನ ಮಕ್ಕಳು ಮುಮ್ಮಕ್ಕಳು ಮರಿಮಕ್ಕಳು ಎಲ್ಲರೂ ಹೀಗೆಯೇ ಸರ್ವಜನ ಸೌಖ್ಯಕ್ಕಾಗಿ ನಡೆಯಲೆಂದು ಈ ಧರ್ಮಶಾಸನವನ್ನು ಬರೆಸಿರುವೆನು" ಎಂದು ಮೇಲಿಂದ ಮೇಲೆ ಹೇಳಿರುವನು.

ಇನ್ನು, ಆತನು ಪ್ರಜೆಗಳ ಸುಖಹಿತಗಳಿಗಾಗಿ ಏನೇನು ನಡೆಸಿದನೆಂಬುದನ್ನು ಶಾಸನಗಳಿಂದ ತಿಳಿಯೋಣ. ಶಾಸನಗಳನ್ನು ಓದಿದರೆ ಮೊದಲು ಮನಸ್ಸನ್ನು ಮುಟ್ಟುವುದು ಆತನು ಆಚರಣೆಗೆ ತಂದ ಅಹಿಂಸಾವ್ರತ. ಆ ಅಹಿಂಸಾ ವ್ರತವನ್ನು ಕುರಿತು ಒಂದು ಶಾಸನದಲ್ಲಿ ಹೀಗೆ ಹೇಳುತ್ತಾನೆ:

"ಇಲ್ಲಿ ಯಾವ ಪ್ರಾಣಿಯನ್ನೂ ಕೊಲ್ಲಕೂಡದು. ಯಜ್ಞ ಮಾಡಕೂಡದು. ಯಾವ ಉತ್ಸವಗಳನ್ನೂ ನಡೆಸಕೂಡದು. ಏಕೆಂದರೆ ಅಂತಹ ಉತ್ಸವಗಳಲ್ಲಿ ದೇವಾನಾಂ ಪ್ರಿಯ ಪ್ರಿಯದರ್ಶಿ ಪ್ರಭುವು ಅನೇಕ ದೋಷಗಳನ್ನು ಕಂಡಿದ್ದಾನೆ. ಆದರೆ ದೇವಾನಾಂ ಪ್ರಿಯ ಪ್ರಿಯದರ್ಶಿಯು ಸಾಧುವೆಂದು ಎಣಿಸುವ ಕೆಲವು ಉತ್ಸವಗಳೂ ಉಂಟು.

"ಹಿಂದೆ, ದೇವಾನಾಂ ಪ್ರಿಯ ಪ್ರಿಯದರ್ಶಿಯ ಅಡುಗೆ

ಮನೆಯಲ್ಲಿ ಅನೇಕ ಜಂತುಗಳನ್ನು ಅಡುಗೆಗಾಗಿ ಕೊಲ್ಲುತ್ತಿದ್ದರು. ಈಗ, ಈ ಧರ್ಮಲಿಪಿಯನ್ನು ಬರೆಸುತ್ತಿರುವಾಗ ಎರಡು ನವಿಲು ಒಂದು ಜಿಂಕೆ ಮಾತ್ರ ಹತವಾಗುತ್ತಿವೆ. ಇನ್ನು ಮುಂದೆ ಈ ಮೂರನ್ನು ಕೂಡ ಕೊಲ್ಲುವುದಿಲ್ಲ."

ಹೀಗೆ ಸರ್ವಜೀವಿಗಳ ವಿಚಾರದಲ್ಲಿ ಹುಟ್ಟಿದ ಕರುಣೆಯೇ ಇನ್ನೊಂದು ಶಾಸನದಲ್ಲಿ ಹೇಳಿರುವ ಕೆಲಸಗಳನ್ನು ಮಾಡಲು ಕಾರಣವಾಯಿತು.

"ದೇವಾನಾಂ ಪ್ರಿಯ ಪ್ರಿಯದರ್ಶಿ ಪ್ರಭುವಿನ ರಾಜ್ಯದಲ್ಲಿ ಎಲ್ಲ ಕಡೆ, ಚೋಳ ಪಾಂಡ್ಯ ಸತ್ಯಪುತ್ರ ಕೇರಳಪುತ್ರ ಮುಂತಾದ ಪ್ರಾಂತ ರಾಜ್ಯಗಳಲ್ಲಿ, ತಾಮ್ರಪರ್ಣಿಯಲ್ಲಿ, ಯವನ ದೇಶಾಧಿಪನಾದ ಅಂತಿಯಕನ ರಾಜ್ಯದಲ್ಲಿ, ಆ ಅಂತಿಯಕನ ಸಾಮಂತರಾದ ಇತರ ರಾಜರ ರಾಜ್ಯಗಳಲ್ಲಿ—ಈ ಎಲ್ಲ ಕಡೆಗಳಲ್ಲಿಯೂ ಎರಡು ತೆರನಾದ ಚಿಕಿತ್ಸೆಗಳನ್ನು ಪ್ರಿಯದರ್ಶಿಯು ಏರ್ಪಡಿಸಿರುವನು. ಒಂದು ಮನುಷ್ಯರಿಗೆ, ಒಂದು ಮೃಗಗಳಿಗೆ. ಮನುಷ್ಯರಿಗೂ ಮೃಗಗಳಿಗೂ ಉಪಯೋಗಕರವಾದ ಔಷಧಿಗಳು ಇಲ್ಲದ ಕಡೆಗಳಲ್ಲಿ ಅವುಗಳನ್ನು ತರಿಸಿ ನಾಟಿಸಲಾಗಿದೆ. ಇದೇ ರೀತಿ ಗೆಡ್ಡೆ ಗೆಣಸುಗಳೂ ಹಣ್ಣು ಹಂಪಲುಗಳೂ ಇಲ್ಲದ ಕಡೆ ಅವುಗಳನ್ನೂ ಬೆಳೆಸಲಾಗಿದೆ. ಮನುಷ್ಯರಿಗೂ ಮೃಗಗಳಿಗೂ ಉಪಯೋಗವಾಗಲೆಂದು ಮಾರ್ಗಗಳಲ್ಲಿ ಮರಗಳನ್ನು ನೆಡಿಸಿ ಬಾವಿಗಳನ್ನು ತೋಡಿಸಲಾಗಿದೆ."

ಶಾಸನಗಳಲ್ಲಿ ಕಾಣುವ ಮುಂದಿನ ವಿಷಯವೆಂದರೆ— ಅಶೋಕನ ಧರ್ಮಪ್ರೇಮ, ಆತನ ಧರ್ಮಶ್ರದ್ಧೆ. ಆತನು ತನ್ನ ನಿರೂಪಗಳನ್ನು 'ಧರ್ಮಲಿಪಿ', 'ಧರ್ಮಶಾಸನ' ಎಂದು ಕರೆದಿ

ರುವನಷ್ಟೆ. ಧರ್ಮವೆಂದರೇನು? ಅಶೋಕನು ಯಾವುದನ್ನು ಧರ್ಮವೆಂದು ಕರೆದನು? ಅದನ್ನು ಅವನೇ ವಿವರಿಸಿದ್ದಾನೆ.

"ತಂದೆತಾಯಿಗಳ ಶುಶ್ರೂಷೆಯು ಸಾಧು. ಮಿತ್ರರು, ಪರಿಚಯಸ್ಥರು, ಜ್ಞಾತಿಗಳು, ಬ್ರಾಹ್ಮಣರು, ಬೌದ್ಧ ಸಂನ್ಯಾಸಿಗಳು ಮುಂತಾದವರಲ್ಲಿ ಔದಾರ್ಯವನ್ನು ತೋರುವುದು ಸಾಧು. ಪ್ರಾಣಿಹಿಂಸೆ ಮಾಡದಿರುವುದು ಸಾಧು. ಸ್ವಲ್ಪ ವ್ಯಯವು ಸಾಧು. ಬಹುವಾಗಿ ಗಳಿಸದಿರುವುದು ಸಾಧು. ಇದು ಧರ್ಮ."........ "ಗುಲಾಮರನ್ನೂ ಸೇವಕರನ್ನೂ ದಯೆಯಿಂದ ಕಂಡು, ತಂದೆತಾಯಿಗಳ ಶುಶ್ರೂಷೆಮಾಡಿ, ಸ್ನೇಹಿತರು ಪರಿಚಿತರು ಜ್ಞಾತಿಗಳು ಭಿಕ್ಷುಗಳು ಬ್ರಾಹ್ಮಣರು ಮುಂತಾದವರಿಗೆ ದಾನಮಾಡಿ, ಪ್ರತಿ ಜೀವವನ್ನೂ ಪಾವನವೆಂದು ಎಣಿಸಿ ಕೊಲ್ಲದಿರುವುದೇ ಧರ್ಮ."..........."ತಂದೆತಾಯಿಗಳ ಶುಶ್ರೂಷೆ ಮಾಡಬೇಕು. ಜೀವಗೌರವವನ್ನು ಕಡ್ಡಾಯವಾಗಿ ಆಚರಿಸಬೇಕು. ಸತ್ಯವನ್ನೇ ಆಡಬೇಕು. ಶಿಷ್ಯನು ಆಚಾರ್ಯನನ್ನು ಗೌರವಿಸಬೇಕು. ಬಂಧುಗಳನ್ನು ಸನ್ಮಾನಿಸಬೇಕು. ಈ ಧರ್ಮಗುಣಗಳನ್ನು ಬೆಳೆಸಬೇಕು."

ಈ ಹೇಳಿದ ಧರ್ಮಾಚರಣೆಯ ಅವಶ್ಯಕತೆಯನ್ನೂ ಅದರ ಶ್ರೇಷ್ಠತೆಯನ್ನೂ ಅಶೋಕನು ತನ್ನ ಶಾಸನಗಳಲ್ಲಿ ಮೇಲಿಂದಮೇಲೆ ಒತ್ತಿ ಹೇಳಿದ್ದಾನೆ.

"ಮಾಡುವ ಕೆಲಸಗಳಲ್ಲೆಲ್ಲ ಧರ್ಮಾಚರಣೆಯು ಶ್ರೇಷ್ಠ. ಹಾಗೆಯೇ ಧರ್ಮವನ್ನು ಇತರರಿಗೆ ತಿಳಿಸುವುದೂ ಶ್ರೇಷ್ಠ. ಶೀಲವಿಲ್ಲದವರಿಗೆ ಈ ಧರ್ಮಾಚರಣೆಯು ಸಾಧ್ಯವಲ್ಲ. ಧರ್ಮಾಚರಣೆಯನ್ನೂ ಧರ್ಮಪ್ರಸಾರವನ್ನೂ ಬೆಳೆಸುವುದು ಮಾತ್ರವಲ್ಲ, ಅದಕ್ಕೆ ಹಾನಿ ತರದಿರುವುದರಿಂದ ಕೂಡ ಬಹು ಮೇಲಾ

ಗುವುದು."……………"ಒಳ್ಳೆಯ ಕೆಲಸ ಮಾಡುವುದು ಕಷ್ಟ. ಒಳ್ಳೆಯ ಕಾರ್ಯವನ್ನು ಮಾಡಿದವನೇ ಕಷ್ಟಸಾಧ್ಯವಾದುದನ್ನು ಸಾಧಿಸುವನು. ಈಗ ನಾನು ಅನೇಕ ಒಳ್ಳೆಯ ಕೆಲಸಗಳನ್ನು ಮಾಡಿರುವೆನು. ನನ್ನ ಮಕ್ಕಳು ಮೊಮ್ಮಕ್ಕಳೆಲ್ಲರೂ ಇದೇ ದಾರಿಯಲ್ಲಿ ನಡೆದರೆ ಅವರು ಪುಣ್ಯ ಮಾಡಿದವರಾಗುವರು. ಈ ವಿಚಾರದಲ್ಲಿ ಕೊಂಚ ಕೂಡ ಊನ ತಂದವನು ಪಾಪಮಾಡಿದವನು. ಪಾಪಮಾಡುವುದು ಸುಲಭ."...."ರೋಗ ಬಂದಾಗ, ಕುಮಾರ ಕುಮಾರಿಯರ ವಿವಾಹವಾದಾಗ, ಮಕ್ಕಳಾದಾಗ, ಪ್ರಯಾಣ ಮಾಡುವಾಗ, ಇನ್ನೂ ಇತರ ಸಮಯಗಳಲ್ಲಿ ಜನರು ಅನೇಕ ತರಹ ಮಂಗಲಕಾರ್ಯಗಳನ್ನು ಆಚರಿಸುವರು. ಆ ಸಮಯಗಳಲ್ಲಿ ತಾಯಂದಿರೂ ಹೆಂಡಿರೂ ಕ್ಷುದ್ರವಾದ ನಿರರ್ಥಕವಾದ ಅನೇಕ ಕರ್ಮಗಳನ್ನು ನಡೆಸುವರು. ಮಂಗಲ ಕಾರ್ಯಗಳು ಮಾಡಬೇಕಾದುವೇ. ಆದರೆ ಇಂತಹ ಮಂಗಲಗಳು ಅಲ್ಪ ಫಲವನ್ನು ಕೊಡುವುವು. ಧರ್ಮ ಮಂಗಲವು ಮಾತ್ರ ಮಹಾ ಫಲವನ್ನು ಕೊಡುವುದು. ದಾಸರನ್ನೂ ಭೃತ್ಯರನ್ನೂ ಸರಿಯಾಗಿ ಕಂಡು, ಗುರುಗಳಲ್ಲಿ ಭಕ್ತಿ ತೋರಿ, ಪ್ರಾಣಿಗಳಲ್ಲಿ ದಯೆಯಿಟ್ಟು, ಬ್ರಾಹ್ಮಣ ಶ್ರಮಣರಿಗೆ ದಾನಕೊಡುವುದು—ಇವೇ ಧರ್ಮ ಮಂಗಲಗಳು. ಇವಲ್ಲದ ಚಿಕ್ಕ ಮಂಗಲಗಳು ಸಂದೇಹ ಫಲಗಳನ್ನು ಕೊಡುವುವು. ಕೋರಿದ ಫಲಗಳು ಸಿದ್ಧಿಯಾಗಬಹುದು. ಸಿದ್ಧಿಯಾಗದಿರಬಹುದು. ಆ ಫಲಗಳು ಇಹಲೋಕಕ್ಕೆ ಮಾತ್ರ ಸಂಬಂಧಿಸಿರುವುವು. ಆದರೆ ಧರ್ಮಮಂಗಲವು ಹಾಗಲ್ಲ. ಇದಕ್ಕೆ ಇಹಲೋಕದಲ್ಲಿ ಫಲ ಸಿಗದೆ ಹೋದರೂ, ಪರಲೋಕದಲ್ಲಿ ಅನಂತ ಫಲ ಸಿಗುವುದು. ಒಂದು ವೇಳೆ ಇಹಲೋಕದಲ್ಲಿ

ಫಲ ದೊರೆತರೆ, ಇಹಪರಗಳೆರಡರಲ್ಲಿಯೂ ಫಲ ದೊರೆತಂತಾ ಗುವುದು. ದಾನವು ಸಾಧುವೆಂದು ಹೇಳಿದ್ದೇನೆ. ಆದರೆ ಧರ್ಮ ದಾನದಂತಹ ದಾನವಿಲ್ಲ. ಧರ್ಮಾನುಗ್ರಹದಂತಹ ಅನುಗ್ರಹ ವಿಲ್ಲ. ಆದುದರಿಂದ ಸ್ನೇಹಿತರು, ಜ್ಞಾತಿಗಳು, ಬಾಂಧವರು ಮೊದಲಾದವರು 'ಇದು ಸಾಧು. ಇದು ಕರ್ತವ್ಯ. ಇದರಿಂದ ಸ್ವರ್ಗಸಿದ್ಧಿಯಾಗುವುದು' ಎಂದು ಆಗಾಗ್ಗೆ ಹೇಳುತ್ತಿರಬೇಕು. ಏಕೆಂದರೆ ಸ್ವರ್ಗಸಿದ್ಧಿಗಿಂತ ಹೆಚ್ಚಿನ ಕರ್ತವ್ಯ ಬೇರೆಯಿಲ್ಲ"......
"ಧರ್ಮದಾನಕ್ಕೆ, ಧರ್ಮವನ್ನು ಹೊಗಳುವುದಕ್ಕೆ, ಧರ್ಮದಲ್ಲಿ ಭಾಗಿಯಾಗುವುದಕ್ಕೆ, ಧರ್ಮಸಂಬಂಧಕ್ಕೆ ಸಮನಾದುದು ಯಾವುದೂ ಇಲ್ಲ. ಅದರಿಂದ ಎಲ್ಲರೂ 'ಇದು ಸಾಧು. ಇದು ಕರ್ತವ್ಯ' ಎಂದು ಹೇಳುತ್ತಿರಬೇಕು. ಹೀಗೆ ಹೇಳುವುದರಿಂದ ಈ ಧರ್ಮದಾನದಿಂದ, ಈ ಲೋಕದಲ್ಲಿ ಸುಖವೂ ಪರಲೋಕ ದಲ್ಲಿ ಅನಂತ ಪುಣ್ಯವೂ ಸಿಕ್ಕುವುದು."

ಅಶೋಕನು ಬೌದ್ಧ ಧರ್ಮವನ್ನು ಅನುಸರಿಸುತ್ತಿದ್ದ ನನು. ಅವನು ತನ್ನ ಪ್ರಜೆಗಳು ಆಚರಿಸಬೇಕೆಂದು ಹೇಳುತ್ತಿದ್ದ ಧರ್ಮವು ಬೌದ್ಧ ಧರ್ಮದ ಸಾರವಾದರೂ, ಅದೇ ಎಲ್ಲ ಮತ ಗಳ ಸಾರ. ಅವನಿಗೆ ಎಲ್ಲ ಮತಗಳಲ್ಲಿಯೂ ಅಭಿಮಾನವಿತ್ತು. ಬ್ರಾಹ್ಮಣರು ಬೌದ್ಧರೆನ್ನದೆ ಎಲ್ಲರಿಗೂ ಒಂದೇ ಸಮನಾಗಿ ದಾನ ಕೊಡುತ್ತಿದ್ದನು. ಆಜೀವಕರೆಂಬ ಬೇರೆ ಮತಸ್ಥರಿಗೆ ಮಳೆಗಾ ಲದ ವಾಸಕ್ಕಾಗಿ ಪರ್ವತದಲ್ಲಿ ಮೂರು ಗುಹೆಗಳನ್ನು ಮಾಡಿಸಿ ದಾನಕೊಟ್ಟನು. ಎಲ್ಲ ಮತಗಳಲ್ಲಿಯೂ ಸತ್ಯಾಂಶವುಂಟೆಂಬುದು ಅಶೋಕನಿಗೆ ತಿಳಿದಿತ್ತು. ಪ್ರಜೆಗಳು ಪರಸ್ಪರ ಮತಗಳ ಸಾರ ವನ್ನು ಕಂಡುಕೊಂಡು, ಸೌಹಾರ್ದದಿಂದ ನಡೆದರೆ ಸರ್ವರಿಗೂ

ಕ್ಷೇಮವೆಂಬುದನ್ನು ಅವನು ಮನಗಂಡಿದ್ದನು. ಅದು ಎಲ್ಲರಿಗೂ ತಿಳಿಯಲೆಂಬ ಆಶಯದಿಂದ ಒಂದು ಶಾಸನದಲ್ಲಿ ಹೀಗೆ ಬರೆಸಿದನು:

"ದೇವಾನಾಂ ಪ್ರಿಯ ಪ್ರಿಯದರ್ಶಿ ಪ್ರಭುವು ತನ್ನ ದಾನದಿಂದಲೂ ವಿವಿಧವಾದ ಪೂಜೆಗಳಿಂದಲೂ ಎಲ್ಲಾ ಪಾಷಂಡರನ್ನೂ, ಸಂನ್ಯಾಸಿಗಳನ್ನೂ, ಗೃಹಸ್ಥರನ್ನೂ ಪೂಜಿಸುತ್ತಿರುವನು. ಆದರೆ ದೇವಾನಾಂ ಪ್ರಿಯನಿಗೆ ಈ ದಾನ ಪೂಜೆಗಳಿಂದ ಅಷ್ಟು ತೃಪ್ತಿಯಿಲ್ಲ. ಸರ್ವ ಪಾಷಂಡರ ಧರ್ಮಸಾರವನ್ನು ಅಭಿವೃದ್ಧಿಗೊಳಿಸಬೇಕೆಂಬುದೇ ಅವನ ಬಯಕೆ. ಈ ಧರ್ಮಸಾರಾಭಿವೃದ್ಧಿಯು ಅನೇಕ ವಿಧಗಳಲ್ಲಿ ಸಾಧ್ಯ. ಅದಕ್ಕೆ ಮೂಲವು ವಾಚೋಗುಪ್ತಿ. ಎಂದರೆ ಅಲ್ಪಕಾರಣಕ್ಕಾಗಿ ಪರಮತವನ್ನು ಹಳಿದು ತನ್ನ ಮತವೇ ಶ್ರೇಷ್ಠವೆಂದು ಹೇಳುವುದು ತಕ್ಕುದಲ್ಲ. ಸಾಕಾದಷ್ಟು ಕಾರಣಗಳಿಲ್ಲದೆ ಬೇರೆ ಮತಗಳನ್ನು ತಿರಸ್ಕರಿಸಬಾರದು. ಹಾಗೆ ಹಳಿಯದಿದ್ದರೆ ಅದರಿಂದ ತನ್ನ ಮತವೂ ಅಭಿವೃದ್ಧಿಯಾಗುವುದು, ಪರಮತಕ್ಕೂ ಉಪಕಾರವಾಗುವುದು. ಇಲ್ಲದೆ ಹಳಿದರೆ ತನ್ನ ಮತವು ಕ್ಷೀಣವಾಗುವುದು, ಪರಮತಕ್ಕೆ ಅಪಕಾರವಾಗುವುದು. ಯಾವನು ತನ್ನ ಮತದ ಮೇಲಿನ ವಿಶೇಷವಾದ ಅಭಿಮಾನದಿಂದ, ಅದನ್ನು ದೊಡ್ಡದು ಮಾಡಬೇಕೆಂಬ ಆಸೆಯಿಂದ, ತನ್ನ ಮತವನ್ನು ಹೊಗಳಿ ಬೇರೆ ಮತಗಳನ್ನು ತೆಗಳುವನೋ ಅವನು ನಿಜವಾಗಿಯೂ ತನ್ನ ಮತಕ್ಕೇ ದೊಡ್ಡ ಕೇಡು ಮಾಡುವನು. ಆದುದರಿಂದ ಪರಮತ ಧರ್ಮವನ್ನು ಮನಸಾರೆ ಕೇಳಬೇಕು. ಎಲ್ಲರೂ ಇದನ್ನು ತಿಳಿದು ಕಲ್ಯಾಣವನ್ನು ಸಾಧಿಸಬೇಕೆಂಬುದೇ ದೇವಾನಾಂ ಪ್ರಿಯನ ಇಚ್ಛೆ. ಇದರಿಂದ ಸ್ವಮತವು

ಭಿವೃದ್ಧಿ ಹೊಂದುವುದಲ್ಲದೆ ಧರ್ಮವೂ ಹೆಚ್ಚು ಬೆಳಗುವುದು".

ಹೀಗೆ ಅಶೋಕನು ಧರ್ಮಾಚರಣೆಯನ್ನು ಪ್ರಶಂಸಿಸಿ. ಲ್ಲರೂ ಅದರಂತೆ ನಡೆಯಬೇಕೆಂದು ಆಜ್ಞೆಮಾಡಿದನು. ತನ್ನ ಜ್ಞೆಯು ಎಲ್ಲರಿಗೂ ತಿಳಿಯಲೆಂದು ಅವುಗಳನ್ನು ಬಂಡೆಗಳ ಮೇಲೆಲ್ಲ ಬರೆಸಿದನು. ಬಂಡೆಗಳು ಇಲ್ಲದ ಕಡೆ ಕಲ್ಲು ಕಂಭಗ ನ್ನು ಕಡೆದು ತರಿಸಿ. ಅವುಗಳಮೇಲೆ ಬರೆಸಿದನು. ಆದರೆ ಷ್ಟರಿಂದ ಅವನಿಗೆ ತೃಪ್ತಿಯಾಗಲಿಲ್ಲ. ತನ್ನ ಶಾಸನೆಯನ್ನು ನಗಳಿಗೆ ತಾವೇ ಹೋಗಿ ಹೇಳುವುದಕ್ಕೂ, ಪ್ರಜೆಗಳು ದನ್ನು ನಡೆಸುವಂತೆ ನೋಡಿಕೊಳ್ಳುವುದಕ್ಕೂ ಅನೇಕ ಅಧಿಕಾ ಗಳನ್ನು ನಿರ್ಮಿಸಿದನು. ಮಹಾಮಾತ್ರರು, ರಾಜುಕರು, ಪುರು ರು, ಯುಕ್ತರು, ಪ್ರಾದೇಶಿಕರು ಮುಂತಾದ ಅನೇಕ ಅಧಿಕಾರಿ ಳನ್ನು ನೇಮಿಸಿ, ಅವರವರ ಕರ್ತವ್ಯಗಳನ್ನು ತನ್ನ ಶಾಸನಗಳಲ್ಲಿ ರೂಪಿಸಿದನು.

"ಹಿಂದೆ ಯಾವಾಗಲೂ ಧರ್ಮ ಮಹಾಮಾತ್ರರು ಇರ ಲ್ಲ. ನನಗೆ ಅಭಿಷೇಕವಾದ ಹದಿಮೂರನೆಯ ವರ್ಷದಲ್ಲಿ ರ್ಮ ಮಹಾಮಾತ್ರರು ಏರ್ಪಟ್ಟರು. ಎಲ್ಲರಲ್ಲಿಯೂ ಧರ್ಮ ನ್ನು ಸ್ಥಾಪಿಸಿ ಬೆಳೆಸಲು ಧರ್ಮ ಮಹಾಮಾತ್ರರು ಏರ್ಪ ಟ್ಟರು. ಯವನ ಕಾಂಭೋಜ ಗಾಂಧಾರ ದೇಶಸ್ಥರು, ರಾಷ್ಟ್ರಿಕ ಪೈಠೇನಿಕರು, ಪಶ್ಚಿಮ ಪ್ರಾಂತವಾಸಿಗಳು ಯಾರಲ್ಲಿ ಯಾದರೂ ಧರ್ಮನಿರತರು ಇದ್ದರೆ ಅವರ ಹಿತಸುಖಗಳನ್ನು ರ್ಮ ಮಹಾಮಾತ್ರರು ನೋಡಿಕೊಳ್ಳಬೇಕು. ಸೇವಕರು, ಭುಗಳು, ಬ್ರಾಹ್ಮಣರು, ವೃದ್ಧರು, ಅಶಕ್ತರು, ಅನಾಥರು ಯಾರಾದರೂ ಆಗಲಿ. ಆ ಧರ್ಮನಿರತರ ಹಿತಸುಖಗಳಿಗಾಗಿ,

ಅವರ ಸಂಸಾರದ ಕ್ಲೇಶಗಳನ್ನು ಕಡಿಮೆ ಮಾಡುವುದಕ್ಕಾಗಿ ಧರ್ಮ ಮಹಾಮಾತ್ರರು ನಿಯಮಿತರಾಗಿರುವರು. ಅನ್ಯಾಯವಾದ ಕಾರಾಗೃಹ ಪ್ರವೇಶವನ್ನೂ ಅನ್ಯಾಯವಾದ ಶಿಕ್ಷೆಗಳನ್ನೂ ತಪ್ಪಿಸಿ, ಇತರ ಆತಂಕಗಳನ್ನು ನಿವಾರಿಸಿ, ಹೆಚ್ಚು ಸಂಸಾರವಿರುವವನು ಮುದುಕನಾದರೆ ಅಥವ ತೊಂದರೆಗೆ ಸಿಕ್ಕಿದರೆ ಅವನಿಗೆ ನೆರವಾಗಲು ಅವರು ಏರ್ಪಟ್ಟಿರುವರು. ಪಾಟಲೀಪುತ್ರದಲ್ಲಿಯೂ ಅದರ ಸುತ್ತಮುತ್ತಲೂ ಇರುವ ನನ್ನ ಜ್ಞಾತಿಗಳು ಅಕ್ಕ ತಂಗಿಯರು ಮಾತ್ರವಲ್ಲದೆ ಇತರ ಬಂಧುಗಳ ಅಂತಃಪುರಗಳ ಮೇಲು ವಿಚಾರಣೆಗಾಗಿಯೂ ಅವರು ನಿಯಮಿತರಾಗಿರುವರು. ಧರ್ಮಯುಕ್ತರು, ಧರ್ಮಸ್ಥಿತರು ನನ್ನ ರಾಜ್ಯದಲ್ಲಿ ಎಲ್ಲಿದ್ದರೂ ಧರ್ಮ ಮಹಾಮಾತ್ರರು ಅವರೊಡನೆ ಕಲೆತು ನಡೆಯಬೇಕು”........ 'ಸಂನ್ಯಾಸಿಗಳು, ಗೃಹಸ್ಥರು, ಪಾಷಂಡರೆನ್ನದೆ ಎಲ್ಲರಿಗೂ ಉಪಯೋಗವಾಗುವ ಅನೇಕ ವ್ಯವಹಾರಗಳಲ್ಲಿ ನನ್ನ ಧರ್ಮ ಮಹಾಮಾತ್ರರು ಸಹಾಯಮಾಡುತ್ತಿರುವರು. ಕೆಲವು ಮಹಾಮಾತ್ರರು ಬೌದ್ಧ ಸಂನ್ಯಾಸಿಗಳೊಡನೆ, ಕೆಲವರು ಬ್ರಾಹ್ಮಣರೊಡನೆ, ಕೆಲವರು ಆಜೀವಕರೊಡನೆ, ನಿರ್ಗ್ರಂಥರೊಡನೆ ಕೆಲವರು, ನಾನಾಪಾಷಂಡರೊಡನೆ ಕೆಲವರು ವ್ಯವಹರಿಸಬೇಕೆಂದು ನಾನು ಅಜ್ಞೆಮಾಡಿರುವೆನು. ಈ ರೀತಿ ವಿವಿಧ ಸಂಘಗಳನ್ನು ನೋಡಿಕೊಳ್ಳಲು ವಿವಿಧ ಮಹಾಮಾತ್ರರನ್ನು ನಿಯೋಗಿಸಿರುವೆನು. ಇವರೂ ನನ್ನ ಮುಖ್ಯ ಅಧಿಕಾರಿಗಳಲ್ಲಿ ಅನೇಕರೂ ನನ್ನ ಮತ್ತು ನನ್ನ ರಾಣಿಯರ ದಾನಗಳನ್ನು ಹಂಚುವುದರಲ್ಲಿ ನಿರತರಾಗಿರುವರು. ನನ್ನ ರಾಜ್ಯದಲ್ಲಿ ದಾನಕ್ಕೆ ಅರ್ಹರಾದ ಜನರಿದ್ದರೆ, ಅದನ್ನು ಅವರು ನನ್ನ ಅಂತಃಪುರದಲ್ಲಿ ತಿಳಿಸುವರು. ಅವರ

ಲ್ಲರೂ ಧರ್ಮಕಾರ್ಯಾಭಿವೃದ್ಧಿಗೆ ಬಹು ವಿಧದಲ್ಲಿ ಸಹಾಯ ಮಾಡುತ್ತಿರುವರು”.

“ನನ್ನ ರಾಜುಕರು ಅನೇಕ ಲಕ್ಷ ಜನರನ್ನು ನೋಡಿಕೊಳ್ಳುತ್ತಿದ್ದಾರೆ. ಅವರು ಸ್ವಾರ್ಥವಿಲ್ಲದೆ, ಭಯ ಭೀತಿಯಿಲ್ಲದೆ ತಮ್ಮ ಧರ್ಮವನ್ನು ನಡೆಸುತ್ತಿರುವರು. ಜನಪದದ ಹಿತಸುಖಗಳನ್ನು ವಿಚಾರಿಸಿ, ಅವರನ್ನು ಬಹುಮಾನಿಸುವ ದಂಡಿಸುವ ಅಧಿಕಾರವನ್ನು ರಾಜುಕರಿಗೇ ಬಿಟ್ಟಿದ್ದೇನೆ. ಅವರು ಜನರ ಸುಖದುಃಖಗಳನ್ನು ವಿಚಾರಿಸುವರು. ಜನಪದದ ಜನರು ಇಹಪರಗಳಲ್ಲಿ ಲಾಭ ಹೊಂದುವಂತೆ ಧರ್ಮಯುತರಿಂದ ಉಪದೇಶ ಮಾಡಿಸುವರು. ನನ್ನನ್ನು ಸೇವಿಸಲು ರಾಜುಕರು ಹಾತೊರೆಯುತ್ತಿರುವರು. ಪುರುಷರೆಂಬ ನನ್ನ ಅಧಿಕಾರಿಗಳನ್ನೂ ಅವರು ಸೇವಿಸುವರು. ರಾಜುಕರು ತಾವೂ ನನ್ನ ಧರ್ಮವನ್ನು ಜನರಿಗೆ ಉಪದೇಶಿಸುವರು.

“ಸಮರ್ಥಳಾದ ದಾದಿಗೆ ಮಗುವನ್ನು ಒಪ್ಪಿಸಿ, ‘ಈ ಸಮರ್ಥಳಾದ ದಾದಿ ಮಗುವನ್ನು ಚೆನ್ನಾಗಿ ಪಾಲಿಸುವಳು’ ಎಂದು ಸ್ವಸ್ಥಚಿತ್ತರಾಗುವಂತೆ, ಜನಪದದ ಹಿತಸುಖವನ್ನು ರಾಜುಕರ ಕೈಯಲ್ಲಿಟ್ಟು ಸಮಾಧಾನದಿಂದಿರುವೆನು. ಅವರು ಭಯ ಭೀತಿ ಬಿಟ್ಟು, ಸ್ವಾರ್ಥವಿಲ್ಲದೆ, ಶಾಂತರಾಗಿ ತಮ್ಮ ಧರ್ಮವನ್ನು ನಡೆಸಲೆಂದೇ ಪ್ರಜೆಗಳನ್ನು ಬಹುಮಾನಿಸುವ ದಂಡಿಸುವ ಅಧಿಕಾರವನ್ನು ರಾಜುಕರಿಗೇ ಬಿಟ್ಟುಕೊಟ್ಟಿರುವೆನು.”

“ಪುರುಷರೆಂಬ ಅಧಿಕಾರಿಗಳು ಕೂಡ—ಅವರು ಉತ್ತಮರಾಗಲಿ, ಮಧ್ಯಮರಾಗಲಿ, ಸಾಮಾನ್ಯರಾಗಲಿ—ಧರ್ಮವನ್ನು ತಾವು ಅನುಸರಿಸುತ್ತ, ಅದನ್ನು ಜನರಿಗೆ ವಿಧಿಸುತ್ತ, ಚಪಲಾಲ

ದವರನ್ನು ಧರ್ಮದಲ್ಲಿ ಸ್ಥಿರವಾಗಿ ನಿಲಿಸಲು ಶಕ್ತರಾಗಿರುವರು. ನನ್ನ ಅಂತ ಮಹಾಮಾತ್ರರೂ ಹೀಗೆಯೇ ಮಾಡುತ್ತಿರುವರು. ಧರ್ಮಕ್ಕೆ ಅನುಸಾರವಾಗಿ ಪಾಲಿಸಿ, ಧರ್ಮದಂತೆ ವಿಧಿಸಿ, ಧರ್ಮದಿಂದ ಸುಖಪಡಿಸಿ, ಧರ್ಮದಿಂದ ಪ್ರಜೆಯನ್ನು ಕಾಪಾಡಲೆಂದೇ ನಾನು ಅವರನ್ನು ನಿಯಮಿಸಿರುವೆನು."

"ಯುಕ್ತರು, ರಾಜುಕರು ಮತ್ತು ಪ್ರಾದೇಶಿಕರು ಐದು ವರುಷಗಳಿಗೊಮ್ಮೆ ನನ್ನ ರಾಜ್ಯದಲ್ಲಿ ಎಲ್ಲಕಡೆಗೂ ಹೋಗಿ, ತಮ್ಮ ಇತರ ಕೆಲಸಗಳ ಜೊತೆಗೆ ಧರ್ಮವನ್ನೂ ಪ್ರಕಟಿಸಬೇಕು. ಇದನ್ನು ಅಕ್ಷರ ಕೂಡ ತಪ್ಪದಂತೆ ಆಚರಿಸಬೇಕೆಂದು ಮಹಾಮಾತ್ರರ ಪರಿಷತ್ತು ಯುಕ್ತರಿಗೆ ಆಜ್ಞಾಪಿಸಬೇಕು."

"ಹೀಗೆ ಧರ್ಮವು ಅಭಿವೃದ್ಧಿಯಾಗಲೆಂದೇ ನಾನು ಧರ್ಮ ಮಹಾಮಾತ್ರರನ್ನೂ, ಸ್ತ್ರೀ ಅಧ್ಯಕ್ಷ ಮಹಾಮಾತ್ರರನ್ನೂ, ವ್ರಜ ಭೂಮಿಕರೇ ಮುಂತಾದ ಅನೇಕರನ್ನು ನಿಯಮಿಸಿರುವೆನು."

ಈ ರೀತಿ ಅನೇಕ ಹೊಸ ಅಧಿಕಾರಿಗಳ ನಿರ್ಮಾಣ ಮಾತ್ರವಲ್ಲದೆ, ರಾಜ್ಯದ ವ್ಯವಹಾರ ನಡೆಸುವ ರೀತಿಯನ್ನೂ ಅಶೋಕನು ಬದಲಾಯಿಸಿದನು. ಆ ಬದಲಾವಣೆಯನ್ನು ಇನ್ನೊಂದು ಶಾಸನದಲ್ಲಿ ಕಾಣಬಹುದು.

"ಹಿಂದೆ, ಇದಕ್ಕೆ ಮುಂಚೆ, ಯಾವಾಗಲೂ ಎಲ್ಲ ವೇಳೆಗಳಲ್ಲಿಯೂ ರಾಜ್ಯದ ವ್ಯವಹಾರಗಳನ್ನು ಬಂದು ತಿಳಿಸುವುದಾಗಲಿ, ಅದನ್ನು ನಡೆಸುವುದಾಗಲಿ ಇರಲಿಲ್ಲ. ನಾನು ಈ ರೀತಿ ಏರ್ಪಡಿಸಿರುವೆನು. ನಾನು ಊಟಮಾಡುತ್ತಿರಲಿ, ಅಂತಃಪುರದಲ್ಲಿರಲಿ, ಶಯನ ಗೃಹದಲ್ಲಿರಲಿ, ಕರುಹಟ್ಟಿಯಲ್ಲಿರಲಿ, ಗೋಷ್ಠಿಯಲ್ಲಿರಲಿ,

ಪಲ್ಲಕ್ಕಿಯಲ್ಲಿರಲಿ, ವಿಹಾರ ವನದಲ್ಲಿರಲಿ, ಕಾಲದೇಶಗಳು ಏನೇ ಇರಲಿ, ಜನಪದ ಸಂಬಂಧವಾದ ಎಲ್ಲ ವ್ಯವಹಾರಗಳನ್ನೂ ಪ್ರತಿವೇದಕರೆಂಬ ನನ್ನ ದೂತರು ನನಗೆ ಯಾವಾಗಲೂ ಬಂದು ತಿಳಿಸುತ್ತಿರಬೇಕು. ಒಂದು ದಾನವಾಗಬೇಕೆಂದು, ಇಲ್ಲವೆ ಒಂದು ಅವಸರದ ಕೆಲಸವಾಗಬೇಕೆಂದು ಎಂದಾದರೂ ಬಾಯಿಮಾತಿನಲ್ಲಿ ಆಜ್ಞಾಪಿಸಿದೆನೆನ್ನಿ; ಆ ಆಜ್ಞೆಯನ್ನು ನೆರವೇರಿಸಲು ಮಹಾಮಾತ್ರರ ಸಭೆಯಲ್ಲಿ ವಿವಾದವಾಗಲಿ ಬದಲಾವಣೆಯಾಗಲಿ ಜರುಗಿದರೆ, ಕಾಲದೇಶಗಳನ್ನು ಗಣಿಸದೆ ನನಗದನ್ನು ಆ ಗಳಿಗೆಯಲ್ಲಿಯೇ ತಿಳಿಸಬೇಕು. ಇದು ನನ್ನ ಆಜ್ಞೆ. ಏಕೆಂದರೆ, ನಾನು ನಡುವ ಪ್ರಮದದಲ್ಲಿಯೂ, ನನ್ನ ಕಾರ್ಯನಿರ್ವಹಣದಲ್ಲಿಯೂ ನನಗೇ ತೃಪ್ತಿಯಿಲ್ಲ."

ತಾನು ನಡೆಸುತ್ತಿರುವ ಕೆಲಸಗಳು ಸಾಲದೆಂದು ಅಶೋಕನೇನೋ ಹೇಳಿದನು. ಅವನು ಹಾಗೆ ಹೇಳಿದುದು ಅವನ ತೀವ್ರವಾದ ಆಕಾಂಕ್ಷೆಯನ್ನೂ ಅವನ ನಮ್ರತೆಯನ್ನೂ ತೋರುವುದಾದರೂ, ಪ್ರಜೆಗಳು ಧರ್ಮಪರಾಯಣರಾಗಲೆಂದು ನಡೆಸಿದ ಅವನ ಪ್ರಯತ್ನಗಳೇನೂ ಸ್ವಲ್ಪವಲ್ಲ. ಆ ಪ್ರಯತ್ನಗಳಿಗೆ ತಕ್ಕ ಫಲವೂ ಇಲ್ಲದೆ ಹೋಗಲಿಲ್ಲ. ಆದರೆ ಅಶೋಕನಿಗೆ ಧರ್ಮಪ್ರಸಾರದ ಆಸೆಯು ಬಹುವಾಗಿತ್ತಾಗಿ, ಅದುವರೆಗಿನ ಕೆಲಸಗಳಿಗೆ ಬಂದ ಫಲವು ಸ್ವಲ್ಪವಾಗಿ ತೋರಿತು. ಅವನ ಹದಿನಾಲ್ಕು ಶಾಸನಗಳ ಕೆಲವು ಭಾಗಗಳನ್ನು ನೋಡಿದರೆ, ಧರ್ಮಪ್ರಕಟನೆಯಲ್ಲಿ ಅವನಿಗಿದ್ದ ತೀವ್ರವಾದ ಆಸಕ್ತಿಯನ್ನು ಸ್ವಲ್ಪಮಟ್ಟಿಗೆ ತಿಳಿಯಬಹುದು.

"ಸರ್ವಲೋಕಹಿತವೇ ನನ್ನ ಕರ್ತವ್ಯವೆಂದು ನನ್ನ

ಭಾವನೆ. ಅವರ ಸಾಧನೆಗೆ ಮೂಲವೆಂದರೆ ನನ್ನ ಪ್ರಯತ್ನ ಮತ್ತು ಕಾರ್ಯನಿರ್ವಹಣ. ಸರ್ವಲೋಕ ಹಿತವನ್ನು ಹೆಚ್ಚಿಸುವು ದಕ್ಕಿಂತ ಹೆಚ್ಚಿನ ಕರ್ತವ್ಯವಿಲ್ಲ. ಜನರಿಗೆ ನಾನು ತೀರಿಸಬೇ ಕಾದ ಋಣವು ಹರಿದು, ಜೀವಕೋಟಿಯೆಲ್ಲವೂ ಇಹಲೋಕ ದಲ್ಲಿ ಸುಖವಾಗಿ, ಅಲ್ಲಿಂದ ಮೇಲೆ ಸ್ವರ್ಗವನ್ನು ಹೊಂದಲೆಂದೇ ನಾನು ಇಷ್ಟು ಶ್ರಮಿಸುತ್ತಿರುವುದು. ಗಣಿಸಲಸಾಧ್ಯವಾದ ವೀರ್ಯಪರಾಕ್ರಮದಿಂದಲ್ಲದೆ ಇವರ ಸಾಧನೆಯು ಕಷ್ಟ."

"ಜನರು ವರ್ತಮಾನ ಭವಿಷ್ಯತ್ಕಾಲಗಳಲ್ಲಿ ತನ್ನಿಂದ ಧರ್ಮಚಾರಿಗಳಾಗಿ ಧರ್ಮವಂತರಾಗಲಿ ಎಂಬ ಕೋರಿಕೆಯಿಂದ ಬರುವ ಕೀರ್ತಿ ಯಶಸ್ಸುಗಳೇ ಮೇಲು; ಮಿಕ್ಕ ಕೀರ್ತಿ ಮಹ ತ್ತುಗಳು ಅಷ್ಟು ಲಾಭದಾಯಕವಲ್ಲ—ಎಂದು ದೇವಾನಾಂ ಪ್ರಿಯನು ತಿಳಿದಿರುವನು. ಇದಕ್ಕಾಗಿಯೇ ಧರ್ಮದಾನದಿಂದ ಬರುವ ಕೀರ್ತಿ ಯಶಸ್ಸುಗಳನ್ನು ದೇವಾನಾಂ ಪ್ರಿಯನು ಕೋರು ವುದು. ಜನರೆಲ್ಲರೂ ಭವಪರಹಿತರಾಗಿ ಪರಲೋಕದಲ್ಲಿ ಸುಖಿಗಳಾಗಲೆಂದೇ ದೇವಾನಾಂ ಪ್ರಿಯ ಪ್ರಿಯದರ್ಶಿಯು ಇಷ್ಟು ಪರಾಕ್ರಮವನ್ನು ತೋರುತ್ತಿರುವುದು. ಜನರು ಯಾವ ಭಯ ದಿಂದ ಪಾರಾಗಬೇಕು? ಅಪುಣ್ಯ, ಎಂದರೆ ಪಾಪವೇ ಆ ಭಯ ವೆಂಬುದು. ಆ ಭಯವನ್ನು ದಾಟಬೇಕಾದರೆ, ಬಡವನಾಗಲಿ ಐಶ್ವರ್ಯವಂತನಾಗಲಿ, ಮೀರಿದ ಪರಾಕ್ರಮದಿಂದ ನಡೆದು ಎಲ್ಲ ವನ್ನೂ ಪರಿತ್ಯಜಿಸಬೇಕು. ಇಲ್ಲದಿದ್ದರೆ ಆ ಭಯವನ್ನು ದಾಟಲು ಕಷ್ಟ. ಅದರಲ್ಲಿಯೂ ಬಡವ ಬಲ್ಲಿದರಲ್ಲಿ, ಐಶ್ವರ್ಯವಂತನಿಗೆ ಇದು ಹೆಚ್ಚು ಕಷ್ಟ."

ಅಶೋಕನ ಈ ಪ್ರಯತ್ನ ಪರಾಕ್ರಮಗಳು ಸಫಲವಾದ

ವನ್ನು ಸಾರಲು ಆತನ ಇನ್ನೊಂದು ಶಾಸನ ವಾಣಿಯೇ ಸಾಕು.

"ಪ್ರಾಣಿವಧೆ, ಜೀವಹಿಂಸೆ, ಜ್ಞಾತಿಗಳಲ್ಲಿ ಅಗೌರವ, ಬ್ರಾಹ್ಮಣ ಶ್ರಮಣರಲ್ಲಿ ತಿರಸ್ಕಾರ ಮುಂತಾದುವು ಬಹುಕಾಲದಿಂದ ಅನೇಕ ವರ್ಷಗಳು ಪ್ರಬಲಿಸುತ್ತ ಬಂದಿವೆ. ಆದರೆ ಈಗ, ದೇವಾನಾಂ ಪ್ರಿಯ ಪ್ರಿಯದರ್ಶಿ ಪ್ರಭುವಿನ ಧರ್ಮಾಚರಣೆಯಿಂದ ಭೇರೀಘೋಷಕ್ಕೆ ಬದಲು ಧರ್ಮಘೋಷವು ಕೇಳಿಸುತ್ತಿದೆ. ಅನೇಕ ಉತ್ಸವಗಳನ್ನೂ ದೀಪಾರಾಧನೆಗಳನ್ನೂ ಜನರು ವರ್ತಿಸುತ್ತಿರುವರು. ನೂರಾರು ವರ್ಷಗಳಿಂದ ಕಾಣದಿದ್ದರೂ, ಈಗ ದೇವಾನಾಂ ಪ್ರಿಯ ಪ್ರಿಯದರ್ಶಿ ಪ್ರಭುವಿನ ಧರ್ಮಪ್ರಕಟಣೆಯಿಂದ ಜೀವಹಿಂಸೆಯೂ ಪ್ರಾಣಿವಧೆಯೂ ನಿಂತಿದೆ. ಜ್ಞಾತಿಗಳಲ್ಲಿ ಗೌರವ, ಬ್ರಾಹ್ಮಣರು ಭಿಕ್ಷುಗಳಿಗೆ ಸನ್ಮಾನ, ತಂದೆತಾಯಿಗಳ ಶುಶ್ರೂಷೆ. ವೃದ್ಧರಲ್ಲಿ ಮರ್ಯಾದೆ. ಇವೇ ಮೊದಲಾದ ಅನೇಕ ಧರ್ಮಾಚರಣೆಗಳು ಬೆಳೆದಿವೆ. ದೇವಾನಾಂ ಪ್ರಿಯ ಪ್ರಿಯದರ್ಶಿ ಪ್ರಭುವು ಈ ಧರ್ಮಾಚರಣೆಯನ್ನು ಇನ್ನೂ ವೃದ್ಧಿಗೊಳಿಸುವನು".

ಇದು ಇಷ್ಟನ್ನೂ ಅಶೋಕನು ಸಾಧಿಸಿದುದು, ಕಳಿಂಗಯುದ್ಧವಾದ ಮೇಲಿನ ನಾಲ್ಕೈದು ವರುಷಗಳ ಕಾಲದಲ್ಲಿ. ಅಭಿಷೇಕವಾದ ನಂತರ ಎಂಟು ವರ್ಷಕಾಲ ಏನೂ ಮಾಡದಿದ್ದವನು ಐದುವರ್ಷಗಳಲ್ಲಿ ಇಷ್ಟೆಲ್ಲ ಸಾಧಿಸಿದನೆಂದರೆ, ಆತನ ಧರ್ಮಪ್ರೇಮಕ್ಕೂ ಧರ್ಮಪರಾಕ್ರಮಕ್ಕೂ ಪ್ರಜಾವಾತ್ಸಲ್ಯಕ್ಕೂ ಇದಕ್ಕಿಂತ ಹೆಚ್ಚಿನ ಸಾಕ್ಷ್ಯ ಬೇಕಾಗಿಲ್ಲ.

# ಅಲ್ಲಿಂದ ಮುಂದೆ

**ಅಶೋಕನ ಧರ್ಮಕಾರ್ಯಗಳು**

ಹಿಂದೆ ಬುದ್ಧದೇವನು ಮರಣ ಹೊಂದಿದಾಗ, ಅವನ ದೇಹಕ್ಕೆ ಅಗ್ನಿಸಂಸ್ಕಾರ ಮಾಡಿದರು. ಸುಟ್ಟು ಉಳಿದ ಬೂದಿ ಮೂಳೆಗಳನ್ನು ಎಂಟು ಬೇರೆ ಬೇರೆ ಪ್ರಾಂತದ ನಾಯಕರು ಹಂಚಿಕೊಂಡರು. ತಮ್ಮ ಪಾಲಿಗೆ ಬಂದ ಆ ಬೂದಿ ಮೂಳೆಗಳನ್ನು ಅಮೂಲ್ಯವಾದ ಭರಣಿಗಳಲ್ಲಿಟ್ಟು, ಅವುಗಳ ಮೇಲೆ ವಿಚಿತ್ರವಾದ ಕಟ್ಟಡಗಳನ್ನು ಕಟ್ಟಿದರು. ಹೀಗೆ ಅವರವರ ಪ್ರಾಂತಗಳಲ್ಲಿ ಅವರವರು ಒಂದೊಂದು ಸಮಾಧಿ ಕಟ್ಟಿದರು. ಅದರಲ್ಲಿ ಬುದ್ಧನ ಮೂಳೆ ಬೂದಿಗಳು ಇದ್ದುದರಿಂದ ಜನರೆಲ್ಲರೂ ಅದಕ್ಕೆ ಪೂಜೆ ಒಪ್ಪಿಸುತ್ತಿದ್ದರು. ಆ ಸಮಾಧಿಗಳನ್ನು "ಸ್ತೂಪ"ಗಳು ಎಂದು ಕರೆಯುತ್ತಿದ್ದರು.

ಅಶೋಕನು ರಾಜನಾಗಿ ಹದಿನಾಲ್ಕು ವರ್ಷವಾಗುತ್ತ ಬಂತು. ಅದುವರೆಗು ಅನೇಕ ಧರ್ಮಕಾರ್ಯಗಳನ್ನು ಮಾಡಿದವನಿಗೆ, ತಾನು ೮೪,೦೦೦ ಸ್ತೂಪಗಳನ್ನು ಕಟ್ಟಿಸಬೇಕು ಎಂದು ಆಸೆಯಾಯಿತು. ಆದರೆ ಸ್ತೂಪಗಳನ್ನು ಕಟ್ಟಬೇಕೆಂದರೆ, ಅವುಗಳೊಳಗೆ ಇಡಲು ಬುದ್ಧನ ಮೂಳೆ ಬೂದಿಗಳು ಬೇಕಷ್ಟೆ. ಹಿಂದಿನ ಎಂಟು ಸ್ತೂಪಗಳ ಒಳಗಿರುವುದನ್ನು ತೆಗೆದು, ಅದನ್ನು ತನ್ನ ೮೪,೦೦೦ ಸ್ತೂಪಗಳಿಗೂ ಹಂಚಿಬಿಡುವುದೆಂದು ಬಗೆದು. ಅಶೋಕನು ಸೇನೆಯೊಡನೆ ಹೊರಟನು. ಸ್ತೂಪವೊಂದರ ಬಳಿ ಬಂದು ಅದನ್ನು ಕೆಡವಿ, ಅದರೊಳಗಿನ ಮೂಳೆ ಬೂದಿಗಳನ್ನು

ತೆಗೆದುಕೊಂಡನು. ಹೀಗೆ ಏಳು ಸ್ತೂಪಗಳನ್ನು ಮುಗಿಸಿ, ಎಂಟನೆಯ ಸ್ತೂಪವಿದ್ದ ರಾಮಗ್ರಾಮಕ್ಕೆ ಬಂದನು.

ರಾಮಗ್ರಾಮದ ಸ್ತೂಪವನ್ನು ಒಂದು ಮಹಾಸರ್ಪವು ಕಾಪಾಡುತ್ತಿತ್ತು. ಅಶೋಕನು ಆ ಸೂಪ್ತವನ್ನು ಒಡೆಯುವುದಕ್ಕೆ ಬಂದುದು ಕಂಡು. ರಾಮ ಗ್ರಾಮದ ಸರ್ಪವು ಬ್ರಾಹ್ಮಣ ವೇಷದಲ್ಲಿ ಬಂದಿತು. ಬಂದು "ರಾಜ! ನೀನು ಧರ್ಮಚಾರಿ. ದಯೆಯಿಟ್ಟು ನನ್ನ ಮನೆಗೆ ಬರಬೇಕು" ಎಂದಿತು. ಅದು ಅಲ್ಲಿಯ ಸರೋವರದ ನಾಗರಾಜನೆಂಬುದನ್ನು ಅಶೋಕನು ತಿಳಿದು, ಅದರ ಅರಮನೆಗೆ ಹೋದನು. ಅಲ್ಲಿ ಆ ಸರ್ಪವು "ರಾಜ! ನನ್ನ ಕೆಟ್ಟ ಕರ್ಮದ ಫಲವಾಗಿ ನಾನು ಹಾವಾಗಿರುವೆನು. ಬುದ್ಧನ ಸ್ತೂಪವನ್ನು ಆರಾಧಿಸಿ ಪುಣ್ಯ ಗಳಿಸಬೇಕೆಂದಿದ್ದೇನೆ. ಈಗ ನನ್ನಲ್ಲಿರುವ ಪೂಜಾ ದ್ರವ್ಯಗಳಿಗಿಂತ ಹೆಚ್ಚಿನವು ನಿನ್ನಲ್ಲಿದ್ದರೆ ನೀನು ಈ ಸ್ತೂಪವನ್ನು ಒಡೆಯಬಹುದು" ಎಂದಿತು. ಅಶೋಕನಿಗೆ ಅಂತಹ ಪೂಜಾ ಸಾಮಗ್ರಿಗಳು ತನ್ನಲ್ಲಿ ಇಲ್ಲವೆಂದು ತಿಳಿಯಿತು. ಆ ಸ್ತೂಪವನ್ನು ಮುಟ್ಟದೆಯೆ ಹಿಂದಿರುಗಿದನು.

ಏಕ್ಕ ಏಳು ಸ್ತೂಪಗಳ ಒಳಗಿನ ಮೂಳೆ ಬೂದಿಗಳನ್ನೇ ಹಂಚಿ, ೮೪,೦೦೦ ಸ್ತೂಪಗಳನ್ನು ಕಟ್ಟಬೇಕೆಂದಾಯಿತು. ಆದರೆ ೮೪,೦೦೦ ಸ್ತೂಪಗಳನ್ನೂ ಏಕ ಕಾಲದಲ್ಲಿ ಸ್ಥಾಪಿಸಬೇಕೆಂದು ಅಶೋಕನ ಬಯಕೆಯಿತ್ತು. ಅವನು ತನ್ನ ಬಯಕೆಯನ್ನು ಯಶಸ್ಸೆಂಬ ಬೌದ್ಧ ಸಂನ್ಯಾಸಿಗೆ ತಿಳಿಸಿದನು. ಯಶಸ್ಸನ ಸೂಚನೆಯಂತೆ ಅನೇಕ ದೈತ್ಯದಾನವರನ್ನು ಕರೆಸಿ, ಅವರಿಗೆ ಆ ಸ್ತೂಪಗಳಿಂದ ತಂದ ಬೂದಿ ಮೂಳೆಗಳನ್ನು ಹಂಚಿ

ಕೊಟ್ಟನು. ಒಳ್ಳೆಯ ಮುಹೂರ್ತ ಬಂದಾಗ ಉಪಗುಪ್ತನೆಂಬ ಸಂನ್ಯಾಸಿಯು ತನ್ನ ಕೈಯಿಂದ ಸೂರ್ಯನನ್ನು ಮುಚ್ಚಬೇಕೆಂದೂ. ಅದೇ ಸಮಯದಲ್ಲಿ ೮೪,೦೦೦ ದಾನವರೂ ೮೪,೦೦೦ ಸ್ತೂಪಗಳನ್ನು ಕಟ್ಟಬೇಕೆಂದೂ ಗೊತ್ತಾಯಿತು. ಅದೇ ಮೇರೆ ೮೪,೦೦೦ ಸ್ತೂಪಗಳ ಸ್ಥಾಪನೆಯಾಯಿತು.

ಮೇಲೆ ಹೇಳಿದುದು ಬೌದ್ಧರ ಬಾಯಿಂದ ಬಂದ ಕತೆ. ಅಶೋಕನು ೮೪,೦೦೦ ಸ್ತೂಪಗಳನ್ನೂ ಕಟ್ಟಿಲ್ಲದೆ ಇರಬಹುದಾದರೂ, ಕೆಲವು ಸ್ತೂಪಗಳನ್ನಾದರೂ ಕಟ್ಟಿರಬೇಕು. ಪಟ್ಟಕ್ಕೆ ಬಂದ ಹದಿನಾಲ್ಕನೆ ವರ್ಷದಲ್ಲಿ ಕನಕಮುನಿ ಎಂಬ ಬುದ್ಧನ ಸ್ತೂಪವನ್ನು ಒಂದಕ್ಕೆ ಎರಡರಷ್ಟು ದೊಡ್ಡದು ಮಾಡಿಸಿದನು. ಅದನ್ನು ಕುರಿತು ನಿಗ್ಲೀವಾ ಶಾಸನದಲ್ಲಿ "ದೇವಾನಾಂಪ್ರಿಯ ಪ್ರಿಯದರ್ಶಿ ಪ್ರಭುವು ತಾನು ಪಟ್ಟಕ್ಕೆ ಬಂದ ಹದಿನಾಲ್ಕನೆಯ ವರ್ಷದಲ್ಲಿ ಕನಕಮುನಿ ಬುದ್ಧನ ಸ್ತೂಪವನ್ನು ಎರಡರಷ್ಟು ದೊಡ್ಡದು ಮಾಡಿಸಿದನು" ಎಂದು ಹೇಳಿದೆ.

ಅಶೋಕನು ೮೪,೦೦೦ ಸ್ತೂಪಗಳನ್ನು ಕಟ್ಟಿಸಿದನೆಂಬುದು ಉತ್ಪ್ರೇಕ್ಷೆಯಾಗಿರಬಹುದಾದರೂ, ಅದು ಅಸಾಧ್ಯವೆಂದು ಹೇಳುವಂತಿಲ್ಲ. ಅವನು ಮಾಡಿರುವ ಇತರ ಅದ್ಭುತಕಾರ್ಯಗಳನ್ನೂ ನೋಡೋಣ. ಕಾಶ್ಮೀರದ ರಾಜಧಾನಿಯಾದ ಶ್ರೀನಗರವನ್ನು ಸ್ಥಾಪಿಸಿದವನು ಅಶೋಕ. ಅಲ್ಲಿಯೇ ಐನೂರು ವಿಹಾರಗಳನ್ನು ಎಂದರೆ ಬೌದ್ಧ ಸಂನ್ಯಾಸಿಗಳಿಗೆ ತಕ್ಕ ಮನೆಗಳನ್ನು ಕಟ್ಟಿಸಿದನು. ನೇಪಾಳದ ಬಳಿ ದೇವಪಟ್ಟಣವೆಂಬ ನಗರವನ್ನು ಸೃಜಿಸಿದನು. ಪಾಟಲೀಪುತ್ರದಲ್ಲಿ ತನ್ನ ಪುರದ ಅರಮನೆಯನ್ನು ಕೆಡವಿಸಿ ಕಲ್ಲಿನಲ್ಲಿ ಕಟ್ಟಿಸಿದನು. ಆ ಕಟ್ಟಡದ

ಸೌಂದರ್ಯವನ್ನೂ, ಅಲ್ಲಿಯ ಶಿಲ್ಪಕಲೆಯ ಕುಶಲತೆಯನ್ನೂ ಕಂಡು, ಚೀನಾದೇಶದ ಫಾಹಿಯಾನನೆಂಬವನು "ಇದು ಮನುಷ್ಯರು ಕಟ್ಟಿದುದಲ್ಲ. ಇದು ದೈತ್ಯದಾನವರ ಕಾರ್ಯ" ಎಂದನು.

ಅಲ್ಲದೆ, ಅಶೋಕನ ಶಾಸನಗಳ ಸಂಖ್ಯೆಯನ್ನೂ ಅವುಗಳ ಸ್ಥಿತಿಯನ್ನೂ ಕಂಡರೆ ಕೂಡ ಆಶ್ಚರ್ಯವಾಗುವುದು. ಕಲ್ಲು ಬಂಡೆಗಳ ಮೇಲೆ ಕೆತ್ತಿರುವುದು ಹಾಗಿರಲಿ. ಕಲ್ಲು ಕಂಬಗಳನ್ನು ನೋಡೋಣ. ಆ ಕಾಲದಲ್ಲಿ ಶಿಲ್ಪಕಲೆಯ ಮಟ್ಟವೆಷ್ಟು ಏರಿತ್ತೆಂಬುದಕ್ಕೆ ಆ ಕಂಬಗಳೇ ಸಾಕ್ಷಿ. ದೊಡ್ಡ ಬಂಡೆಗಳನ್ನು ಹುಡುಕಿ ತೆಗೆದು, ಅಲ್ಲಿ ಅದನ್ನು ಕಡೆದು ಕಂಬಮಾಡಿ, ಬೇಕಾದ ಕಡೆಗೆ ಅವುಗಳನ್ನು ತರುತ್ತಿದ್ದರು. ಆ ಕಂಬಗಳಲ್ಲಿ ಕೆಲವು ಐವತ್ತು ಅಡಿ ಎತ್ತರ ನಿಂತು, ಐವತ್ತು ಟನ್ ತೂಗುತ್ತವೆ. ಕ್ರಿ. ಶ. ೧೩೫೬ ರಲ್ಲಿ, ಆ ಕಂಬಗಳನ್ನು ಎತ್ತಿದ ಅನೇಕ ಶತಮಾನಗಳ ಮೇಲೆ, ತೋಪ್ರಾ ಶಿಲಾಸ್ತಂಭವನ್ನು ಹತ್ತಿರದ ದೆಹಲಿಗೆ ಸಾಗಿಸಲು ಸುಲ್ತಾನ್ ಫೆರೋಸ್‌ಷಹನು ಯತ್ನಿಸಿದನು. ಅದನ್ನು ಸಾಗಿಸಲು ೮೪,೦೦೦ ಮಂದಿ ಬೇಕಾಯಿತು! ಕಂಬಗಳ ಮೇಲೆ ಸಾಧಾರಣವಾಗಿ ಒಂದು ಘಂಟೆಯ ಆಕಾರದ ಕೆತ್ತನೆಯ ಕೆಲಸವಿರುತ್ತದೆ. ಅದರ ಮೇಲೆ ಒಂದು ವೃತ್ತಾಕಾರದ ಪೀಠ. ಪೀಠದ ಸುತ್ತಲೂ ಸೊಗಸಾದ ಕೆತ್ತನೆಯ ಕೆಲಸ—ಸಾಮಾನ್ಯವಾಗಿ ಕಮಲಗಳು, ಹಂಸಗಳು, ಧರ್ಮಚಕ್ರಗಳು. ಪೀಠದಮೇಲೆ ಒಂದು ಮೃಗ—ಕೆಲವೆಡೆ ಸಿಂಹ, ಕೆಲವೆಡೆ ಗೂಳಿ, ಕೆಲವೆಡೆ ಆನೆ; ಒಂದು ಕಡೆ ಗರುಡವಿವೆ. ಸಾಂಚಿ ಮತ್ತು ಸಾರನಾಥಗಳಲ್ಲಿ ನಾಲ್ಕು ಸಿಂಹಗಳು ಬೆನ್ನಿಗೆ ಬೆನ್ನು ಕೊಟ್ಟು ಪೀಠದ ಮೇಲೆ ನಿಂತಿವೆ. ಕಂಬಗಳ ತುದಿಯ ಈ ಅಲಂಕಾರಗಳನ್ನು

ಕಂಡು ಜಗತ್ತಿಗೆ ಜಗತ್ತೇ ವಿಸ್ಮಯಗೊಂಡಿದೆ. ಆ ಕಂಬಗಳನ್ನು ನಿಲಿಸಿ ಸಾವಿರಾರು ವರ್ಷಗಳಾದವು. ಅವುಗಳಲ್ಲಿ ಒಂದಾದ ಲೌರಿಯಾ-ಅರರಾಜ್ ಕಂಬವು ಇನ್ನೂ ನೆನ್ನೆ ಕಡೆದ ಕಂಬದಂತೆ ನಯವಾಗಿದೆ. ಅದು ಕಲ್ಲಿನದಾದರೂ ಲೋಹದಂತೆ ಮಿರುಗುತ್ತದೆ. ಶಿಲಾಸ್ತಂಭಗಳ ಉತ್ಕೃಷ್ಟತೆ ಹೀಗಿರಲು, ಅಶೋಕನು ಬರಾಬರ್ ಬೆಟ್ಟಗಳಲ್ಲಿ ಆಜೀವಕರಿಗಾಗಿ ದಾನಕೊಟ್ಟ ಗುಹೆಗಳ ಗೋಡೆಗಳು ಕನ್ನಡಿಯಂತೆ ಹೊಳೆಯುವುವು! ಅವನ ಕಾಲದ ಕಲಾಕುಶಲತೆಯ ಮಟ್ಟ ಹೀಗೆ ಇರಲಾಗಿ, ಆಗ ೮೪,೦೦೦ ಸ್ತೂಪಗಳು ಎದ್ದಿದ್ದರೂ ಎದ್ದಿರಬಹುದು.

## ಮೂರನೆಯ ಬೌದ್ಧ ಮಹಾಸಭೆ

ಅಶೋಕನು ಕನಕ ಮುನಿಯ ಸ್ತೂಪವನ್ನು ದೊಡ್ಡದು ಮಾಡಿಸಿದ ಮೂರು ವರುಷದನಂತರ, ಎಂದರೆ ಅವನಿಗೆ ಪಟ್ಟಾಭಿಷೇಕವಾದ ಹದಿನೇಳು ವರುಷಗಳ ಮೇಲೆ, ಪಾಟಲೀಪುತ್ರದಲ್ಲಿ ಬೌದ್ಧರ ಮೂರನೆಯ ಮಹಾಸಭೆ ನಡೆಯಿತು. ಆ ಸಭೆಯ ವಿಚಾರವು ಮಹಾವಂಶವೆಂಬ ಬೌದ್ಧಗ್ರಂಥದಲ್ಲಿ ಸಿಗುತ್ತದೆ.

ಸಭೆ ನಡೆಯುವ ವೇಳೆಗೆ, ಬೌದ್ಧ ಸಂನ್ಯಾಸಿಗಳಲ್ಲಿ ಒಡಕು ಹೆಚ್ಚಾಗಿತ್ತು. ಅವರ ಆಚರಣೆಗಳೆಲ್ಲವೂ ಹೀನವಾಗಿದ್ದುವು. ಅವರು ತಮ್ಮಲ್ಲಿನ ಭೇದಭಾವಗಳನ್ನು ಮರೆತು, ಸದಾಚಾರಗಳನ್ನು ಬೆಳೆಸಬೇಕೆಂದು ಬಯಸಿ, ಅಶೋಕನು ಅವರ ಬಳಿಗೆ ಒಬ್ಬ ಮಂತ್ರಿಯನ್ನು ಕಳುಹಿಸಿದನು. ಸಂನ್ಯಾಸಿಗಳು "ಪಾಷಂಡರು ಮುಂತಾದವರು ಇರುವ ಕಡೆ ನಾವು ಸದಾಚಾರ ನಡೆಸುವುದು ಹೇಗೆ?" ಎಂದು ಒರಟೊರಟಾಗಿ ಮಾತನಾಡಿದರು.

ಅವರ ಒರಟು ಮಾತಿಗೆ ಕೋಪಗೊಂಡು ಮಂತ್ರಿಯು ಅನೇಕ ಭಿಕ್ಷುಗಳನ್ನು ಕೊಂದನು.

ಭಿಕ್ಷುಗಳ ಕೊಲೆ ಅಶೋಕನಿಗೆ ತಿಳಿಯಿತು. ತನಗೆ ಪಾಪ ತಟ್ಟಿತೋ ಎಂದು ಹೆದರಿ, ತಕ್ಕ ಪ್ರಾಯಶ್ಚಿತ್ತ ನಡೆಸಲು ತಿಷ್ಯನೆಂಬ ಸಂನ್ಯಾಸಿಯನ್ನು ಕರೆಸಿದನು. ಆದರೆ ಪ್ರಾಯಶ್ಚಿತ್ತದ ಮಾತು ಎತ್ತುವ ಮೊದಲು, ತಿಷ್ಯನು ತನ್ನ ಅರ್ಹತೆಯನ್ನು ಅಶೋಕನಿಗೆ ತೋರಿಸಬೇಕಾಯಿತು. ತಿಷ್ಯನು ಒಂದು ಚೌಕವಾದ ಸ್ಥಲ ಮಾಡಿ, ಆ ಚೌಕದ ಒಂದು ಮೂಲೆಯಲ್ಲಿ ರಥ, ಇನ್ನೊಂದು ಮೂಲೆಯಲ್ಲಿ ಕುದುರೆ, ಮತ್ತೊಂದು ಮೂಲೆಗೆ ಮನುಷ್ಯರನ್ನು ನಿಲ್ಲಿಸಿ, ಉಳಿದ ಮೂಲೆಯಲ್ಲಿ ನೀರು ತುಂಬಿದ ಪಾತ್ರೆಯನ್ನಿಟ್ಟನು. ಇಟ್ಟು, ಅಲ್ಲಿ ಭೂಕಂಪವನ್ನು ಉಂಟು ಮಾಡಿದನು. ಅಲ್ಲಿದ್ದ ರಥ, ಕುದುರೆ, ಮನುಷ್ಯ, ಪಾತ್ರೆ ಇವುಗಳ ಅರ್ಧಭಾಗಕ್ಕೆ ಮಾತ್ರ ಭೂಕಂಪದ ಅನುಭವವಾಯಿತು. ಆ ಅದ್ಭುತದಿಂದ ತಿಷ್ಯನ ಅರ್ಹತೆಯು ಸ್ಥಿರವಾಯಿತು. ಅಶೋಕನು ಅವನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ "ಸಚಿವನು ಮಾಡಿದ ಘೋರ ಕೃತ್ಯಕ್ಕೆ ನಾನು ಉತ್ತರವಾದಿಯೇ?" ಎಂದು ಕೇಳಿದನು. "ಮಂತ್ರಿಯು ಮಾಡಿದ ಕೊಲೆಯನ್ನು ನೀನು ಉಪ್ಪೇಕ್ಷಿಸಿರಲಿಲ್ಲವಾದುದರಿಂದ ನಿನಗೆ ಪಾಪ ಬರದು" ಎಂದು ತಿಷ್ಯನು ಹೇಳಲು, ಅಶೋಕನಿಗೆ ಸಮಾಧಾನವಾಯಿತು.

ಬೌದ್ಧರ ಒಡಕುಗಳನ್ನು ತಪ್ಪಿಸಿ, ಅವರನ್ನು ಧರ್ಮಶಾಲಿಗಳಾಗಿ ಮಾಡಬೇಕೆಂದು ಅಶೋಕನಿಗೆ ಇನ್ನೂ ಮನಸ್ಸಿನಲ್ಲಿತ್ತು. ಹೇಗಿದ್ದರೂ ಆರ್ಯ ತಿಷ್ಯನು ಬಂದಿದ್ದನು. ಅದೇ ಸಮಯದಲ್ಲಿ ಬೌದ್ಧರ ಸಭೆ ಸೇರಿಸಬೇಕೆಂದು ಅರಸನು ಜಂಬೂ

ದ್ವೀಪದ ಆರ್ಯರನ್ನೆಲ್ಲ ಕರೆಸಿದನು. ತಿಷ್ಯನು ಬಂದವರ ಯೋಗ್ಯತೆಯನ್ನು ಕಂಡು, ಯೋಗ್ಯರಾದ ಸಾವಿರ ಆರ್ಯರನ್ನು ಆರಿಸಿದನು. ಆಸ್ತಿಕರಾದ ಆ ಬೌದ್ಧರ ಸಭೆ ಸೇರಿತು. ಆ ಗೋಷ್ಠಿಗೆ ತಿಷ್ಯನೇ ಮುಖ್ಯಸ್ಥನಾಗಿ ನಿಂತು, ಎಲ್ಲರ ಧರ್ಮಸಂಶಯಗಳನ್ನೂ ನೀಗಿದನು. ಆ ಮಹಾಸಭೆಯು ಮುಗಿಯಬೇಕಾದರೆ ಒಂಬತ್ತು ತಿಂಗಳಾಯಿತು. ಅಶೋಕನೆ ಕಾರಣನಾಗಿ, ಮೂರನೆಯ ಸಭೆ ಸೇರಿ, ಧರ್ಮವು ಪುನಃ ಉದ್ಧಾರವಾಯಿತು. ಸಭೆ ಮುಗಿದ ಮೇಲೆ, ಧರ್ಮ ಉದ್ಧಾರವಾದುದನ್ನು ಕಂಡು "ಸಾಧು" ಎಂದ ಕೂಗುವಂತೆ, ಭೂಮಿ ನಡುಗಿತು.

## ಸಿಂಹಳದಲ್ಲಿ ಮತಪ್ರಚಾರ

ಅಶೋಕನು ಪಾಟಲೀಪುತ್ರದಲ್ಲಿ ರಾಜನಾಗಿದ್ದಾಗ, ಸಿಂಹಳದಲ್ಲಿ ತಿಷ್ಯನೆಂಬವನು ದೊರೆಯಾಗಿದ್ದನು. ತಿಷ್ಯನು ಅಶೋಕನನ್ನು ಕಂಡಿರಲಿಲ್ಲ. ಆದರೆ ಅಶೋಕನ ಸದ್ಗುಣಗಳು ತಿಷ್ಯನ ವರೆಗೂ ಮುಟ್ಟಿತ್ತು. ತಿಷ್ಯನು ಅದು ಕೇಳಿ ಮೆಚ್ಚಿ, ಅಶೋಕನ ಮೈತ್ರಿಯನ್ನು ಬಯಸಿ, ಪಾಟಲೀಪುರಕ್ಕೆ ತನ್ನ ರಾಯಭಾರಿಯನ್ನು ಕಳುಹಿಸಿದನು. ಬಂದವರು ಅರಸನ ಆತಿಥ್ಯವನ್ನು ಸ್ವೀಕರಿಸಿ, ಬುದ್ಧನ ಧರ್ಮದ ಮಹತ್ವವನ್ನು ತಿಳಿದು ಹಿಂದಿರುಗಿದರು. ಅವರು ಹಿಂದಿರುಗಿದಮೇಲೆ, ತಾನೂ ಬುದ್ಧನ ಧರ್ಮವನ್ನು ತಿಳಿದು ಅದರಂತೆ ನಡೆಯಬೇಕೆಂದು ದೊರೆ ತಿಷ್ಯನಿಗೂ ಆಸೆ ತೀವ್ರವಾಯಿತು.

ಆ ವೇಳೆಗೆ ಮೂರನೆಯ ಬೌದ್ಧಮಹಾಸಭೆ ಸೇರಿ ಮುಗಿದಿತ್ತು. ಆಗ ಸಭೆಗೆ ಮುಖ್ಯಸ್ಥನಾದ ತಿಷ್ಯನು, ಬೌದ್ಧ ಧರ್ಮ

ವನ್ನು ಎಲ್ಲ ಕಡೆಗೂ ಹಬ್ಬಿಸಲು ಕೆಲವು ಪ್ರಚಾರಕರನ್ನು ನೇಮಿಸಿದನು. ಅವರು ಕಾಶ್ಮೀರ, ಗಾಂಧಾರ, ಮಹಿಷಮಂಡಲ, ಬನವಾಸಿ, ಅಪರಾನ್ತಕ, ಮಹಾರಾಷ್ಟ್ರ, ಯವನದೇಶ, ಹಿಮಾಲಯ ಪ್ರಾಂತ, ಸುವರ್ಣಭೂಮಿ, ಸಿಂಹಳಗಳಿಗೆ ಹೋಗಿ ಧರ್ಮವನ್ನು ಸಾರಿದರು. ಅಶೋಕನ ಧರ್ಮಪ್ರಚಾರಕರು ಹೋದ ನಾಡುಗಳಲ್ಲಿ ಮಹಿಷಮಂಡಲವೂ, ಬನವಾಸಿಯೂ ನಮ್ಮ ಕರ್ನಾಟಕಕ್ಕೆ ಸೇರಿದವು. ಮಹಿಷಮಂಡಲವು ಈಗಿನ ಮೈಸೂರು ; ಬನವಾಸಿಯು ಈಗಿನ ಉತ್ತರ ಕನ್ನಡ.

ಆ ಪ್ರಚಾರಕರಲ್ಲಿ ಸಿಂಹಳಕ್ಕೆ ಹೋದವನು ಮಹೇಂದ್ರನೆಂಬವನು. ಮಹೇಂದ್ರನು ಅಶೋಕನ ಮಗ. ಸಿಂಹಳಕ್ಕೆ ಹೊರಟಾಗ ಅವನಿಗೆ ಮುವ್ವತ್ತೆರಡು ವಯಸ್ಸು. ಅವನು ಚಿಕ್ಕಂದಿನಲ್ಲಿಯೇ ಬೌದ್ಧ ಧರ್ಮವನ್ನು ಸ್ವೀಕರಿಸಿ ಸಂನ್ಯಾಸಿಯಾದನು. ಶ್ರದ್ಧೆಯಿಂದ ಆಚರಿಸಿ ಮೇಲೇರಿ, ಸಿಂಹಳಕ್ಕೆ ಪ್ರಚಾರಕನಾಗಿ ಹೊರಟಿದ್ದನು. ಅವನ ಜೊತೆಯಲ್ಲಿ ಇನ್ನೂ ಐವರು ಹೊರಟಿದ್ದರು. ಸಿಂಹಳದಲ್ಲಿ ತಿಷ್ಯನೂ ಅವನ ಪ್ರಜೆಗಳೂ ಮಹೇಂದ್ರನು ಬಂದಾನೇ ಎಂದು ಚಾತಕ ಪಕ್ಷಿಗಳಂತೆ ಕಾಯ್ದಿದ್ದರು. ಮಹೇಂದ್ರನ ಧರ್ಮಬೋಧೆಗೆ ಕಿವಿಗೊಟ್ಟು. ತಿಷ್ಯನು ಮಾತ್ರವಲ್ಲದೆ ಅವನ ನಲುವತ್ತು ಸಾವಿರ ಪರಿಜನರೂ ಬೌದ್ಧರಾದರು.

ತಿಷ್ಯನಿಗೆ ಅನುಲೆಯೆಂಬ ಸುಗಳಿದ್ದರು. ಅವಳೂ ಅವಳ ಜೊತೆಯವರನೇಕರೂ ತಾವೂ ಬೌದ್ಧ ಧರ್ಮವನ್ನು ಸೇರಬೇಕೆಂದು ಬಯಸಿದರು. ಆದರೆ ಹೆಂಗಸರನ್ನು ಗಂಡಸು ಸಂಘಕ್ಕೆ ಸೇರಿಸಿಕೊಳ್ಳುವಂತಿರಲಿಲ್ಲ. ಇದು ತಿಳಿದು ತಿಷ್ಯನು ಸಂಘಮಿತ್ರೆ

## ಅಶೋಕನ ಶಾಸನಗಳ ಲಿಪಿ ಕಣ್ಣಿಗೆ ಹೇಗೆ ಕಾಣುತ್ತದೆ, ಗೊತ್ತೆ?—

ಎದುರಿನ ಚಿತ್ರ ನೋಡಿ. ಇದು ಮೈಸೂರು ಸಂಸ್ಥಾನದಲ್ಲಿರುವ ಬ್ರಹ್ಮಗಿರಿ ಶಿಲಾಶಾಸನದ ಚಿತ್ರ. ಇದರ ಲಿಪಿ ಬ್ರಾಹ್ಮೀ ಲಿಪಿ. ಈ ಬ್ರಾಹ್ಮೀ ಲಿಪಿಯು ನಮ್ಮ ಹಿಂದೂದೇಶದ ವರ್ಣಮಾಲೆಗಳಿಗೆ ಮಾತ್ರವಲ್ಲದೆ, ಬರ್ಮಾ ಟಿಬೆಟ್ ಸಿಂಹಳ ದೇಶಗಳ ಲಿಪಿಗಳಿಗೂ ಮೂಲವಾದದು.

## ಅಶೋಕನ ಶಾಸನಗಳ ಭಾಷೆ ಕಿವಿಗೆ ಹೇಗೆ ಕೇಳುತ್ತದೆ, ಗೊತ್ತೆ?—

ಕೆಳಗಿನ ಶಾಸನವನ್ನು ಓದಿ. ಅದು, ಅಶೋಕನು ಬರೆಸಿದ ಹದಿನಾಲ್ಕು ಶಿಲಾಶಾಸನಗಳಲ್ಲಿ ಏಳನೆಯದು. ಈ ಶಾಸನಗಳ ಭಾಷೆಯನ್ನು ಸಾಮಾನ್ಯವಾಗಿ ಮಾಗಧೀ ಎಂದು ಕರೆಯುತ್ತಾರೆ.

"ದೇವಾನಂ ಪಿಯೋ ಪಿಯದಸಿ ರಾಜಾ ಸರ್ವತ ಇಚ್ಛತಿ ಸವೇ ಪಾಸಂಡಾ ವಸೇಯು | ಸವೇ ತೇ ಸಯಮಂ ಚ ಭಾವ ಸುಧಿಂ ಚ ಇಚ್ಛತಿ | ಜನೋ ತು ಉಚಾವಚಛಂದೋ ಉಚಾವಚರಾಗೋ | ತೇ ಸರ್ವಂ ವ ಕಾಸಂತಿ ಏಕದೇಸಂ ವ ಕಸಂತಿ | ವಿಪುಲೇ ತು ಪಿ ದಾನೇ ಯಸ ನಾಸ್ತಿ ಸಯಮೋ ಭಾವಸುಧಿತಾ ವ ಕತಂಞತಾ ವ ದಢಭತಿತಾ ಚ ನಿಚಾ ಬಾಢಂ ||"—ಏಳನೆಯ ಶಿಲಾಶಾಸನ—ಗಿರಿನಾರ್.

## ಮೇಲೆ ಓದಿದುದರ ಅರ್ಥವೇನು?—ಇದು. ಅದರ ಕನ್ನಡ ರೂಪ:

"ದೇವನಾಂಪ್ರಿಯ ಪ್ರಿಯದರ್ಶಿ ರಾಜನು ಸರ್ವ ಪಾಷಂಡರೂ ಸರ್ವತ್ರ ವಾಸಿಸಲೆಂದು ಇಚ್ಛಿಸುತ್ತಾನೆ. ಅವರು ಸರ್ವರೂ ಸಂಯಮವನ್ನೂ ಭಾವಶುದ್ಧಿಯನ್ನೂ ಇಚ್ಛಿಸುತ್ತಾರೆ. ಜನರಾದರೋ ತೆರತೆರದ ಆಸೆಯುಳ್ಳವರು, ತೆರತೆರದ ರಾಗವುಳ್ಳವರು. ಅವರು (ತಮ್ಮ ಕರ್ತವ್ಯವಲ್ಲಿ) ಎಲ್ಲವನ್ನೂ ಮಾಡುವರು, ಅಥವ ಒಂದು ಭಾಗವನ್ನು ಮಾಡುವರು. ದಾನ ವಿಪುಲವಾಗಿದ್ದರೂ, ಸಂಯಮ, ಭಾವಶುದ್ಧಿ, ಕೃತಜ್ಞತೆ, ದೃಢಭಕ್ತಿ ಇವು ಇಲ್ಲದವನು ನಿಜವಾಗಿಯೂ ನೀಚನು."

ಯನ್ನು ಬರಬಂಯುಸಿಸನು. ಸಂಘಮಿತ್ರೆಯು ಮಹೇಂದ್ರನ ತಂಗಿ. ಅವನಿಗಿಂತ ಎರಡು ವರುಷ ಚಿಕ್ಕವಳು. ಅಣ್ಣನು ಚಿಕ್ಕ ವಯಸ್ಸಿನಲ್ಲಿ ಭಿಕ್ಷುವಾದಂತೆ ತಂಗಿಯೂ ಚಿಕ್ಕ ವಯಸ್ಸಿನಲ್ಲಿಯೇ ಭಿಕ್ಷುಣಿಯಾಗಿದ್ದಳು. ಸಂಘಮಿತ್ರೆಯನ್ನು ಕಳುಹಿಸಿಕೊಡುವುದು ಮಾತ್ರವಲ್ಲದೆ, ಬೋಧಿವೃಕ್ಷದ ಒಂದು ರೆಂಬೆಯನ್ನೂ ಕಳುಹಿಸಿಕೊಡಬೇಕೆಂದು ತಿಷ್ಯನು ಅಶೋಕನನ್ನು ಪ್ರಾರ್ಥಿಸಿದನು. ಆ ಪ್ರಾರ್ಥನೆಯನ್ನು ತಂದ ದೂತನ ಹಿಂದುಗಡೆಯೇ ಇನ್ನೊಬ್ಬ ದೂತನು ಬಂದನು. ಬಂದವನು, ಬುದ್ಧನ ಮೂಳೆ ಬೂದಿಗಳನ್ನು ತಿಷ್ಯನು ಬೇಡುವನೆಂದು ಅಶೋಕನಿಗೆ ನಿವೇದಿಸಿದನು. ಅರಸನು ಸಿಂಹಳ ರಾಜನ ಪ್ರಾರ್ಥನೆಯನ್ನು ಮನ್ನಿಸಿ ಸಂಘಮಿತ್ರೆಯನ್ನು ಬೀಳ್ಕೊಟ್ಟುದಲ್ಲದೆ, ಬೋಧಿವೃಕ್ಷದ ರೆಂಬೆಯನ್ನೂ ಬುದ್ಧನ ಮೂಳೆ ಬೂದಿಗಳನ್ನೂ ಕಳುಹಿಸಿದನು.

ಸಂಘಮಿತ್ರೆಯು ಸಿಂಹಳವನ್ನು ಸೇರಿದಳು. ರಾಜಕುಮಾರಿ ಅನುಲೆಯೂ. ಅನೇಕ ಅಂತಃಪುರ ಸ್ತ್ರೀಯರೂ, ಬಹು ಜನ ಪುರವನಿತೆಯರೂ ಬೌದ್ಧರಾದರು. ತಿಷ್ಯನು ಅಶೋಕನು ಕಳುಹಿಸಿದ ಬೋಧಿವೃಕ್ಷದ ರೆಂಬೆಯನ್ನು ಬಹು ಉತ್ಸವದಿಂದ ನಾಟಿಸಿ ಬೆಳೆಸಿದನು ; ಬಂದ ಬುದ್ಧನ ಬೂದಿ ಮೂಳೆಗಳನ್ನು ಕೊಂಡು, ಅವರಮೇಲೆ ಒಂದು ಸ್ತೂಪವನ್ನು ಕಟ್ಟಿಸಿದನು.

ಮಹೇಂದ್ರ ಸಂಘಮಿತ್ರೆಯರು ಸಿಂಹಳೀಯರಿಗೆ ಧರ್ಮವನ್ನು ಬೋಧಿಸುತ್ತ ಅಲ್ಲಿಯೆ ನಿಂತರು. ನಿಂತು, ತಿಷ್ಯನು ತಮಗೆ ಕಟ್ಟಿಸಿಕೊಟ್ಟ ವಿಹಾರಗಳಲ್ಲಿ ವಾಸಿಸುತ್ತ, ಧರ್ಮಪರಾಯಣರಾಗಿದ್ದು, ತಮ್ಮ ಕಡೆಯ ದಿನಗಳನ್ನು ಅಲ್ಲಿಯೆ ಕಳೆದರು.

**ಅಶೋಕನ ಕ್ಷೇತ್ರ ಯಾತ್ರೆ**

ಅಶೋಕನು ಅನೇಕ ಸ್ತೂಪಗಳನ್ನು ಕಟ್ಟಿಸಿದನು. ಬೌದ್ಧರಲ್ಲಿ ಒಗ್ಗಟ್ಟನ್ನು ಬೆಳೆಸಿ, ಧರ್ಮವನ್ನು ವೃದ್ಧಿಗೊಳಿಸಬೇಕೆಂದು ಮೂರನೆಯ ಬೌದ್ಧ ಮಹಾಸಭೆ ನಡೆಸಿದನು. ಬುದ್ಧ ದೇವನ ಧರ್ಮವನ್ನು ಸರ್ವರೂ ತಿಳಿಯಲೆಂದು ಧರ್ಮಪ್ರಚಾರಕರನ್ನು ದಿಕ್ಕು ದಿಕ್ಕಿಗೂ ಕಳುಹಿಸಿದನು. ಆದಾದ ಮೇಲೆ, ಬುದ್ಧನು ಸಂಚರಿಸಿದ ಸ್ಥಳಗಳನ್ನೆಲ್ಲ ಕಾಣಬೇಕೆಂದು ಅವನಿಗೆ ಆಸೆಯಾಯಿತು. ಆದರೆ ಬುದ್ಧನು ಸಂಚರಿಸಿದ ಪವಿತ್ರ ಕ್ಷೇತ್ರಗಳೆಲ್ಲವೂ ಅವನಿಗೆ ಗೊತ್ತಿರಲಿಲ್ಲ. ಆ ಸಮಯದಲ್ಲಿ, ಉಪಗುಪ್ತನೆಂಬ ಬೌದ್ಧ ಸಂನ್ಯಾಸಿಯು ಮಧುರಾನಗರದಲ್ಲಿ ಇದ್ದನು. ಅವನಿಗೆ ಆ ಕ್ಷೇತ್ರಗಳೆಲ್ಲವೂ ಗೊತ್ತಿತ್ತು. ಅವನ ಸಹಾಯವನ್ನು ಬಯಸಿ ಅಶೋಕನು ಮಧುರೆಗೆ ಹೋಗಬೇಕೆಂದು ಇರುವಷ್ಟರಲ್ಲಿ ಉಪಗುಪ್ತನೇ ಪಾಟಲೀಪುತ್ರಕ್ಕೆ ಬಂದನು. ಅಶೋಕನ ಆಶಯವನ್ನು ತಿಳಿದು, ಕ್ಷೇತ್ರಸಂದರ್ಶನೆಗಾಗಿ ಅವನನ್ನು ಕರೆದುಕೊಂಡು ನಡೆದನು.

ಅವರು ಮೊದಲು ಬಂದುದು ಲುಂಬಿಣೀವನಕ್ಕೆ. ಅಲ್ಲಿಯೆ ಬುದ್ಧನು ಹುಟ್ಟಿದುದು. ಮುಂದೆ ಕ್ರಮವಾಗಿ ಅಲ್ಲಿಂದ ಹಿಡಿದು, ಬುದ್ಧನು ಮಡಿಯುವ ವರೆಗೆ ಯಾವ ಯಾವ ಎಡೆಗೆ ನಡೆದಿದ್ದನೋ ಅಲ್ಲಿಗೆಲ್ಲ ಹೋದರು. ಬುದ್ಧನ ಪಾದ ತಗುಲಿ ಪವಿತ್ರವಾದ ಕ್ಷೇತ್ರಗಳನ್ನೆಲ್ಲ ಒಂದುಳಿಯದ ಹಾಗೆ ನೋಡಿಕೊಂಡು ಬಂದರು. ಅಶೋಕನು ಭಕ್ತಿಪರವಶನಾಗಿ, ತಾನು ಸಂದರ್ಶಿಸಿದ ಪ್ರತಿ ಪುಣ್ಯಸ್ಥಳದಲ್ಲಿಯೂ ನೂರಾರು ಹೊನ್ನು ದಾನವಮಾಡಿ. ಒಂದೊಂದು ಚೈತ್ಯವನ್ನು ಕಟ್ಟಿಸಿದನು. ಈ

ಚೈತ್ಯವೆಂಬುದು ಬೌದ್ಧರ ದೇವಾಲಯ.

ಅಶೋಕನು ಈ ರೀತಿ ಕ್ಷೇತ್ರಯಾತ್ರೆ ಮಾಡಿದನೆಂದು ಬೌದ್ಧರು ಹೇಳುವರು. ಅದರಲ್ಲಿ ಎರಡು ಯಾತ್ರೆ ಮಾತ್ರ ಅವನ ಶಾಸನಗಳಿಂದ ಸಿದ್ಧವಾಗುತ್ತವೆ. ಒಂದು, ಆತನು ಲುಂಬಿಣಿ ವನಕ್ಕೆ ಹೋದುದು. ಇನ್ನೊಂದು, ತಾನು ಹಿಂದೆ ಎರಡರಷ್ಟು ದೊಡ್ಡದು ಮಾಡಿಸಿದ ಕನಕಮುನಿಯ ಸ್ತೂಪ ವನ್ನು ದರ್ಶಿಸಿದುದು.

ರುಮ್ಮಿಂದೈ ಶಿಲಾಸ್ತಂಭದ ಮೇಲೆ "ದೇವಾನಾಂ ಪ್ರಿಯ ಪ್ರಿಯದರ್ಶಿ ಪ್ರಭುವು ಪಟ್ಟಾಭಿಷಿಕ್ತನಾದ ಇಪ್ಪತ್ತನೆಯ ವರ್ಷ ದಲ್ಲಿ ಶಾಕ್ಯಮುನಿ ಬುದ್ಧನು ಜನಿಸಿದ ಈ ಪುಣ್ಯಸ್ಥಳವನ್ನು ತಾನೇ ಬಂದು ಪೂಜಿಸಿದನು. ಇಲ್ಲಿ, ಬುದ್ಧನು ಜನಿಸಿದ ಸ್ಥಳವೆಂಬ ಗೌರವಕ್ಕಾಗಿ, ಒಂದು ಶಿಲಾವಿಗ್ರಹವನ್ನು ನಿರ್ಮಿಸಿ, ಶಿಲಾಸ್ತಂಭ ವನ್ನು ಎತ್ತಿಸಿದನು. ಆ ಮಹಾತ್ಮನು ಹುಟ್ಟಿ, ಈ ಲುಂಬಿಣೀ ಗ್ರಾಮವು ಪವಿತ್ರವಾಗಿದೆ. ಈ ಗ್ರಾಮವು ಪ್ರಭುವಿಗೆ ರಾಜಾ ದಾಯ ಕೊಡಬೇಕಾಗಿಲ್ಲ. ದಾನ ಕೊಡಲು ಪ್ರಭುವಿಗೆ ಈ ಗ್ರಾಮವು ತಕ್ಕುದಾಗಿದೆ." ಎಂದು ಅಶೋಕನು ಬರೆಸಿದ್ದಾನೆ.

ನಿಗ್ಲೀವಾ ಶಿಲಾಸ್ತಂಭದ ಮೇಲೆ "ದೇವಾನಾಂ ಪ್ರಿಯ ಪ್ರಿಯದರ್ಶಿ ಪ್ರಭುವು ತಾನು ಪಟ್ಟಕ್ಕೆ ಬಂದ ಹದಿನಾಲ್ಕನೆಯ ವರ್ಷದಲ್ಲಿ ಕನಕಮುನಿ ಬುದ್ಧನ ಸ್ತೂಪವನ್ನು ಎರಡರಷ್ಟು ದೊಡ್ಡದು ಮಾಡಿಸಿದನು. ಅಲ್ಲದೆ, ಪಟ್ಟಕ್ಕೆ ಬಂದ ಇಪ್ಪತ್ತ ನೆಯ ವರ್ಷದಲ್ಲಿ ಅಲ್ಲಿಗೆ ತಾನೇ ಬಂದು, ಪೂಜಿಸಿ, ಶಿಲಾಸ್ತಂಭ ವನ್ನು ಎತ್ತಿಸಿದನು." ಎಂದಿದೆ.

ಅದರಿಂದ, ಪಟ್ಟಕ್ಕೆ ಬಂದ ಇಪ್ಪತ್ತನೆಯ ವರ್ಷದಲ್ಲಿ

ಅಶೋಕನು ಕ್ಷೇತ್ರಯಾತ್ರೆ ಮಾಡಿದನೆಂದು ತಿಳಿಯಬಹುದು.

**ಏಳು ಶಿಲಾಸ್ತಂಭ ಶಾಸನಗಳು**

ಅಶೋಕನು ಕಳಿಂಗ ಯುದ್ಧವಾದ ಮೇಲೆ ತಾನು ಮಾಡಿದ ಕೆಲಸಗಳನ್ನು ತನ್ನ ಹದಿನಾಲ್ಕು ಶಿಲಾಶಾಸನಗಳಲ್ಲಿ ಬರೆಸಿದನಷ್ಟೆ. ಅದಾದ ಮುಂದಿನ ಹದಿನಾಲ್ಕು ವರ್ಷಗಳಲ್ಲಿ ತಾನು ಮಾಡಿದುದನ್ನೆಲ್ಲ ಕುರಿತು ಏಳು ಶಿಲಾಸ್ತಂಭ ಶಾಸನಗಳನ್ನು ಬರೆಸಿದನು. ಆ ಶಾಸನಗಳನ್ನು ಬರೆಸಿದುದು ಅವನು ಪಟ್ಟಾಭಿಷಿಕ್ತನಾದ ಇಪ್ಪತ್ತಾರನೆಯ ವರ್ಷದಲ್ಲಿ.

ಅಶೋಕನು ಈ ಶಾಸನಗಳನ್ನು ಬರೆಸುವಾಗಲೂ 'ಜನರು ಧರ್ಮವನ್ನು ಪಾಲಿಸಲೆಂದು, ಇದು ಚಿರಸ್ಥಾಯಿಯಾಗಿರಲೆಂದು ಈ ಧರ್ಮಲಿಪಿಯನ್ನು ಬರೆಸಿರುವೆನು", "ಜನರ ಹಿತ ಸುಖಗಳಿಗಾಗಿ, ಅವರು ಈ ಶಾಸನವನ್ನು ಮೀರದೆ ಅನೇಕ ವಿಧಗಳಲ್ಲಿ ಧರ್ಮಾಭಿವೃದ್ಧಿಯನ್ನು ಹೊಂದಲೆಂದು ಇದು ಬರೆಸಿರುವೆನು", "ನನ್ನ ಪುತ್ರ ಪೌತ್ರ ಪ್ರಪೌತ್ರರು ಆಳುವ ವರೆಗೆ, ಸೂರ್ಯ ಚಂದ್ರರಿರುವ ವರೆಗೆ, ಜನರು ಇದನ್ನು ಆಚರಿಸಲೆಂದು ನಾನು ಆಜ್ಞೆ ಮಾಡಿದೆನು"—ಎಂದು ಬರೆಸಿದ್ದಾನೆ.

ಧರ್ಮಾಭಿವೃದ್ಧಿಯ ಮಾತು ತೆಗೆದು, "ಧರ್ಮವು ಸಾಧು", "ಧರ್ಮವನ್ನು ಅನುಸರಿಸಿದವನು ಪುಣ್ಯಮಾಡಿದವನು" ಎಂದು ಹೇಳಿದ್ದಾನೆ. ಅಲ್ಲಿಯೆ "ಧರ್ಮವೆಂದರೇನು?" ಎಂದು ಪ್ರಶ್ನೆ ಹಾಕಿ, "ಸ್ವಲ್ಪ ಪಾಪ, ಬಹು ಪುಣ್ಯ, ದಯೆ, ಸತ್ಯ, ದಾನ, ಪರಿಶುದ್ಧತೆ—ಇದೇ ಧರ್ಮ" ಎಂದು ವಿವರಿಸಿದ್ದಾನೆ. ಹಿಂದಿನ ಶಾಸನಗಳಲ್ಲಿ ಒತ್ತಿ ಹೇಳಿದ ಧರ್ಮಾಚರಣೆಯ ಅವಶ್ಯಕತೆಯು

ಇಲ್ಲಿಯೂ ಪ್ರತಿಧ್ವನಿತವಾಗಿದೆ: "ಮನುಷ್ಯನು 'ಇದು ನಾನು ಮಾಡಿದ ಪುಣ್ಯ' ಎಂದು ಪುಣ್ಯವನ್ನು ಮಾತ್ರ ಕಾಣುವನು. 'ಈ ಪಾಪವು ನಾನು ಮಾಡಿದುದು' ಎಂದು ತನ್ನ ಪಾಪವನ್ನು ಎಂದೂ ಕಾಣನು. ಅದನ್ನು ಹಾಗೆ ಕಾಣುವುದು ಬಹು ಕಷ್ಟ. ಆದರೆ 'ಕ್ರೌರ್ಯ, ನಿಷ್ಠುರತೆ, ಕ್ರೋಧ, ಅಭಿಮಾನ, ಹೊಟ್ಟೆಕಿಚ್ಚು ಇವು ಪಾಪಕ್ಕೆ ಒಯ್ಯುತ್ತವೆ. ಇವುಗಳಿಂದ ನಾನು ನಾಶವಾಗ ಬಾರದು' ಎಂದು ತಿಳಿಯಬೇಕು. ಪ್ರತಿಯೊಬ್ಬನೂ 'ಇದು ನನಗೆ ಇಹಕ್ಕೆ ಒಳ್ಳೆಯದು. ಇದು ನನಗೆ ಪರಕ್ಕೆ ಒಳ್ಳೆಯದು' ಎಂದು ತಪ್ಪದೆ ತಿಳಿಯಬೇಕು."

ಅಶೋಕನು ಧರ್ಮಾಭಿವೃದ್ಧಿಗೋಸ್ಕರ ಇಷ್ಟು ಶ್ರಮಿಸಿದುದೇಕೆ, ಅದಕ್ಕಾಗಿ ಅವನು ನಡೆಸಿದ ಪ್ರಯತ್ನಗಳೇನು, ಅವು ಎಷ್ಟುಮಟ್ಟಿಗೆ ಫಲಕಾರಿಗಳಾದುವು ಎಂಬವು ಮುಂದೆ ತಿಳಿಯಬೇಕಾದ ವಿಷಯಗಳು. ಆ ಸಂಗತಿಗಳನ್ನು ಕುರಿತು ಅಶೋಕನೇ ತನ್ನ ಶಾಸನಗಳ ಮೂಲಕ ಮಾತನಾಡಲಿ.

"ಹಿಂದಿನ ಕಾಲದ ದೊರೆಗಳು ಧರ್ಮವನ್ನು ಅಭಿವೃದ್ಧಿಗೊಳಿಸಿ, ಅದರಿಂದ ಜನರ ಅಭಿವೃದ್ಧಿಯನ್ನು ಕೋರಿದರು. ಆದರೆ ಅನುರೂಪವಾದ ಧರ್ಮಾಭಿವೃದ್ಧಿಯಿಲ್ಲದೆ ಜನರ ಅಭಿವೃದ್ಧಿಯಾಗಲಿಲ್ಲ. ಹೀಗೆ ಆ ದೊರೆಗಳ ಆಸೆಯನ್ನೂ, ಅದು ಪೂರ್ಣವಾಗದುದನ್ನೂ ಕಂಡು, 'ಜನರು ಹೇಗೆ ಧರ್ಮಪರರಾಗುವರು? ಅನುರೂಪವಾದ ಧರ್ಮಾಭಿವೃದ್ಧಿಯಿಂದ ಜನರು ಹೇಗೆ ಅಭಿವೃದ್ಧಿ ಹೊಂದುವರು? ಧರ್ಮಾಭಿವೃದ್ಧಿಯಿಂದ ಅವರನ್ನು ಮೇಲೆತ್ತುವುದು ಹೇಗೆ?' ಎಂದು ನನಗೆನ್ನಿಸಿತು.

ಆಗ ನನಗೆ ಈ ಯೋಚನೆ ಬಂತು: 'ಧರ್ಮವು ಜನರ

ಕಿವಿಗೆ ಬೀಳುವಂತೆ ಮಾಡುವೆನು. ಧರ್ಮಶಾಸನಗಳನ್ನು ಬರೆಸುವೆನು. ಅವನ್ನು ಕೇಳಿ ಜನರು ಧರ್ಮಾವಲಂಬಿಗಳಾಗಿ, ಮೇಲೇರಿ, ಉತ್ತಮರಾಗುವರು.'

"ನನ್ನ ಅಧಿಕಾರಿಗಳು ಅನೇಕ ಜನರೊಡನೆ ಕಲೆತು, ಅವರಿಗೆ ಧರ್ಮವನ್ನು ಬೋಧಿಸಿ ಪ್ರಚಾರಗೊಳಿಸುವರೆಂದೇ ನಾನು ಹೀಗೆ ಮಾಡಿದುದು. ಅವರು ಪ್ರಜೆಗಳಿಗೆ ಧರ್ಮವನ್ನು ಬೋಧಿಸಿದರು. ನನ್ನ ಧರ್ಮಾನುಶಾಸನಗಳನ್ನು ಅವರಿಗೆ ತೋರಿಸಿದರು. 'ಧರ್ಮನಿರತರಿಗೆ ನೀವು ಹೀಗೆ ಹೀಗೆ ಎಚ್ಚರ ಕೊಡಿರಿ' ಎಂದು ಲಕ್ಷಾಂತರ ಜನರೊಡನೆ ವ್ಯವಹರಿಸುವ ರಾಜುಕರಿಗೆ ಆಜ್ಞಾಪಿಸಿದೆನು. ಈ ದೃಷ್ಟಿಯಿಂದಲೇ ನಾನು ಧರ್ಮಸ್ತಂಭಗಳನ್ನು ಎತ್ತಿಸಿದುದು, ಧರ್ಮಮಹಾಮಾತ್ರರನ್ನು ನಿಯಮಿಸಿದುದು, ಧರ್ಮವನ್ನು ಜನರಿಗೆ ಕೇಳಿಸಿದುದು.

"ನನ್ನ ಬಂಧುಗಳಿಗೆ ಮಾತ್ರವಲ್ಲದೆ, ದೂರ ಹತ್ತಿರಗಳಲ್ಲಿ ಇರುವವರಿಗೆ ಕೂಡ 'ಜನರಿಗೆ ಈ ರೀತಿಯಿಂದ ಹಿತಸೌಖ್ಯಗಳು ಉಂಟಾಗುವುವು' ಎಂದು ಉಪದೇಶ ಮಾಡುತ್ತಿರುವೆನು. ಅವರೂ ಸುಖಿಗಳಾಗಲೆಂದೇ ನಾನು ಶ್ರದ್ಧೆ ವಹಿಸಿರುವುದು. ಎಲ್ಲ ಮತದವರನ್ನೂ ಇದೇ ರೀತಿ ನೋಡುತ್ತಿರುವೆನು. ವಿವಿಧ ಪೂಜೆಗಳಿಂದ ಎಲ್ಲಾ ಪಾಷಂಡರನ್ನೂ ಪೂಜಿಸುತ್ತಿರುವೆನು. ಜನರ ಬಳಿಗೆ ನಾನೇ ಹೋಗುವುದು ನನ್ನ ಮುಖ್ಯ ಮತ.

"ಶುಕ, ಶಾರಿಕ, ಅರುಣ, ಚಕ್ರವಾಕ, ಹಂಸ, ನಂದಿಮುಖ, ಗೆಲಾಟ, ಜತುಕ, ಅಂಬಕಪಿಲಿಕ, ದಳೀ, ಅನಸ್ಥಿಕ ಮತ್ಸ್ಯ, ವೇದವಯಕ, ಗಂಗಾಪುಪುಟಕ, ಸಂಕುಜಮತ್ಸ್ಯ, ಕಮಠ, ಶಲ್ಯ, ಪರ್ಣಶಶ, ಶ್ರಿಮರ, ಷಂಡಕ, ಓಕಪಿಂಡ,

ಸೃಷತ, ಶ್ವೇತಕಪೋತ, ಗ್ರಾಮಕಪೋತ ಎಂಬಿವು ಮಾತ್ರವ ಲ್ಲವೆ, ಮನುಷ್ಯರು ತಿನ್ನದೆಯೂ ಬೇರೆ ವಿಧದಲ್ಲಿ ಉಪಯೋಗಿಸ ದೆಯೂ ಇರುವ ಯಾವ ಚತುಷ್ಪಾದಿಯನ್ನೂ ಕೊಲ್ಲಕೂಡ ದೆಂದು ವಿಧಿಸಿದೆನು. ಮರಿಗಳಿರುವ ಅಥವ ಹಾಲುಣಿಸುತ್ತಿರುವ ಹೆಣ್ಣು ಮೇಕೆಗಳು, ಮೇಕೆ ಮರಿಗಳು, ಹಂದಿಗಳು, ಆರು ತಿಂಗ ಳಿಗೆ ಒಳಪಟ್ಟ ಅವುಗಳ ಮರಿಗಳು—ಇವನ್ನು ಕೊಲ್ಲಕೂಡದು. ಹುಂಜಗಳಿಗೆ ಹಿಂಡ ಮಾಡಕೂಡದು. ಜೀವಜಂತುಗಳಿರುವ ಹೊಟ್ಟನ್ನು ಸುಡಕೂಡದು. ಸುಮ್ಮ ಸುಮ್ಮನೆಯಾಗಲಿ ಹಿಂಸೆ ಮಾಡಬೇಕೆಂದಾಗಲಿ ಕಾಡಿಗೆ ಕಿಚ್ಚಿಡಕೂಡದು. ಒಂದು ಜೀವ ಜಂತುವನ್ನು ಸಾಕಲು ಇನ್ನೊಂದು ಜೀವಜಂತುವನ್ನು ಕೊಲ್ಲ ಕೂಡದು. ಮೂರು ಚಾತುರ್ಮಾಸ್ಯ ದಿನಗಳಲ್ಲಿ, ತಿಷ್ಯಪೂರ್ಣಿ ಮೆಯಂದು, ಚತುರ್ದಶಿ ಪೂರ್ಣಿಮೆ ಅಮಾವಾಸ್ಯೆ ಪಾಡ್ಯಮಿಗ ಳಲ್ಲಿ, ಮತ್ತು ಉಪವಾಸ ದಿನಗಳಲ್ಲಿ ಮೀನುಗಳನ್ನು ಕೊಲ್ಲಕೂ ಡದು ; ಮಾರಲೂ ಕೂಡದು. ಅದೇ ದಿನಗಳಲ್ಲಿ, ಆನೆಯ ವನ ಗಳಲ್ಲಿಯೂ ಬೆಸ್ತರ ಕೊಳಗಳಲ್ಲಿಯೂ ಇರುವ ಯಾವ ಜೀವ ನಿಕಾಯವನ್ನೂ ಕೊಲ್ಲಕೂಡದು. ಪ್ರತಿ ಪಕ್ಷದ ಅಷ್ಟಮಿ ಚತು ರ್ದಶಿ ಪೂರ್ಣಿಮೆ ಅಮಾವಾಸ್ಯೆಗಳು, ತಿಷ್ಯ ಪುನರ್ವಸು ನಕ್ಷತ್ರ ಗಳ ದಿನ, ಮೂರು ಚಾತುರ್ಮಾಸ್ಯಗಳು, ಹಬ್ಬದ ದಿನಗಳು— ಈ ಸಮಯಗಳಲ್ಲಿ ಹೋರಿಗಳಿಗೆ ಹಿಂಡ ಮಾಡಕೂಡದು. ಹೋತ, ಟಗರು, ಹಂದಿ ಮುಂತಾದ ಸಾಮಾನ್ಯವಾಗಿ ಹಿಂಡವಾ ಗುವ ಯಾವ ಪ್ರಾಣಿಗೂ ಆ ದಿನ ಹಿಂಡ ಮಾಡಕೂಡದು. ತಿಷ್ಯ ಪುನರ್ವಸು ನಕ್ಷತ್ರಗಳಲ್ಲಿ, ಚಾತುರ್ಮಾಸ್ಯ ದಿನಗಳಲ್ಲಿ, ಚತ್ರು ರ್ಮಾಸದ ಪ್ರತಿ ಪೂರ್ಣಿಮೆಯಂದು ಕುದುರೆಗಳಿಗಾಗಲಿ ಎತ್ತು

ಗಳಿಗಾಗಲಿ ಬರೆ ಹಾಕಕೂಡದು"

"ಶಿಕ್ಷಿತರಾಗಿ ಕಾರಾಗೃಹದಲ್ಲಿ ಇರುವವರಿಗೂ, ತಲೆದಂಡ ವಿಧಿಸಲಾದವರಿಗೂ ಮೂರು ದಿನಗಳ ವಿರಾಮಕೊಡುವಂತೆ ಆಜ್ಞೆಮಾಡಿರುವೆನು. ಇದರಿಂದ, ಅವರ ಬಂಧುಗಳು ಅವರ ಪ್ರಾಣದಾನಕ್ಕಾಗಿ ರಾಜುಕರನ್ನು ಪ್ರಾರ್ಥಿಸಬಹುದು. ಇಲ್ಲದಿದ್ದರೆ, ಅವರ ಪರಲೋಕ ಸೌಖ್ಯಕ್ಕಾಗಿ ದಾನ ಉಪವಾಸಗಳನ್ನು ಆಚರಿಸುವರು. ವಿರಾಮಕಾಲ ಮುಗಿದರೂ, ಬಂಧಿತರಿಗೆ ಪರಲೋಕದಲ್ಲಿ ಸುಖ ಸಿಗಲೆಂದು ನನ್ನ ಕೋರಿಕೆ.

"ನಾನು ಪಟ್ಟಕ್ಕೆ ಬಂದ ಇಪ್ಪತ್ತಾರು ವರ್ಷಗಳ ವೇಳೆಗೆ ಇಪ್ಪತ್ತೈದುಸಲ ಕಾರಾಗೃಹವಾಸಿಗಳನ್ನು ಕ್ಷಮಿಸಿ ಬಿಡುಗಡೆ ಮಾಡಿರುವೆನು.

"ದ್ವಿಪಾದಿ ಚತುಷ್ಪಾದಿಗಳಲ್ಲದೆ ಪಕ್ಷಿಗಳಿಗೂ ಜಲಚರಗಳಿಗೂ ಪ್ರಾಣ ದಕ್ಷಿಣೆಯ ವರೆಗೆ ಅನೇಕ ಅನುಗ್ರಹಗಳನ್ನು ಮಾಡಿರುವೆನು. ಹೀಗೆಯೇ ಇನ್ನೂ ಅನೇಕ ಪುಣ್ಯಕಾರ್ಯಗಳನ್ನು ಮಾಡಿರುವೆನು.

"ಪಶು ಮನುಷ್ಯರಿಗೆ ನೆರಳಾಗುವಂತೆ ಮಾರ್ಗಗಳಲ್ಲಿ ನ್ಯಗ್ರೋಧ ವೃಕ್ಷಗಳನ್ನು ನೆಡಿಸಿ, ಮಾವಿನ ತೋಪುಗಳನ್ನು ಮಾಡಿಸಿದೆನು. ಎಂಟೆಂಟು ಕ್ರೋಶಕ್ಕೆ ಒಂದೊಂದು ಬಾವಿ ತೋಡಿಸಿ, ಅದಕ್ಕೆ ಮೆಟ್ಟಲು ಮಾಡಿಸಿದೆನು. ಪಶುಗಳೂ ಮನುಷ್ಯರೂ ಭೋಗಿಸಲೆಂದು ಅಲ್ಲಲ್ಲಿ ಅರವಟ್ಟಿಗೆಗಳನ್ನು ಕಟ್ಟಿಸಿದೆನು.

"ಆದರೆ ಈ ಭೋಗವು ದೊಡ್ಡದಲ್ಲ. ಹಿಂದಿನ ದೊರೆಗಳೂ ನಾನೂ ಅನೇಕ ವಿಧವಾಗಿ ಲೋಕವನ್ನು ಸುಖಪಡಿಸಿರುವೆವು.

ಆದರೆ ಜನರು ಧರ್ಮಚಾರಿಗಳಾಗಲೆಂದು ನಾನು ಇದನ್ನೆಲ್ಲ ಮಾಡಿರುವೆನು.

"ನಾನು ಮಾಡಿದ ಸತ್ಕಾರ್ಯಗಳನ್ನು ಲೋಕವು ಅನುಕರಿಸಿ ಅವಲಂಬಿಸುತ್ತಿದೆ. ಅದರಿಂದ ಮಾತಾಪಿತೃ ಶುಶ್ರೂಷೆ, ಗುರು ಹಿರಿಯರಲ್ಲಿ ಭಕ್ತಿ, ಬ್ರಾಹ್ಮಣರು ಶ್ರಮಣರು ದೀನರು ವೃದ್ಧರು ದಾಸರು ಭೃತ್ಯರು ಮುಂತಾಗಿ ಎಲ್ಲರಲ್ಲಿಯೂ ಅನುರಾಗ— ಇವೆಲ್ಲ ಹೆಚ್ಚುತ್ತಿವೆ. ಇನ್ನೂ ಹೆಚ್ಚುವುದು.

"ಈ ಧರ್ಮಾಭಿವೃದ್ಧಿಯು ಜನರಲ್ಲಿ ಎರಡು ರೀತಿಯಾಗಿ ಹೆಚ್ಚಾಗಿದೆ; ಒಂದು ಧರ್ಮನಿಯಮದಿಂದ, ಒಂದು ಧರ್ಮಾವಲಂಬನೆಯಿಂದ. ಆದರೆ ಈ ಎರಡರಲ್ಲಿ ಧರ್ಮನಿಯಮವು ಅಷ್ಟು ಮುಖ್ಯವಲ್ಲ. ಧರ್ಮಾವಲಂಬನೆಯೇ ಮುಖ್ಯವಾದುದು. ಕೆಲವು ಪ್ರಾಣಿಗಳನ್ನು ಕೊಲ್ಲಕೂಡದೆಂದು ನಾನು ಆಜ್ಞಾಪಿಸಿರುವುದೇ ಧರ್ಮನಿಯಮ. ನಾನು ಮಾಡಿರುವ ಧರ್ಮನಿಯಮಗಳು ಇನ್ನೂ ಅನೇಕ ಇವೆ. ಆದರೂ ಧರ್ಮಾವಲಂಬನೆಯಿಂದ ಜನರಲ್ಲಿ ಧರ್ಮ ಹೆಚ್ಚು ಬೆಳೆದಿದೆ. ಅದರಿಂದ ಪ್ರಾಣಿಗಳನ್ನು ಬಾಧಿಸುವುದೂ ಕೊಲ್ಲುವುದೂ ನಿಂತುಹೋಗಿದೆ."

ಇದು ಅಶೋಕನ ಏಳು ಶಿಲಾಸ್ತಂಭ ಶಾಸನಗಳ ಸಾರ. ಚರಿತ್ರೆಯ ದೃಷ್ಟಿಯಿಂದ ನೋಡಿದರೆ, ಅವನ ಜೀವಿತದಲ್ಲಿ ತಿಳಿದು ಬರುವ ಕಡೆಯ ಸಂಗತಿ—ಈ ಏಳು ಶಾಸನಗಳ ಪ್ರಕಟನೆ. ಬೌದ್ಧರು ಹೇಳುವ ಕತೆ ಹೊರತು, ಕಳಿಂಗ ಯುದ್ಧಕ್ಕೆ ಮುಂಚೆ ಏನಾಯಿತೆಂದು ಐತಿಹಾಸಿಕವಾಗಿ ತಿಳಿಯುವಂತಿಲ್ಲ ಹಾಗೆಯೇ, ಅವರ ಕತೆ ಬಿಟ್ಟರೆ, ಈ ಏಳು ಶಾಸನಗಳು ಪ್ರಕಟವಾದ ಮೇಲೆ ಏನಾಯಿತೆಂದು ತಿಳಿಯುವಂತಿಲ್ಲ. ಆ ಕತೆಗ

ತನ್ನು ನೋಡಿದರೆ, ಅಶೋಕನ ಕಡೆಯ ದಿನಗಳು ಸುಖವಾಗಿ ದ್ದಂತೆ ಕಾಣುವುದಿಲ್ಲ. ಅವನ ರಾಣಿಯಾದ ತಿಷ್ಯರಕ್ಷಿತೆಯು ಬೋಧಿವೃಕ್ಷವನ್ನು ಹಾಳುಮಾಡಿ ಅವನಿಗೆ ಬಹು ಸಂಕಟತಂ ದಳು. ಅಶೋಕನಿಗೆ ಪದ್ಮಾವತಿಯೆಂಬ ಬೇರೊಬ್ಬ ರಾಣಿಯಿ ದ್ದಳು. ಅವಳ ಮಗನಾದ ಕುನಾಲನು ತಿಷ್ಯರಕ್ಷಿತೆಯ ದ್ವೇಷಕ್ಕೆ ಪಾತ್ರನಾಗಿ ಕಣ್ಣು ಕಳೆದುಕೊಂಡನು. ಅಶೋಕನ ಮೊಮ್ಮ ಗನಾದ ಸಂಪ್ರತಿಯೆಂಬವನು, ಅಶೋಕನ ಕಡೆಗಾಲದಲ್ಲಿ ಅವನ ದಾನ ಧರ್ಮಗಳಿಗೆ ಅಡ್ಡನಾಗಿ ಬಹು ಗೋಳುಹುಯ್ದನು. ಅಂತೂ ಅಶೋಕನ ಕಡೆಯ ದಿನಗಳು ದುಃಖಮಯವಾಗಿದ್ದು ವೆಂದು ಆ ಕತೆಗಳಿಂದ ಧ್ವನಿ ಬರುತ್ತದೆ. ಆ ಎರಡು ಮೂರು ಕತೆಗಳು ಉಳಿದರೆ, ಅಶೋಕನ ಜೀವನ ವೃತ್ತಾಂತ ಮುಗಿದಂ ತೆಯೆ.

# ಎರಡು ಕತೆ

## ಅಶೋಕನ ತಮ್ಮ ವೀತಶೋಕನು

ಅಶೋಕನನ್ನು ಕುರಿತ ಅನೇಕ ಕತೆಗಳು ಬೌದ್ಧರಲ್ಲಿ ಬಿಗುಪ್ರವೆಂದು ಹಿಂದೆ ಹೇಳಿದೆ. ಅವನ ಕಡೆಗಾಲಕ್ಕೆ ಸಂಬಂಧಿಸಿದ ಕತೆಗಳನ್ನು ತಿಳಿಸಿ ಮುಗಿಸುವ ಮುಂಚೆ, ಕೊಂಚ ನಿಲ್ಲೋಣ. ಅಶೋಕನ ಬುದ್ಧಿ ಚಾತುರ್ಯವನ್ನು ಚಿತ್ರಿಸುವ ಎರಡು ಕತೆಗಳನ್ನು ಪರಿಚಯಮಾಡಿಕೊಳ್ಳೋಣ.

ಅಶೋಕನು ಬೌದ್ಧ ಸಂನ್ಯಾಸಿಗಳನ್ನು ಪೂಜಿಸುತ್ತಿದ್ದನು. ಅವನ ತಮ್ಮನಾದ ವೀತಶೋಕನು ತೀರ್ಥಕರೆಂಬ ಪಾಷಂಡರನ್ನು ಸೇವಿಸುತ್ತಿದ್ದನು. "ಆ ಪಾಷಂಡ ಧರ್ಮದಿಂದ ಪುಣ್ಯಬರದು. ಈ ಬೌದ್ಧ ಧರ್ಮವನ್ನು ಅನುಸರಿಸು" ಎಂದು ಅಶೋಕನು ಎಷ್ಟು ಹೇಳಿದರೂ ವೀತಶೋಕನು ಕೇಳುತ್ತಿರಲಿಲ್ಲ.

ಒಂದು ಸಲ ವೀತಶೋಕನು ಅಶೋಕನೊಡನೆ ಬೇಟೆಗೆ ಹೋಗಿದ್ದನು. ಅಲ್ಲಿ ಒಬ್ಬ ಋಷಿಯು ಸುತ್ತಲೂ ಬೆಂಕಿ ಹಾಕಿಕೊಂಡು ತಪಸ್ಸು ಮಾಡುತ್ತಿದ್ದನು. ವೀತಶೋಕನು ಅವನಿಗೆ ನಮಸ್ಕಾರಮಾಡಿ 'ಪೂಜ್ಯನೆ! ನೀನು ಈ ಅರಣ್ಯಕ್ಕೆ ಬಂದು ಎಷ್ಟು ವರ್ಷವಾಯಿತು?' ಎಂದು ಕೇಳಿದನು. ಆ ಋಷಿಯು ಹನ್ನೆರಡು ವರುಷಗಳಿಂದ ತಪಸ್ಸು ಮಾಡುತ್ತಿದ್ದವನು. ಗೆಡ್ಡೆಗೆಣಸೇ ಅವನ ತಿಂಡಿ, ದರ್ಭೆಯೇ ಹೊದಿಕೆ, ನೆಲದ ಹುಲ್ಲೇ ಹಾಸಿಗೆ. ಅದು ಕೇಳಿ ವೀತಶೋಕನು "ಪೂಜ್ಯನೆ! ನಿನ್ನ

ತಪಸ್ಸು ಅಡ್ಡಿಗಳಿಲ್ಲದೆ ನಡೆಯುತ್ತಿರುವುದೆ ?" ಎಂದು ಬೆಸಗೊಂಡನು. ಆ ಋಷಿಯು ಹನ್ನೆರಡು ವರುಷಗಳಿಂದ ತಪಸ್ಸು ಮಾಡುತ್ತಿದ್ದರೂ, ಜಿಂಕೆಗಳು ಒಂದರೊಡನೊಂದು ಕೂಡುವುದನ್ನು ಕಂಡಾಗಲೆಲ್ಲ ಅವನ ಮನಸ್ಸು ಕಲಕಿ ಹೋಗುತ್ತಿತ್ತು.

ವೀತಶೋಕನಿಗೆ ಅದು ಗೊತ್ತಾಯಿತು. "ಆಹ! ಅಶೋಕನು ಈ ಬೌದ್ಧ ಸಂನ್ಯಾಸಿಗಳಿಗೆ ಸಿಕ್ಕಿ ನಿಜವಾಗಿಯೂ ಮೋಸಹೋಗಿರುವನು. ಈ ಋಷಿಯು ಏಕಾಕಿಯಾಗಿ ಅರಣ್ಯದಲ್ಲಿದ್ದು ಕಠಿನವಾದ ತಪಸ್ಸನ್ನು ಆಚರಿಸಿದರೂ, ಇವನ ಕಾಮ ಅಡಗಿಲ್ಲ. ಹೀಗಿರುವಾಗ ಕಂಡ ಕಂಡ ಮನೆಯಲ್ಲಿ ತಿನ್ನುವ ಬೌದ್ಧ ಸಂನ್ಯಾಸಿಗಳ ಕಾಮ ಅಡಗಿರುವುದೆ? ಎಂದಿಗೂ ಇಲ್ಲ" ಎಂದುಕೊಂಡನು.

ವೀತಶೋಕನು ಎಂದುಕೊಂಡುದು ಅಶೋಕನಿಗೆ ತಿಳಿಯಿತು. ತಮ್ಮನಿಗೆ ಅವನ ತಪ್ಪನ್ನು ತೋರಿಸಿಕೊಡಬೇಕೆಂದು ತನ್ನ ಮಂತ್ರಿಗಳನ್ನು ಕರೆದನು. ಕರೆದು, "ಮಂತ್ರಿಗಳೆ! ತೀರ್ಥಕರು ವೀತಶೋಕನನ್ನು ಮರುಳು ಮಾಡಿದ್ದಾರೆ. ಅವನಿಗೆ ಬುದ್ಧದೇವನ ಧರ್ಮದಲ್ಲಿ ವಿಶ್ವಾಸವಿಲ್ಲ. ಎಷ್ಟೆಷ್ಟು ಹೇಳಿದರೂ ಅವನು ಕೇಳವೊಲ್ಲನು. ಅವನಿಗೆ ಧರ್ಮದಲ್ಲಿ ಶ್ರದ್ಧೆ ಹುಟ್ಟುವಂತೆ ಒಂದು ಉಪಾಯ ಮಾಡಬೇಕು. ಈ ದಿನ ನಾನು ಸ್ನಾನಕ್ಕೆ ಹೋದಾಗ ನನ್ನ ಬಟ್ಟೆ ಬರೆಗಳನ್ನೂ ಕಿರೀಟವನ್ನೂ ಅವನಿಗಿಟ್ಟು, ಸಿಂಹಾಸನದ ಮೇಲೆ ಕೂರಿಸಿರಿ. ನಾನು ಮುಂದಿನದನ್ನು ನೋಡಿಕೊಳ್ಳುತ್ತೇನೆ" ಎಂದು ಆಜ್ಞೆಮಾಡಿದನು.

ಅದರಂತೆ, ಅಶೋಕನು ಸ್ನಾನಗೃಹಕ್ಕೆ ಹೋದಾಗ ಮಂತ್ರಿಗಳು ವೀತಶೋಕನನ್ನು ಸಮೀಪಿಸಿದರು. ಸಮೀಪಿಸಿ,

"ಯುವರಾಜ! ಅಶೋಕನಾದ ಮೇಲೆ ನೀನೇ ರಾಜನಾಗತಕ್ಕವನು. ಈ ರಾಜವೇಷವು ನಿನಗೆ ಹೇಗೆ ಒಪ್ಪುವುದು ನೋಡೋಣ' ಎಂದು ಹೇಳುತ್ತ, ಅವನಿಗೆ ಅಶೋಕನ ವೇಷಭೂಷಣಗಳನ್ನು ಹಾಕಿ, ಕಿರೀಟವಿಟ್ಟು, ಸಿಂಹಾಸನದ ಮೇಲೆ ಕುಳ್ಳಿರಿಸಿದರು. ಅಶೋಕನು ಅದೇ ಸಮಯಕ್ಕೆ ಅಲ್ಲಿಗೆ ಬಂದು, ಕೋಪಗೊಂಡವನಂತೆ ನಟಿಸುತ್ತ, "ಆಹ! ನಾನು ಬದುಕಿರುವಾಗಲೇ ನನ್ನ ಪಟ್ಟವನ್ನು ಆಕ್ರಮಿಸಲು ಯತ್ನಿಸುವೆಯ?" ಎಂದು ಗರ್ಜಿಸಿದನು. ವೀತಶೋಕನ ತಲೆಯನ್ನು ಕತ್ತರಿಸಬೇಕೆಂದು ರಾಜಾಜ್ಞೆಯಾಯಿತು. ಆ ಆಜ್ಞೆಯನ್ನು ಪಾಲಿಸಲು ಇಬ್ಬರು ಕಟುಕರು ಸಿದ್ಧರಾದರು. ಅವರ ಕರಿಯ ಮೈ, ಕೆಂಪು ಕಣ್ಣು, ನೀಲಿ ಬಟ್ಟೆ, ಉದ್ದವಾದ ತಲೆಕೂದಲುಗಳನ್ನು ಕಂಡರೆಯೆ ಭಯವಾಗುತ್ತಿತ್ತು. ಅವರ ಕೈಯ ಕತ್ತಿಯು ಫಳಫಳನೆ ಹೊಳೆಯುತ್ತ ಕಣ್ಣು ಕುಕ್ಕುತ್ತಿತ್ತು.

ಅಶೋಕನು ಹೇಳಿಕೊಟ್ಟಿದ್ದನ್ನು ಮಂತ್ರಿಗಳು ಮರೆತಿರಲಿಲ್ಲ. ರಾಜಾಜ್ಞೆಯನ್ನು ಕೇಳಿದವರು ಭಯಗೊಂಡಂತೆ ನಟಿಸಿ, ವೀತಶೋಕನನ್ನು ಮನ್ನಿಸಬೇಕೆಂದು ಮೊರೆಯಿಟ್ಟರು. ಅಶೋಕನು ಅನುಗ್ರಹ ಮಾಡುವಂತೆ ನಟಿಸುತ್ತ 'ಆಗಲಿ. ಇವನು ನನ್ನ ತಮ್ಮನಾದುದರಿಂದ ಒಂದು ವಾರ ರಾಜ್ಯವಾಳಲಿ. ಅನಂತರ ಸಾಯಲಿ' ಎಂದನು.

ವೀತಶೋಕನು ರಾಜನೆಂಬ ಸುದ್ದಿ ಎಲ್ಲೆಲ್ಲಿಯೂ ಹಬ್ಬಿತು. ಅವನಿಗೆ ಪಟ್ಟಾಭಿಷೇಕವಾಯಿತು. ಊರಲ್ಲಿಯೂ ಅರಮನೆಯಲ್ಲಿಯೂ ಬಹು ಸಂಭ್ರಮ. ಎಲ್ಲೆಲ್ಲಿಯೂ ಸಡಗರ, ಉತ್ಸವಗಳ ವಿಜೃಂಭಣೆ. ಇಷ್ಟೆಲ್ಲ ಆದರೂ ಆ ಕಟುಕರು

ಮಾತ್ರ ವೀತಶೋಕನನ್ನು ಬಿಟ್ಟು ಅಲುಗುತ್ತಿರಲಿಲ್ಲ. ಮೂರು ಹೊತ್ತೂ ಅವನ ಪಕ್ಕದಲ್ಲಿ ಯಮದೂತರಂತೆ ನಿಂತಿರುವರು. ದಿನ ಮುಗಿದ ಸಂಜೆಗೆ, ಒಂದು ಗಂಟೆ ಸದ್ದು ಮಾಡಿ 'ರಾಜ! ಒಂದು ದಿನ ಮುಗಿಯಿತು!', 'ಅರಸ! ಎರಡು ದಿನವಾಯಿತು!', 'ಪ್ರಭುವೆ! ಮೂರು ದಿನ ಕಳೆಯಿತು!' ಎಂದು ಎಚ್ಚರಿಸುವರು. ಹೀಗೆ ಆರು ದಿನ ಸಾಗಿತು.

ಏಳನೆಯ ದಿನ ಅಶೋಕನು ತಮ್ಮನನ್ನು ಕರೆದು, 'ವೀತಶೋಕ! ರಾಜ್ಯಸುಖವು ಹೇಗಿತ್ತು?' ಎಂದು ಕೇಳಿದನು. ವೀತಶೋಕನಿಗೆ ಸಂಕಟ ಉಕ್ಕಿ ಬಂತು. ಅಣ್ಣನ ಕಾಲಿಗೆ ಬಿದ್ದು, 'ರಾಜ್ಯಭೋಗವು ಹೇಗಿತ್ತೆಂದು ಹೇಳಲಿ. ಆ ಕೆಂಪು ಕಣ್ಣಿನ ಕಟುಕರನ್ನು ಕಂಡು, ಅವರ ಗಂಟೆಯ ಸದ್ದನ್ನು ಕೇಳಿದಾಗಲೆಲ್ಲ ಸಾವಿನ ಹೆದರಿಕೆಯಾಗುತ್ತಿತ್ತು. ಅವರು ದಿನ ಮುಗಿಯಿತೆಂದು ಎಚ್ಚರಿಸಿದಾಗಲೆಲ್ಲ ಸಾವು ಎಷ್ಟು ಹತ್ತಿರ ಬಂದಿತೆಂದು ಭಯವಾಗುತ್ತಿತ್ತು. ಹೀಗೆ ಭಯದ ಅಂಕುಶಕ್ಕೆ ಸಿಕ್ಕಿದ್ದ ನನಗೆ ದೊರೆತನದಿಂದ ಏನೂ ಸಂತೋಷವಾಗಲಿಲ್ಲ. ಸಾವಿನ ಯೋಚನೆಯಲ್ಲಿ ಏನೂ ರುಚಿಸಲಿಲ್ಲ' ಎಂದು ಕಣ್ಣೀರು ಕರೆದನು.

ಅಶೋಕನು ಅವನ ಮಾತು ಕೇಳಿದನು. 'ವೀತಶೋಕ! ಹೀಗೆ ಒಂದು ಸಲ ಸಾಯುವುದಕ್ಕೇ ನೀನು ಹೆದರಿದೆಯ? ಅದರಿಂದ ದೊರೆತನವು ನಿನಗೆ ಹಿತವಾಗಲಿಲ್ಲವೆ? ಈ ಒಂದು ಸಾವು ಹಾಗಿರಲಿ. ಪ್ರತಿಜೀವಿಯೂ ಸಾವಿರಾರು ಸಲ ಹುಟ್ಟಿ ಸಾವಿರಾರು ಸಲ ಸಾಯಬೇಕೆಂಬದನ್ನು ಬೌದ್ಧ ಸಂನ್ಯಾಸಿಗಳು ತಿಳಿದಿದ್ದಾರೆ. ಅವರ ಮನಸ್ಸಿನ ಸ್ಥಿತಿಯೇನಿರಬೇಕು? ನರಕದಲ್ಲಿ ಹುಟ್ಟಿದರೆ ಬೆಂಕಿಯು ಸುಡುವುದು. ಮೃಗವಾಗಿ

ಎಂದರೆ ಒಂದನ್ನೊಂದು ತಿನ್ನುವುದು. ಪ್ರೇತವಾದರೆ, ಆ ಹಸಿವು ದಾಹಗಳನ್ನು ಸಹಿಸಲಾಗುವುದಿಲ್ಲ. ಮನುಷ್ಯನಾಗಿ ಜನಿಸಿದವನ ಬದುಕು ಬಲು ಕಷ್ಟ. ದೇವತೆಗಳಾಗಿ ಹುಟ್ಟಿದರೂ, ಸತ್ತು ಬೇರೆ ಜನ್ಮ ಹೊಂದಬೇಕು. ಹೇಗೆ ಯಾವ ರೀತಿ ಹುಟ್ಟಿದರೂ ಸಾಯಲೇ ಬೇಕು. ಇದೆಲ್ಲವನ್ನೂ ಆ ಸಂನ್ಯಾಸಿಗಳು ಬಲ್ಲರು. ಈ ಹೊತ್ತು ಇದ್ದವರು ನಾಳೆ ಇಲ್ಲ. ಯಾವುದೂ ಶಾಶ್ವತವಲ್ಲ. ಎಂದು ಅವರಿಗೆ ಗೊತ್ತು. ಇದನ್ನು ತಿಳಿದವರ ಹೃದಯದಲ್ಲಿ ರಾಗ ದ್ವೇಷ ಅಸೂಯೆಗಳಿಗೆ ಸ್ಥಳ ಹೇಗೆ ಬರುವುದು? ಅವರಿಗೆ ಇಲ್ಲಿಯ ಸುಖಸಂಪತ್ತುಗಳು ಏಕೆ ಬೇಕಾದಾವು? ಅವರು ಏನನ್ನೂ ಬಯಸುವುದಿಲ್ಲ. ಕಮಲದ ಎಲೆಗೆ ನೀರು ಹೇಗೆ ಅಂಟಿಕೊಂಡಿರುವುದಿಲ್ಲವೋ, ಹಾಗೆಯೇ ಅವರೂ ಈ ಪ್ರಪಂಚಕ್ಕೆ ಅಂಟಿಕೊಂಡಿರುವುದಿಲ್ಲ. ಈ ಲೋಕದಲ್ಲಿ ಇದ್ದರೂ ಅವರಿಗೆ ಇದರ ಗೊಡವೆ ಬೇಕಾಗಿಲ್ಲ. ಅವರು ಕಂಡ ಕಂಡವರ ಮನೆಯಲ್ಲಿ ತಿಂದು ಆನಂದಿಸುತ್ತಿಲ್ಲ. ಕಾಮ ರಾಗ ಮೋಹ ಮುಂತಾದವಕ್ಕೆ ಸಿಕ್ಕಿ ಸೋತಿಲ್ಲ. ಮನಸ್ಸನ್ನು ನಿಗ್ರಹಿಸಿದ್ದು, ಯಾವ ಪಾಪವನ್ನೂ ಮಾಡದೆ, ಯಾವಾಗಲೂ ಪುಣ್ಯಕಾರ್ಯಗಳನ್ನೇ ಮಾಡಿ, ನಾಶವನ್ನು ಜಯಿಸಲು ಪ್ರಯತ್ನಿಸುತ್ತಿರುವರು" ಎಂದನು.

ಈ ಮಾತು ಕೇಳುತ್ತ ಕೇಳುತ್ತ ವೀತಶೋಕನಿಗೆ ಬೌದ್ಧ ಸಂನ್ಯಾಸಿಗಳ ಬದುಕು ಅರ್ಥವಾಯಿತು. ತನ್ನ ಹಿಂದಿನ ಅಜ್ಞಾನಕ್ಕಾಗಿ ಪರಿತಪಿಸುತ್ತ ಬುದ್ಧನಿಗೆ ಶರಣಾಗತನಾದನು, ಅವನ ಧರ್ಮವನ್ನು ಆಚರಿಸಲು ಒಪ್ಪಿದನು. ಆಗ ಅಶೋಕನು ತಮ್ಮನನ್ನು ಪ್ರೀತಿಯಿಂದ ತಬ್ಬಿಕೊಂಡನು. "ತಮ್ಮ! ನಿನಗೆ ಧರ್ಮದ

ಮಹತ್ವವನ್ನು ತೋರಿಸುವುದಕ್ಕೋಸ್ಕರವೇ ನಾನು ಹೀಗೆ ಮಾಡಿದುದು” ಎಂದಾಡಿ, ಅವನನ್ನು ಮನ್ನಿಸಿದನು.

ಹೀಗೆ ಅಶೋಕನ ಚತುರತೆಯಿಂದ ವೀತಶೋಕನು ಧರ್ಮಚಾರಿಯಾದನು.

## ಮನುಷ್ಯನ ಬೆಲೆ ಏನು?

ಅಶೋಕನು ಭಿಕ್ಷುಗಳನ್ನು ಬಹುವಾಗಿ ಗೌರವಿಸುತ್ತಿದ್ದನು. ಬಂದ ಭಿಕ್ಷುಗಳನ್ನೆಲ್ಲ ಸತ್ಕರಿಸಿ, ಅವರಿಗೆ ನಮಸ್ಕರಿಸುವುದು ಅವನಿಗೆ ವಾಡಿಕೆಯಾಗಿತ್ತು. ಚಕ್ರವರ್ತಿಯಾದ ಅಶೋಕನು ಸಾಮಾನ್ಯ ಭಿಕ್ಷುಗಳಿಗೆ ಎರಗುವುದು, ಅವನ ಮಂತ್ರಿಯಾದ ಯಶಸ್ಸೆಂಬವನಿಗೆ ಸರಿಯೆಂದು ತೋರಲಿಲ್ಲ. ದೊರೆಯ ಬಳಿ ಹೋಗಿ, 'ದೇವ! ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆನ್ನದೆ, ಎಲ್ಲ ವರ್ಣದವರೂ, ಚಂಡಾಲರು ಕೂಡ, ಬೌದ್ಧ ಸಂನ್ಯಾಸಿಗಳಾಗಬಹುದು. ಅವರಿಂದ ತಾವು, ಜಾತಿ ಭೇದಗಳನ್ನು ಎಣಿಸದೆ, ಕಿರೀಟ ಹೊತ್ತ ತಮ್ಮ ತಲೆಯನ್ನು ಆ ಭಿಕ್ಷುಗಳ ಕಾಲ ಮೇಲಿಡುವುದು ಸಾಧುವಲ್ಲ' ಎಂದು ಸೂಚಿಸಿದನು. ಮಂತ್ರಿಯ ಮಾತು ಕೇಳಿ ಅರಸನಿಗೆ ನಗು ಬಂತು. ತಾನು ಎಷ್ಟು ವಿವರಿಸಿದರೂ ಅದು ಮಂತ್ರಿಗೆ ಅರ್ಥವಾಗುವುದಿಲ್ಲವೆಂದು ಅವನಿಗೆ ಗೊತ್ತಿತ್ತು. ಅದರಿಂದ ಮಾತನಾಡದೆ ಇದ್ದು, ಎಂದಿನಂತೆ ಭಿಕ್ಷುಗಳಿಗೆ ನಮಸ್ಕರಿಸುತ್ತಿದ್ದನು. ಮಂತ್ರಿಯು ಪುನಃ ಆ ಮಾತೆತ್ತಲಿಲ್ಲ. ಕಾಲಕ್ರಮದಲ್ಲಿ ಅದನ್ನು ಮರೆತು ಬಿಟ್ಟನು.

ಆದರೆ ಅಶೋಕನು ಮಾತ್ರ ಮಂತ್ರಿಯ ಮಾತನ್ನು ಮರೆಯಲಿಲ್ಲ. ಒಂದು ದಿನ ಸಭಿಕರನ್ನೆಲ್ಲ ಕರೆದು 'ನನಗೆ ಪ್ರತಿ

ಜೀವಿಯ ತಲೆಯ ಬೆಲೆ ತಿಳಿಯಬೇಕಾಗಿದೆ. ಆದರಿಂದ ಒಬ್ಬೊಬ್ಬರು ಒಂದೊಂದು ತಲೆಯನ್ನು ತರಬೇಕು. ಕೆಲವರು ಬೇರೆ ಬೇರೆ ಮೃಗಗಳ ತಲೆ ತನ್ನಿ. ಮಿಕ್ಕವರು ಬೇರೆ ಬೇರೆ ಪಕ್ಷಿಗಳ ತಲೆ ತನ್ನಿ. ಯಶಸ್! ನೀನು ಒಬ್ಬ ಮನುಷ್ಯನ ತಲೆ ತಾ!' ಎಂದು ಆಜ್ಞಾಪಿಸಿದನು.

ನಿಯಮಿಸಿದ ಕಾಲಕ್ಕೆ ಸರಿಯಾಗಿ ಎಲ್ಲರೂ ತಾವು ತರಬೇಕಾದ ತಲೆಗಳನ್ನು ತಂದರು. ಯಶಸ್ಸು ಒಬ್ಬ ಮನುಷ್ಯನ ತಲೆಯನ್ನು ತಂದನು. 'ನೀವು ತಂದಿರುವ ತಲೆಗಳನ್ನು ನಗರದಲ್ಲಿ ಮಾರಿ ಬನ್ನಿ' ಎಂದು ಅರಸನ ಆಜ್ಞೆಯಾಯಿತು. ನಗರದಲ್ಲಿ ಎಲ್ಲ ತಲೆಗಳು ವಿಕ್ರಯವಾದರೂ, ಯಶಸ್ಸು ತಂದ ನರಶಿರ ಮಾತ್ರ ಮಾರಾಟವಾಗಲಿಲ್ಲ.

ಎಲ್ಲರೂ ಬಂದು ಅರಸನಿಗೆ ತಮ್ಮ ವರದಿ ಒಪ್ಪಿಸಿದರು. ಅಶೋಕನು ಅವರೆಲ್ಲರನ್ನೂ ಮನ್ನಿಸಿ ಕಳುಹಿ, ಯಶಸ್ಸಿನ ಕಡೆ ತಿರುಗಿದನು.

ಯಶಸ್ಸು ನಾಚಿಕೆಯಿಂದ ತಲೆ ತಗ್ಗಿಸಿ, 'ದೇವ! ಮೃಗಪಕ್ಷಿಗಳ ತಲೆಯನ್ನು ನಾನು ತಾನೆಂದು ಜನರು ಕೊಂಡರು. ಈ ನರಶಿರವನ್ನು ಯಾರೂ ಸುಮ್ಮನೆಯೂ ಒಲ್ಲದೆ ಹೋದರು' ಎಂದನು.

'ಅದೇಕೆ, ಮಂತ್ರಿ? ಈ ನರಶಿರವು ಅಷ್ಟು ನಿಕೃಷ್ಟವೆ?'

'ಹೌದು, ಮಹಾರಾಜ! ಮೃಗಪಕ್ಷಿಗಳ ತಲೆಗಿರುವ ಬೆಲೆ ಕೂಡ ಇದಕ್ಕಿಲ್ಲ.'

'ಈ ತಲೆಯೊಂದಕ್ಕೆ ಮಾತ್ರ ಹೀಗಾಯಿತೊ, ಇಲ್ಲ, ಯಾವ ಮನುಷ್ಯನ ತಲೆಯಾದರೂ ಬೇಡವೆನ್ನುವರೊ?'

'ಯಾವ ಮನುಷ್ಯನ ತಲೆಯನ್ನೂ ಕೊಳ್ಳವೊಲ್ಲರು ಪ್ರಭು!'

'ಎಂದರೆ, ಎಲ್ಲ ಮನುಷ್ಯರ ತಲೆಗಳೂ ನಿಕೃಷ್ಟವಾದುವೆ?'

'ಹೌದು, ಅರಸ!'

'ಹಾಗಾದರೆ ನನ್ನ ತಲೆಯೂ ನಿಕೃಷ್ಟವಾದುದೇನು? ಇದನ್ನೂ ಎಲ್ಲರೂ ಬೇಡವೆನ್ನುವರೇನು?'

ಮಂತ್ರಿಯು ಹಿಂದು ಮುಂದು ನೋಡಿ ಹೌದೆಂದನು.

ಮಂತ್ರಿಗೆ ಧರ್ಮಸ್ವರೂಪವನ್ನು ತಿಳಿಸುವ ಕಾಲ ಬಂದಿತೆಂದು ಅಶೋಕನಿಗೆ ಸಂತೋಷವಾಯಿತು. ಅವನ ಕಡೆ ತಿರುಗಿ ಹೀಗೆಂದನು:

"ಮಂತ್ರಿ! ಆ ದಿನ ನಾನು ಭಿಕ್ಷುಗಳ ಕಾಲಿಗೆರಗಿದುದಕ್ಕೆ ಆಕ್ಷೇಪಿಸಿದೆಯಲ್ಲವೆ! ಈ ನನ್ನ ತಲೆಯು ಯಾರಿಗೂ ಬೇಡದಷ್ಟು ಕೀಳಾಗಿರುವಾಗ, ಇದು ಅವರ ಕಾಲು ಮುಟ್ಟಿದರೆ ಹಾನಿಯೇನು? ಶಾಕ್ಯಪುತ್ರರ ಜಾತಿಯನ್ನು ಅರಸಬಾರದು, ಸಚಿವ! ಮದುವೆ ಮುಂತಾದ ಸಂಬಂಧಗಳಿಗೆ ಕುಲಗೋತ್ರಗಳನ್ನು ಕೇಳಬೇಕು. ಧರ್ಮಕ್ಕೆ ಕುಲಗೋತ್ರಗಳಿಲ್ಲ. ಧರ್ಮಕ್ಕೆ ಬೇಕಾದುದು ಒಳ್ಳೆಯ ನಡತೆ. ಉತ್ತಮ ಕುಲದವನು ದುರ್ಮಾರ್ಗಿಯಾದರೆ ಲೋಕವು ಅವನನ್ನು ದೂಷಿಸುವುದಿಲ್ಲವೆ? ಹಾಗಿರುವಾಗ, ಹೀನವಂಶದವನು ಸನ್ಮಾರ್ಗಿಯಾದರೆ ಅವನನ್ನು ಏಕೆ ಘೋಷಿಸಬಾರದು?

"ಜನರ ಮನಸ್ಸನ್ನು ಕಂಡು ಅವರ ಬೆಲೆ ಕಾಣಬೇಕಲ್ಲದೆ, ಅವರ ಹೊರಗಿನ ವೇಷವನ್ನು ಕಂಡಲ್ಲ. ಅಜ್ಞಾನಿಗೆ ಕೀಳಾಗಿ ಕಂಡುದರಲ್ಲಿ ಜ್ಞಾನಿಗೆ ಮೇಲು ಕಾಣಿಸುವುದೆಂದು ಬುದ್ಧದೇವನು ಹೇಳಿರುವನು. ಅವನ ಆಜ್ಞೆಯನ್ನು ಪರಿಪಾಲಿಸುವ

ನನಗೆ ಅಡ್ಡಿ ಬರುವವನು ಸರ್ವಥಾ ನನ್ನ ಮಿತ್ರನಲ್ಲ. ನಾನು ಸತ್ತಮೇಲೆ ನನ್ನ ದೇಹವು ಎದ್ದು ಶಾಕ್ಯಪುತ್ರರಿಗೆ ನಮಸ್ಕರಿಸಬಲ್ಲುದೆ? ಅವರನ್ನು ಸತ್ಕರಿಸಬಲ್ಲುದೆ? ಇಂತಹ ದೇಹಕ್ಕೆ ಬೆಲೆಯೇಕೆ ಕೊಡಬೇಕು? ಬೆಂಕಿ ಬಿದ್ದು ಭಸ್ಮವಾದ ಮನೆಗೆ ಎಷ್ಟು ಬೆಲೆಯೋ ಈ ದೇಹಕ್ಕೂ ಅಷ್ಟೇ ಬೆಲೆ. ಪಾತ್ರೆಯಲ್ಲಿರುವ ಹಾಲು ಮೊಸರುಗಳು ಮುಗಿದಮೇಲೆ ಪಾತ್ರೆ ಒಡೆದು ಹೋದರೆ ನಷ್ಟವೇನು? ಹಾಗೆಯೇ, ಒಳ್ಳೆಯ ಕೆಲಸ ಮಾಡಿದ ಮೇಲೆ ದೇಹ ಸತ್ತರೂ ಏನೂ ನಷ್ಟವಿಲ್ಲ. ಮೊಸರು ತುಂಬಿದ ಮಡಿಕೆಯನ್ನು ಒಡೆದರೆ ಪರಿತಾಪವಾಗುವುದು. ಒಳ್ಳೆಯ ಕೆಲಸ ಮಾಡದವನು ಸಾಯುವಾಗ ಹಾಗೆಯೇ ಪರಿತಪಿಸುವನು.

"ಆದುದರಿಂದ, ಮಂತ್ರಿ, ನಾನು ಬೌದ್ಧ ಸಂನ್ಯಾಸಿಗಳಿಗೆ ಎರಗಿದರೆ ಅಸಮಾಧಾನ ಪಡಬೇಕಾದುದಿಲ್ಲ. ಏಕೆಂದರೆ, ತನ್ನನ್ನು ತಾನು ತಿಳಿಯದೆ, ತಾನೇ ಉತ್ತಮನೆಂದು ಮೆರೆಯುವವನು ಅಜ್ಞಾನಿಯು. ಆದರೆ, ಬುದ್ಧದೇವನ ದಿವ್ಯವಾದ ಧರ್ಮವನ್ನು ಅರಿತವನಿಗೆ ಆಳಿನ ದೇಹವೂ ಒಂದೆ, ಅರಸನ ದೇಹವೂ ಒಂದೆ. ಚರ್ಮ, ಮೂಳೆ, ಮಾಂಸ ಮುಂತಾದವು ಎಲ್ಲ ದೇಹಗಳಲ್ಲಿಯೂ ಒಂದೇ ತೆರನಾಗಿವೆ. ದೇಹ ದೇಹಕ್ಕೆ ವ್ಯತ್ಯಾಸ ಕಾಣುವುದು ಉಡಿಗೆ ತೊಡಿಗೆಗಳಲ್ಲಿ ಮಾತ್ರ. ಪ್ರತಿಯೊಬ್ಬನಲ್ಲಿಯೂ ಮುಖ್ಯವಾಗಿ ಇರಬೇಕಾದುದು ಶೀಲ, ಸದಾಚಾರ, ಒಳ್ಳೆಯ ನಡತೆ. ಅದು ಹೀನ ದೇಹದಲ್ಲಿದ್ದರೂ, ಜ್ಞಾನಿಗಳು ತಿಳಿದು, ಅದನ್ನು ಮನ್ನಿಸುವುದು ಒಳ್ಳೆಯದು"

ಆಗ ಮಂತ್ರಿಯ ಮುಚ್ಚಿದ್ದ ಕಣ್ಣು ತೆರೆಯಿತು. ಸಂಕುಚಿತವಾಗಿದ್ದ ಅವನ ಹೃದಯವು ವಿಶಾಲವಾಯಿತು. ಧರ್ಮದ

ಗುಟ್ಟನ್ನು ತಿಳಿದು, ಅವನು ತಾನೂ ಧರ್ಮಚಾರಿಯಾದನು.

ತನ್ನ ಶಾಸನಗಳಲ್ಲಿ ಅಹಿಂಸೆಯನ್ನು ಬೋಧಿಸಿದ ಅಶೋಕನು ಮಂತ್ರಿಗೆ ಧರ್ಮವನ್ನು ತಿಳಿಸುವುದಕ್ಕಾಗಿ ಅನೇಕ ಮೃಗಪಕ್ಷಿಗಳನ್ನೂ ಒಬ್ಬ ಮನುಷ್ಯನನ್ನೂ ಕೊಲ್ಲಿಸಿದನೆಂದರೆ, ಅದು ನಂಬತಕ್ಕ ಮಾತಲ್ಲ. ಆದರೆ, ಈ ಕತೆಯಿಂದ ನಾವು ಗ್ರಹಿಸಬೇಕಾದುದು—ಅಶೋಕನು ಜನರ ಮನಸ್ಸನ್ನು ತಿಳಿದು, ತಕ್ಕ ಅವಕಾಶ ಕಲ್ಪಿಸಿಕೊಂಡು, ಅವರಿಗೆ ಹೇಗೆ ಧರ್ಮಬೋಧೆ ಮಾಡುತ್ತಿದ್ದನೆಂಬುದು. ಅಲ್ಲದೆ, ಆತನು ಮಂತ್ರಿಗೆ ಹೇಳಿದ ಧರ್ಮರಹಸ್ಯವನ್ನೂ ನಾವು ಗಮನಿಸುವುದು ಒಳ್ಳೆಯದು.

# ಅಶೋಕನ ಕಡೆಯ ದಿನಗಳು

**ಕುಣಾಲನ ಕಣ್ಣುಗಳು**

ಅಶೋಕನು ೮೪,೦೦೦ ಸ್ತೂಪಗಳನ್ನು ಕಟ್ಟಿಸಿದ ಮೇಲೆ ಅವನ ಪತ್ನಿಯಾದ ಪದ್ಮಾವತಿಯು ಒಂದು ಗಂಡು ಮಗು ಹೆತ್ತಳು. ಮಗು ಸುಂದರವಾಗಿತ್ತು. ಕಣ್ಣು ಕಾಂತಿಯಿಂದ ಹೊಳೆಯುತ್ತಿತ್ತು. ಪುತ್ರೋತ್ಸವವಾದುದನ್ನು ಕೇಳಿ, ಅಶೋಕನು "ನಾನು ಧರ್ಮಚಾರಿಯಾದುದರಿಂದ ನನಗೆ ಗಂಡುಮಗನಾದನು. ಇವನು ಕೂಡ ನನ್ನಂತೆಯೇ ಧರ್ಮವನ್ನು ವೃದ್ಧಿಗೊಳಿಸಲಿ" ಎಂದು ಆ ಮಗುವಿಗೆ ಧರ್ಮವೈವರ್ಧನ ಎಂಬ ಹೆಸರಿಟ್ಟನು.

ಮಗುವಿನ ಅಸಮಾನವಾಗಿ ಅರಳಿ ಹೊಳೆಯುವ ಕಣ್ಣು ಕಂಡು ದೊರೆಗೆ ಆಶ್ಚರ್ಯವಾಯಿತು. ಹಿಮಾಚಲದ ಬಳಿಯಿರುವ ಕುಣಾಲವೆಂಬ ಹಕ್ಕಿಯ ಕಣ್ಣುಗಳ ಹಾಗೆ ಕುಮಾರನ ಕಣ್ಣುಗಳಿವೆಯೆಂದು ಕೇಳಿದನು. ಒಂದು ಕುಣಾಲವನ್ನು ಹಿಡಿದು ತರಿಸಿ, ತನ್ನ ಮಗನ ಕಣ್ಣುಗಳೊಡನೆ ಅದರ ಕಣ್ಣುಗಳನ್ನು ತುಲನೆಮಾಡಿದನು. ಎರಡು ಕಣ್ಣುಗಳೂ ಒಂದೇ ವಿಧವಾಗಿದ್ದುದರಿಂದ ಮಗುವಿಗೆ ಕುಣಾಲ ಎಂದು ಹೆಸರಾಯಿತು.

ಕುಣಾಲನು ದೊರೆಗೆ ಬಹು ಪ್ರೀತಿಪಾತ್ರನಾದನು. ಸರಿಯಾದ ವಯಸ್ಸು ಬರಲು, ಕಾಂಚನಮಾಲೆಯೆಂಬ ಸುಂದರಿಯೊಡನೆ ಅವನಿಗೆ ಮದುವೆಯಾಯಿತು. ದಂಪತಿಗಳಿಬ್ಬರೂ ಧರ್ಮಚಾರಿಗಳಾಗಿದ್ದರು.

ಹೀಗಿರಲು, ಒಂದುದಿನ ಅಶೋಕನ ಇನ್ನೊಬ್ಬ ರಾಣಿಯಾದ ತಿಷ್ಯರಕ್ಷಿತೆಯು ಕುಣಾಲನ ಕಣ್ಣುಗಳಿಗೆ ಮೋಹಗೊಂಡಳು. ಕಾಮಕ್ಕೆ ಮನಸ್ಸು ಹರಿಯಬಿಟ್ಟು, ಅವನನ್ನು ತಬ್ಬಿಕೊಂಡು ಮಾತನಾಡಿಸಿದಳು. ಕುಣಾಲನು ಅವಳ ಮಾತು ಕೇಳಿ ಕಿವಿ ಮುಚ್ಚಿಕೊಂಡು "ಅಮ್ಮ! ತಾಯಿಯಾದ ನೀನು ಮಗನಾದ ನನ್ನಲ್ಲಿ ಹೀಗೆ ನುಡಿಯಬಾರದು" ಎಂದು ಎಷ್ಟೆಷ್ಟೋ ವಿಧಗಳಲ್ಲಿ ಹೇಳಿದನು; ಅವಳ ಪಾಪಕಾರ್ಯಕ್ಕೆ ಸಮ್ಮತಿಸಲಿಲ್ಲ. "ತಾಯೆ! ಪಾಪದ ದಾರಿಯಲ್ಲಿ ನಡೆದು ಎಲ್ಲರ ನಿಂದೆಗೆ ಗುರಿಯಾಗುವುದಕ್ಕಿಂತ, ಧರ್ಮದ ದಾರಿಯಲ್ಲಿ ಪರಿಶುದ್ಧನಾಗಿ ನಡೆದು ಸಾಯುವುದೇ ಮೇಲು ಎಂದನು. ತಿಷ್ಯರಕ್ಷಿತೆಗೆ ಅವನ ಮಾತು ರುಚಿಸಲಿಲ್ಲ. ತನ್ನ ಆಸೆ ಪೂರ್ತಿಯಾಗಲಿಲ್ಲವೆಂದೂ, ತನಗೆ ಅವಮಾನವಾಯಿತೆಂದೂ ಅವಳಿಗೆ ಬಹು ರೋಷ ಬಂತು. ಯಾವಾಗಲಾದರೂ ಕುಣಾಲನಿಗೆ ಕೇಡುಮಾಡಿಯೇ ತೀರುವೆನೆಂದು ಹಟ ತೊಟ್ಟಳು.

ಅದೇ ಸಮಯದಲ್ಲಿ ತಕ್ಷಶಿಲೆಯ ಪ್ರಜೆಗಳು ದಂಗೆಯೆದ್ದರು. ಅವರನ್ನು ಅಡಗಿಸಲು ಅಶೋಕನು ತಾನೇ ಹೋಗಬೇಕೆಂದಿದ್ದರೂ, ಮಂತ್ರಿಯ ಮಾತಿನಂತೆ ಕುಣಾಲನನ್ನು ಕಳುಹಿಸಿದನು. ಕಳುಹಿಸುವಾಗ ಪಾಟಲೀಪುತ್ರದಿಂದ ಕೊಂಚ ದೂರ ಅವನೊಡನೆ ನಡೆದು, ಅವನ ಕಣ್ಣುಗಳನ್ನು ನೋಡಿ ನೋಡಿ ತಣಿಯದೆ ಹಿಂದಿರುಗಿದನು.

ಅತ್ತ ಕುಣಾಲನು ತಕ್ಷಶಿಲೆಗೆ ಹೋದನು. ಅವನು ಬರುವ ವೇಳೆಗೆ ಪುರಜನರು ತೋರಣ ಪತಾಕೆಗಳಿಂದ ಪಟ್ಟಣವನ್ನು ಅಲಂಕರಿಸಿದ್ದರು. 'ಅಶೋಕನಿಗಾಗಲಿ ರಾಜಕುಮಾರ

ನಿಗಾಗಲಿ ನಾವು ಎದುರಾಡತಕ್ಕವರಲ್ಲ. ಕೆಟ್ಟ ಮಂತ್ರಿಗಳ ಹಿಂಸೆ ತಡೆಯಲಾರದೆ ದಂಗೆಯೇಳಬೇಕಾಯಿತು' ಎಂದು ಪ್ರಜೆಗಳೆಲ್ಲ ಕುಣಾಲನಿಗೆ ಅಡ್ಡಬಿದ್ದರು. ಕುಣಾಲನು ಅವರನ್ನು ಮನ್ನಿಸಿದನು. ದಂಗೆಯು ಎದ್ದಂತೆ ಅಡಗಿತು.

ಅದೇ ಕಾಲದಲ್ಲಿ, ಕುಣಾಲನು ತಕ್ಷಶಿಲೆಯಲ್ಲಿದ್ದಾಗ, ಪಾಟಲೀ ಪುತ್ರದಲ್ಲಿ ಅ ಶೋ ಕ ನು ರೋಗಗ್ರಸ್ತನಾದನು. ಯಾರಾರು ಏನೇನು ಮಾಡಿದರೂ ಗುಣಮುಖನಾಗಲಿಲ್ಲ. ಆಗ ಅಶೋಕನು, ತನ್ನ ಕಡೆಗಾಲವು ಬಂದಿತೆಂದುಕೊಂಡು, ಕುಣಾಲನಿಗೆ ಪಟ್ಟ ಕಟ್ಟಲು ಬಯಸಿದನು. ಆದರೆ ತಿಷ್ಯರಕ್ಷಿತೆಯು ಅರಸನನ್ನು ತಾನು ಗುಣಪಡಿಸುವೆನೆಂದು ಅಭಯವಿತ್ತಳು. ಅಶೋಕನಿಗೆ ಬಂದಿದ್ದಂತಹ ರೋಗವೇ ಪಾಟಲೀಪುರದಲ್ಲಿ ಇನ್ನೊಬ್ಬನಿಗೂ ಬಂದಿತ್ತು. ರಾಣಿಯು ಅವನನ್ನು ಕೊಲ್ಲಿಸಿ ಪರೀಕ್ಷಿಸಿದಳು. ಅವನ ಕರುಳಿನೊಳಗೆ ಒಂದು ಬಗೆಯ ಹುಳು ಇತ್ತು. ಅದು ಯಾವುದಕ್ಕೂ ಸಗ್ಗದೆ ಈರುಳ್ಳಿಯ ರಸದಿಂದ ಸತ್ತಿತು. ರಾಣಿಯು ಆ ಪರಿಹಾರವನ್ನು ತಿಳಿದು, ಅಶೋಕನಿಗೆ ಈರುಳ್ಳಿ ತಿನ್ನಿಸಿದಳು. ರೋಗಕ್ಕೆ ಗುಣವಾಯಿತು. ಅವನು ಪ್ರೀತನಾಗಿ, ತಿಷ್ಯರಕ್ಷಿತೆಯ ಬಯಕೆಯಂತೆ ಒಂದು ವಾರದ ಸಾಮ್ರಾಜ್ಯಾಧಿಪತ್ಯವನ್ನು ಅವಳಿಗೆ ವರವಾಗಿ ಕೊಟ್ಟನು.

ಕು ಣಾ ಲ ನು ಹಿಂದೆ ತನ್ನಿಂದ ತಪ್ಪಿಸಿಕೊಂಡುದನ್ನು ಅವಳು ಮರೆತಿರಲಿಲ್ಲ. ತಾನು ತೊಟ್ಟಿದ್ದ ಪಣದಂತೆ ಅವನಿಗೆ ಕೇಡು ಮಾಡಲು ಮನಸ್ಸಾಯಿತು. 'ಈ ಕಾಗದ ಕಂಡ ಗಳಿಗೆ ಕುಣಾಲನ ಕಣ್ಣುಗಳನ್ನು ಕೀಳಬೇಕು. ಇದು ಅರಸನ ಆಜ್ಞೆ' ಎಂದು ತಕ್ಷಶಿಲೆಯ ನಿವಾಸಿಗಳಿಗೆ ಕಾಗದ ಬರೆದಳು. ಆದರೆ

ಅದಕ್ಕೆ ರಾಜಮುದ್ರೆಯೊತ್ತಬೇಕಾಗಿತ್ತು. ಅದಕ್ಕಾಗಿ ಅಶೋಕನ ಬಳಿಗೆ ಹೋದಳು. ಅಶೋಕನು, ಎರಡು ಹದ್ದು ಕುಣಾಲನ ಕಣ್ಣು ಕಿತ್ತಂತೆ ಕನಸಾಗಿ, ಆಗತಾನೆ ಎದ್ದಿದ್ದನು. ತಿಷ್ಯರಕ್ಷಿತೆಯು ಅದು ಬರಿಯ ಕನಸೆಂದು ಅವನನ್ನು ಸಮಾಧಾನಗೊಳಿಸಿ ಮಲಗಿಸಿದಳು. ಅರಸನಿಗೆ ಪುನಃ ಕನಸಾಯಿತು. ಕುಣಾಲನು ಕೂದಲು ಉಗುರು ಗಡ್ಡಗಳನ್ನು ಬೆಳೆಸಿಕೊಂಡು ಪಾಟಲೀಪುತ್ರಕ್ಕೆ ಬಂದಂತೆ ಕಂಡನು. ಪುನಃ ತಿಷ್ಯರಕ್ಷಿತೆಯು ಅವನನ್ನು ಸಮಾಧಾನಪಡಿಸಿದಳು. ಅರಸನಿಗೆ ನಿದ್ದೆ ಬರಲು, ತಿಷ್ಯರಕ್ಷಿತೆಯು ತನ್ನ ಕಾಗದಕ್ಕೆ ಅವನ ಮುದ್ರೆಯೊತ್ತಿ, ಅದನ್ನು ತಕ್ಷಶಿಲೆಗೆ ಕಳುಹಿಸಿದಳು. ಅರಸನಿಗೆ ಪುನಃ ಕನಸಾಯಿತು. ತನ್ನ ಹಲ್ಲುಗಳುದುರಿದಂತೆ ಕನಸು ಕಂಡೆದ್ದನು. ಅವನ ಮನಸ್ಸು ಕದಡಿ ಹೋಗಿತ್ತು. ಅವನು ಬೆಳಗಾಗುವುದನ್ನೇ ಕಾಯುತ್ತಿದ್ದನು.

ಬೆಳಗಾಯಿತು. ದೊರೆಯು ಅರಮನೆಯ ಜೋಯಿಸರನ್ನು ಕರೆಯಿಸಿ ತನ್ನ ಸ್ವಪ್ನಗಳಿಗೆ ಅರ್ಥ ಕೇಳಿದನು. ಅವರು 'ರಾಜ! ಇಂತಹ ಸ್ವಪ್ನಗಳನ್ನು ಕಂಡವನು ತನ್ನ ಮಗನು ಕುರುಡಾದುದನ್ನೂ ಕಾಣುವನು' ಎಂದರು. ದೊರೆಗೆ ಮಹಾ ಯೋಚನೆ ಜನಿಸಿತು.

ರಾಣಿಯು ಕಳುಹಿಸಿದ ಪತ್ರವು ಅಷ್ಟು ವೇಳೆಗೆ ತಕ್ಷಶಿಲೆಗೆ ಮುಟ್ಟಿತ್ತು. ಪುರಜನರು ಆ ಕಾಗದವನ್ನು ನಂಬಲಾರದೆ ಹೋದರು. ಕುಣಾಲನು ಎಲ್ಲರ ಪ್ರೀತಿಯನ್ನೂ ಸಂಪಾದಿಸಿದ್ದನು. ಅವನ ಕಣ್ಣು ಕೀಳುವುದನ್ನು ಅವರು ಕನಸಿನಲ್ಲಿಯೂ ಯೋಚಿಸುವಂತಿರಲಿಲ್ಲ. ಅರಸನ ವಿಚಿತ್ರವಾದ ಆಜ್ಞೆಗಾಗಿ

ದುಃಖಿಸಿದರು. ತನ್ನ ಮಗನ ವಿಷಯದಲ್ಲಿಯೇ ಇಷ್ಟು ಕಠಿನ ನಾದವನು, ಆಜ್ಞೆ ಪಾಲಿಸದಿದ್ದರೆ ತಮ್ಮನ್ನು ಏನು ಮಾಡು ವನೋ ಎಂದು ನಡುಗಿದರು. ಆ ಆಜ್ಞೆಯು ಕುಣಾಲನಿಗೂ ತಿಳಿಯಿತು. ಮುಕ್ತಪರಂತೆ ಅವನು ಕೂಡ ಅದು ಅಶೋಕನ ಆಜ್ಞೆಯೆಂದೇ ತಿಳಿದನು. ತಿಳಿದು, ಅರಸನ ಆಜ್ಞೆ ಪಾಲಿಸು ವುದು ತನ್ನ ಕರ್ತವ್ಯವೆಂದು ಸಿದ್ಧನಾದನು. ಆದರೆ ಅವನ ಕಣ್ಣು ಕೀಳಲು ಯಾರೂ ಒಪ್ಪಲಿಲ್ಲ. ಇತ್ತ ಕುಣಾಲನ ಮೇಲಿನ ಪ್ರೇಮ, ಅತ್ತ ಅಶೋಕನ ಭಯ. ಕಡೆಗೆ ಆ ಘೋರಕೃತ್ಯ ವನ್ನು ಒಬ್ಬನು ಮಾಡಲೇಬೇಕಾಯಿತು.

'ಸುಖ ಬಂದಾಗ ಹಿಗ್ಗಬಾರದು, ದುಃಖ ಬಂದಾಗ ಕುಗ್ಗ ಬಾರದು' ಎಂಬುದನ್ನು ಕುಣಾಲನು ಕಿರಿಯಂದಿನಿಂದ ಕಲಿತಿ ದ್ದನು. ಅದರಿಂದಲೇ, ಕಣ್ಣು ಕಳೆದುಕೊಳ್ಳಬೇಕಾದಾಗಲೂ ಅವನು ವ್ಯಾಕುಲನಾಗಲಿಲ್ಲ. ಬಂದ ಹಿಂಸಕನು, ಜನರ ಹಾಹಾ ಕಾರಗಳ ನಡುವೆ ಕುಮಾರನ ಕಣ್ಣೊಂದನ್ನು ಕಳಚಿದನು. ಆ ಕಣ್ಣನ್ನು ಹಿಡಿದುಕೊಂಡು ಕುಮಾರನು, 'ಈ ಮಾಂಸದ ಮುದ್ದೆಯು ನನ್ನ ಕಣ್ಣೆಂದು ಹಿಗ್ಗುತ್ತಿದ್ದೆ. ಎಂದಾದರೂ ಹೋಗತಕ್ಕುದಿದು ಇಂದೇ ಹೋಯಿತು' ಎನ್ನುತ್ತ, ಇನ್ನೊಂದು ಕಣ್ಣು ತೋರಿದನು. ಆ ಕಣ್ಣೂ ಹೋಯಿತು. ಆದರೂ ಕುಣಾ ಲನು ಕೊಂಚವೂ ವ್ಯಾಕುಲಪಡಲಿಲ್ಲ. 'ಹೊರಗಿನ ಈ ಕಣ್ಣು ಹೋದರೂ ಹೋಯಿತು. ಧರ್ಮವನ್ನು ಕಾಣುವ ಒಳಗಣ್ಣು ನನಗೆ ಬಂತು. ರಾಜಕುಮಾರನಾದ ನಾನು ತಂದೆಯ ಆಗ್ರ ಹಕ್ಕೆ ಪಾತ್ರನಾಗಿ ಕಣ್ಣು ಕಳೆದುಕೊಂಡಾಗಲೂ ನನ್ನ ಮನಸ್ಸು ಸ್ತಿಮಿತವಾಗಿದೆ' ಎಂದು, ಧರ್ಮವನ್ನೇ ನೆನೆಯುತ್ತ ಸಂತೋಷ

ಚಿತ್ರನಾಗಿದ್ದನು.

ಅಷ್ಟರಲ್ಲಿ, ಆ ಆಜ್ಞೆಯು ಅಶೋಕನದಲ್ಲವೆಂದೂ, ಅದು ತಿಷ್ಯರಕ್ಷಿತೆಯ ಮಾಟವೆಂದೂ ತಿಳಿಯಿತು. ಆಗ ಕೂಡ ಕುಣಾಲನು ನಿಶ್ಚಲನಾಗಿದ್ದನು. 'ಕಣ್ಣು ಹೋದರೆ ಹೋಗಲಿ. ಮನಸ್ಸು ಧರ್ಮದಲ್ಲಿ ಸ್ಥಿರವಾಗಿ ನಿಂತಿದೆ. ನನಗೆ ಈ ಸುಖವನ್ನು ಒದಗಿಸಿದ ತಿಷ್ಯರಕ್ಷಿತೆಯು ಕ್ಷೇಮದಿಂದಿರಲಿ' ಎಂದನು.

ಈ ನಡುವೆ ತನ್ನ ಗಂಡನು ಕುರುಡಾದುದು ಕಾಂಚನಮಾಲೆಗೆ ತಿಳಿಯಿತು. ಅದು ಕೇಳಿ ಗೋಳಾಡುತ್ತ ಬಂದಳು. ಕುಣಾಲನು ಅವಳನ್ನು ಕುರಿತು, 'ದೇವಿ! ಅಳದಿರು. ಪ್ರತಿಯೊಬ್ಬನಿಗೂ ಅವನ ಕರ್ಮಕ್ಕೆ ಅನುಗುಣವಾದ ಫಲ ಸಿಗುವುದು. ಅದಕ್ಕೆ ದುಃಖಪಡಬಾರದು. ಮಾಡಿದುದನ್ನು ಅನುಭವಿಸಲೇಬೇಕು.' ಎಂದನು.

'ಕೇಳು, ದೇವಿ! ಹಿಂದೆ, ಬಲು ಹಿಂದೆ, ವಾರಣಾಸಿಯಲ್ಲಿ ಒಬ್ಬ ಬೇಡನಿದ್ದನು. ಅವನು ಹಿಮಾಲಯ ಪ್ರಾಂತದಲ್ಲಿ ಬೇಟೆಯಾಡುವವನು. ಒಂದು ಸಲ ಐನೂರು ಜಿಂಕೆಗಳನ್ನು ಹಿಡಿದು, ವಿನೋದಾರ್ಥವಾಗಿ ಅವುಗಳ ಕಣ್ಣು ಕಿತ್ತನು. ಕಣ್ಣು ಕಳೆದುಕೊಂಡ ಆ ಜಿಂಕೆಗಳು ಬದುಕಿಯೂ ಸತ್ತಂತೆಯೇ ಆದವು. ದೇವಿ! ಆಗ ಬೇಡನಾಗಿದ್ದವನು ನಾನೇ. ಬೇಟೆಯಾಡಿ, ಪ್ರಾಣಿಹಿಂಸೆ ಮಾಡಿದುದರಿಂದ ಸಾವಿರಾರು ಜನ್ಮಗಳು ನರಕದಲ್ಲಿ ಹುಟ್ಟಿದೆನು. ಐನೂರು ಜಿಂಕೆಗಳ ಕಣ್ಣು ಕಳಚಿದುದರ ಫಲವಾಗಿ ಐನೂರು ಸಲ ಕಣ್ಣು ಕಳೆದುಕೊಂಡಿರುವೆನು. ಪಾಪದ ಫಲವನ್ನು ಉಣ್ಣದೆ ತೀರದು.

'ಹೀಗಾದರೂ, ನಾನು ರಾಜವಂಶದಲ್ಲಿ ಹುಟ್ಟಿ, ಇಷ್ಟು

ಸುಂದರನಾದುದು ಹೇಗೆಂದು ನಿನಗೆ ತೋರಬಹುದು. ಹಿಂದೆ, ಕ್ರಕುಚಂಡನೆಂಬ ಬುದ್ಧನು ಸತ್ತಮೇಲೆ, ಅವನಿಗೆ ಒಂದು ಸ್ತೂಪ ಕಟ್ಟಿದರು. ಕೊಂಚ ಕಾಲವಾದ ಮೇಲೆ ಯಾರೋ ಕಳ್ಳರು ಆ ಸ್ತೂಪವನ್ನು ಒಡೆದು, ಒಳಗಿನ ರತ್ನಗಳನ್ನು ಕದ್ದರು. ಆ ಸ್ತೂಪ ಭಗ್ನವಾದುದು ಕಂಡು ಜನವೆಲ್ಲ ಗೋಳಾಡಿತು. ಒಬ್ಬ ಚತುರನಾದ ಶಿಲ್ಪಿಯೂ ಅದನ್ನು ಕಂಡನು. ಕನಿಕರದಿಂದ ಆ ಸ್ತೂಪವನ್ನು ಉದ್ಧಾರಮಾಡಿದನು. ಅದೇ ಸ್ಥಳದಲ್ಲಿ ಬಿದ್ದಿದ್ದ ಕ್ರಕುಚಂಡನ ಮೂರ್ತಿಯನ್ನೂ ಎತ್ತಿ ನಿಲಿಸಿದನು. ಕ್ರಕುಚಂಡನಿಗೆ ತನ್ನ ಸೇವೆಯು ಪ್ರೀತಿಯಾಗಲಿ ಎಂದು ಆ ಕಾರ್ಯಗಳನ್ನು ನಡೆಸಿದನು. ದೇವಿ! ಆಗ ಶಿಲ್ಪಿಯಾಗಿದ್ದವನು ನಾನೆ. ಸ್ತೂಪದ ಉದ್ಧಾರದಿಂದ ರಾಜಕುಮಾರನಾದೆನು. ಮೂರ್ತಿಯ ಉದ್ಧಾರದಿಂದ ಸುಂದರನಾದೆನು. ಪುಣ್ಯದ ಫಲವನ್ನು ಉಣ್ಣದೆ ತೀರದು.’

ಹೀಗೆ ಪತ್ನಿಯನ್ನು ಸಮಾಧಾನಗೊಳಿಸಿ, ಕುಣಾಲನು, ಅವಳೊಡನೆ ತಕ್ಷಶಿಲೆಯನ್ನು ಬಿಟ್ಟನು. ತನ್ನ ವೀಣಾಗಾನದಿಂದ ಸಂಪಾದಿಸಿದುದರಲ್ಲಿ ಅವಳನ್ನೂ ಕಾಪಾಡುತ್ತಿದ್ದನು. ಹಾಗೆಯೇ ಸಂಚರಿಸುತ್ತ ದಂಪತಿಗಳು ಪಾಟಲೀಪುರಕ್ಕೂ ಬಂದರು. ಅಶೋಕನನ್ನು ಕಾಣುವುದು ತಮ್ಮ ಕರ್ತವ್ಯವೆಂದು ಬಗೆದು ಅರಮನೆಯನ್ನು ಹೊಗಲೆತ್ನಿಸಿದರು. ದ್ವಾರಪಾಲಕನಿಗೆ ಅವರ ಪರಿಚಯವಾಗಲಿಲ್ಲ. ಕುಣಾಲನೂ ಕಾಂಚನಮಾಲೆಯೂ ಪಕ್ಕದ ಲಾಯದಲ್ಲಿ ತಂಗಬೇಕಾಯಿತು.

ಉಷಃಕಾಲದಲ್ಲಿ ಕುಣಾಲನೆದ್ದನು. ಎದ್ದು, ತನ್ನ ವೀಣೆಯನ್ನು ನುಡಿಸುತ್ತ ಕುಳಿತನು. ವೀಣೆಯ ಧ್ವನಿಯು ಅಶೋ

ಕನ ಕಿವಿಗೂ ಬಿತ್ತು. ಮಗನು ಕಣ್ಣು ಕಳೆದುಕೊಂಡು ದೇಶಾಂತರಗತನಾದನೆಂದು ಕೇಳಿ, ಅವನು ಬಹಳ ಕುಗ್ಗಿಹೋಗಿದ್ದನು. ಕುಣಾಲನ ವೀಣೆಯ ಪರಿಚಯು ಅವನಿಗಿತ್ತು. ಹೊಸಜೀವ ಬಂದಂತಾಯಿತು. ತನ್ನ ಹಿಂದಿನ ಸ್ವಪ್ನಗಳನ್ನು ನೆನೆದು ನಡುಗಿದನು. ವೀಣೆ ನುಡಿಸುವವನನ್ನು ನೋಡಿ ಬರುವಂತೆ ದೂತನನ್ನಟ್ಟಿದನು. ಕುರುಡನೊಬ್ಬನು ಗಡ್ಡ ತಲೆಗೂದಲುಗಳನ್ನು ಬೆಳೆಸಿ ತನ್ನ ಹೆಂಡತಿಯೊಡನೆ ಲಾಯದಲ್ಲಿರುವನೆಂದು ದೂತನು ತಿಳಿಸಿದನು.

ಅಶೋಕನಿಗೆ ಅವರು ತನ್ನ ಮಗ ಮತ್ತು ಸೊಸೆಯೆಂದು ತಿಳಿಯಿತು. ಆವರೂ ಅವರಿರಲಾರರೆಂದು ಆಸೆ ಒಂದು ಕಡೆ, ತಾನೇ ಹೋಗಿ ನೋಡಲು ಅಳುಕು ಒಂದು ಕಡೆ. ಅದರಿಂದ, ಬಂದವರ ಪರಿಚಯುವನ್ನು ತಿಳಿದು ಬಾರೆಂದು ಬೇರೊಬ್ಬ ದೂತನನ್ನು ಕಳುಹಿಸಿದನು. ದೂತನ ಪ್ರಶ್ನೆಗೆ ಕುಣಾಲನು 'ನಾನು ಹಿಂದೆ ಅಶೋಕನ ಮಗನಾಗಿದ್ದವನು. ಈಗ ಬುದ್ಧದೇವನ ಮಗನು' ಎಂದನು. ಎಂದು, ಅಶೋಕನ ಬಳಿಗೆ ತಾನೇ ನಡೆದನು.

ಮಗನ ಒಣಗಿದ ದೇಹವನ್ನೂ, ಹರಕು ಬಟ್ಟೆಯನ್ನೂ, ಕಳೆದ ಕಣ್ಣನ್ನೂ ಕಂಡು ಅಶೋಕನು ಅವನನ್ನು ಕುಣಾಲನೆಂದು ನಂಬದೆ ಹೋದನು. ಆದರೆ ಅವನ ಬಾಯಿಂದಲೆ ಅವನು ಕುಣಾಲನೆಂದು ತಿಳಿದು ಮೂರ್ಛೆಹೋದನು. ಎಚ್ಚತ್ತು 'ಮಗನೆ! ನಿನ್ನ ಕಣ್ಣುಗಳನ್ನು ನೋಡಿ ನಿನಗೆ ಕುಣಾಲನೆಂದು ಹೆಸರಿಟ್ಟೆನು. ಈಗ ಹೇಗೆ ಕುಣಾಲಾ ಎಂದು ಕರೆಯಲಿ?' ಎಂದು ಬಹುವಿಧವಾಗಿ ಹಲುಬಿದನು. ಅದಕ್ಕೆ ಕುಣಾಲನು

'ಮಹಾರಾಜ! ಆಗಿಹೋದುದಕ್ಕೆ ದುಃಖಿಸಬಾರದು. ಕರ್ಮದ ಫಲವನ್ನು ಯಾರೂ ತಪ್ಪಿಸಿಕೊಳ್ಳಲಾರರೆಂದು ಬುದ್ಧದೇವನು ಹೇಳಿಲ್ಲವೆ! ರಾಜ! ನಾನು ಹಿಂದೆಮಾಡಿದ ದುಷ್ಕರ್ಮವೆ ಕಾರಣವಾಗಿ ಈಗ ಕಣ್ಣು ನೀಗಿಕೊಂಡಿದ್ದೇನೆ. ಅಷ್ಟೆ' ಎಂದು ಅವನನ್ನು ಸಂತೈಸಿದನು.

ಅಶೋಕನ ದುಃಖ ಕಡಿಮೆಯಾದರೂ ಅವನ ಕೋಪ ಕಡಿಮೆಯಾಗಲಿಲ್ಲ. ಈ ಅನರ್ಥಗಳಿಗೆಲ್ಲ ಮೂಲಕಾರಣಳಾದ ತಿಷ್ಯರಕ್ಷಿತೆಯನ್ನು ಕ್ರೂರವಾಗಿ ಶಿಕ್ಷಿಸಬೇಕೆಂದು ಬಗೆದನು. ಆದರೆ ಕುಣಾಲನು 'ರಾಜ! ತಿಷ್ಯರಕ್ಷಿತೆಯನ್ನು ಹಿಂಸಿಸುವುದು ನನಗೆ ಮಾನವಲ್ಲ. ಹೆಂಗಸರನ್ನು ಗೌರವಿಸಬೇಕೇ ವಿನಾ ಘಾಸಿ ಗೊಳಿಸಬಾರದು. ಕ್ಷಮಾಗುಣಕ್ಕಿಂತ ಹೆಚ್ಚಾದುದು ಬೇರೆ ಇಲ್ಲ' ಎಂದು ಅವನನ್ನು ತಡೆದನು.

ಆ ಕಾಲದಲ್ಲಿ ಘೋಷನೆಂಬ ಬೌದ್ಧಸಂನ್ಯಾಸಿಯು ಪಾಟಲೀಪುತ್ರದಲ್ಲಿ ವಾಸಿಸುತ್ತಿದ್ದನು. ಆತನು ಮಹಾತ್ಮನು. ಅಶೋಕನು ಕುಣಾಲನನ್ನು ಅವನ ಬಳಿ ಕರೆದೊಯ್ದು, ಸರ್ವ ವಿದ್ಯಮಾನಗಳನ್ನೂ ನಿವೇದಿಸಿ, 'ಆರ್ಯ! ಈತನಿಗೆ ಕಣ್ಣು ಕರುಣಿಸಬೇಕು' ಎಂದು ಬೇಡಿದನು. ಕುಣಾಲನಿಗೆ ಕಣ್ಣು ಕರುಣಿಸುವುದಾಗಿ ಘೋಷನು ಅಭಯ ಕೊಟ್ಟನು. ಹಾಗೆ ಅಭಯ ಇತ್ತು, ಸುತ್ತಮುತ್ತಲಿನವರನ್ನು ಕುರಿತು 'ನಾಳೆ ಧರ್ಮವನ್ನು ಬೋಧಿಸುತ್ತೇನೆ. ಕೇಳಲು ಬರುವವರೆಲ್ಲ ತಮ್ಮ ಕಣ್ಣೀರನ್ನು ಸಂಪಾದಿಸಲು ಒಂದೊಂದು ಪಾತ್ರೆ ತರಲಿ' ಎಂದು ಅಪೇಕ್ಷಿಸಿದನು.

ಮಾರನೆಯ ದಿವಸ, ಘೋಷಕನ ಧರ್ಮನಿವೇದನವನ್ನು

ಕೇಳಲು ಜನರು ತಂಡೋಪತಂಡವಾಗಿ ಬಂದರು. ಬಂದವರೆಲ್ಲ ಒಂದೊಂದು ಪಾತ್ರೆ ತಂದರು. ಘೋಷಕನ ಧರ್ಮಬೋಧೆಯನ್ನು ಕೇಳುತ್ತ ಕೇಳುತ್ತ ಜನರ ಕಣ್ಣಿನಲ್ಲಿ ಆನಂದಬಾಷ್ಪ ತುಂಬಿ ಹರಿಯಿತು. ಅವರು ಆ ಕಣ್ಣೀರನ್ನು ತಮ್ಮ ಪಾತ್ರೆಗಳಲ್ಲಿ ತುಂಬಿದರು.

ಅವರು ಈ ರೀತಿ ಸಂಪಾದಿಸಿದ ನೀರನ್ನೆಲ್ಲ ಒಂದು ಚಿನ್ನದ ಬಟ್ಟಲಿಗೆ ತುಂಬಿ, ಘೋಷಕನು, 'ಈ ನೀರು ಬುದ್ಧನ ಧರ್ಮಶ್ರವಣದಿಂದ ಸಂಪಾದಿತವಾದುದು. ಇದು ಸತ್ಯವಲ್ಲದೆ ನನ್ನ ಮಾತು ಸುಳ್ಳಾದರೆ, ಎಲ್ಲವೂ ಇದ್ದಂತೆ ಇರಲಿ; ಹಾಗಿಲ್ಲದೆ ನಾನೆಂದುದು ಋತವಾದರೆ, ಈ ನೀರಿನಿಂದ ತೊಳೆದ ಕಣ್ಣು ಮರಳಿ ಬರಲಿ' ಎಂದನು.

ಕುಣಾಲನು ಶ್ರದ್ಧಾಭಕ್ತಿಗಳಿಂದ ಆ ನೀರು ತೆಗೆದು ಕಣ್ಣು ತೊಳೆದನು. ಕಣ್ಣುಗಳೆರಡೂ ಕುಣಾಲದ ಕಣ್ಣುಗಳಂತೆಯೇ ಕುದುರಿದುವು. ಅಶೋಕನ ಆನಂದಕ್ಕೆ ಪಾರವಿಲ್ಲದೆ ಹೋಯಿತು.

**ಅಗ್ರಮಹಿಷಿ ತಿಷ್ಯರಕ್ಷಿತೆ**

ತಿಷ್ಯರಕ್ಷಿತೆಯ ಕಾಟ ಅಲ್ಲಿಗೆ ನಿಲ್ಲಲಿಲ್ಲ. ಅಶೋಕನ ಬಾಳಿನ ಸವಿ ಕೆಡಿಸಲು ಅವಳೇ ಮತ್ತೊಮ್ಮೆ ಕಾರಣವಾದಳು.

ಅರಮನೆಯ ಪಕ್ಕದಲ್ಲಿ ಒಂದು ಬೋಧಿ ವೃಕ್ಷವಿತ್ತು. ಬುದ್ಧದೇವನು ಗಯೆಯ ಬಳಿ ಒಂದು ಆಲದ ಮರದಡಿ ಜ್ಞಾನ ಸಂಪಾದಿಸಿದನು. ಆ ಆಲದ ಮರದ ರೆಂಬೆಯನ್ನು ಅಶೋಕನು ತನ್ನ ಅರಮನೆಯ ಬಳಿ ಬೆಳೆಸಿದ್ದನು. ಅದೆ ಬೆಳೆದು ಮಹಾ

ವೃಕ್ಷವಾಗಿತ್ತು. ಆ ವೃಕ್ಷವನ್ನು ಅಶೋಕನು ಪರಮಾದರದಿಂದ ಪೂಜಿಸುತ್ತಿದ್ದನು. ತೆರತೆರನಾದ ವಸ್ತ್ರಾಭರಣಗಳನ್ನು ಆ ವೃಕ್ಷಕ್ಕೆ ನಿವೇದಿಸುತ್ತಿದ್ದನು.

ದೊರೆಯು ತನ್ನನ್ನು ಬಿಟ್ಟು ಬೋಧಿ ವೃಕ್ಷವನ್ನು ಹೆಚ್ಚಾಗಿ ಪ್ರೀತಿಸುವುದು, ಪಟ್ಟದ ರಾಣಿಯಾದ ತಿಷ್ಯರಕ್ಷಿತೆಗೆ ಸರಿಬೀಳಲಿಲ್ಲ. ಅದಕ್ಕೆ ಪ್ರತಿಕಾರವೇನೆಂದು ಬಹು ಕಾಲ ಯೋಚಿಸಿದಳು. ಕಡೆಗೆ, ಒಬ್ಬ ಹೊಲತಿಯನ್ನು ಕರೆಯಿಸಿ ಬೋಧಿ ವೃಕ್ಷಕ್ಕೆ ಮಂತ್ರ ಮಾಡಿಸಿದಳು. ಬೋಧಿ ವೃಕ್ಷವು ಒಣಗಿ ಹೋಯಿತು. ಆ ವೃಕ್ಷ ಹೋದಮೇಲೆ ಅರಸನು ತನ್ನ ಬಳಿಯೇ ಸದಾ ಇರುವನೆಂದು ರಾಣಿಯು ಭಾವಿಸಿದಳು.

ಬೋಧಿ ವೃಕ್ಷವು ಒಣಗಿತೆಂದು ಅಶೋಕನಿಗೆ ತಿಳಿಯಿತು. ಆದರೆ ಏಕೆ ಒಣಗಿತೆಂಬುದನ್ನು ಅವನು ಅರಿಯನು. ದುಃಖಾಕ್ರಾಂತನಾಗಿ ಅನ್ನ ಬಿಟ್ಟನು, ನೀರು ಬಿಟ್ಟನು, ನಿದ್ದೆ ಬಿಟ್ಟನು. ಬೋಧಿ ವೃಕ್ಷವು ಮತ್ತೆ ಚಿಗುರದಿದ್ದರೆ, ಪ್ರಾಣಬಿಡುವೆನೆಂದು ವ್ರತಮಾಡಿದನು. ಅಶೋಕನು ಬೋಧಿ ವೃಕ್ಷವನ್ನು ಎಷ್ಟು ಪ್ರೀತಿಸುತ್ತಿದ್ದನೆಂಬುದು ತಿಷ್ಯರಕ್ಷಿತೆಗೆ ತಿಳಿದಿರಲಿಲ್ಲ. ಈಗ ತಿಳಿಯಿತು. ತಾನು ಅಸೂಯೆಯಿಂದ ನಡೆಸಿದ ಅಕಾರ್ಯಕ್ಕೆ ನಾಚಿದಳು. ಪುನಃ ಅದೇ ಹೊಲತಿಯನ್ನು ಕರೆಯಿಸಿ ಒಣಗಿದ ಬೋಧಿವೃಕ್ಷಕ್ಕೆ ಜೀವದಾನ ಮಾಡಿಸಿದಳು.

ಬೋಧಿವೃಕ್ಷವು ಚಿಗುರಿದುದು ಕೇಳಿ ಅಶೋಕನ ಆನಂದ ಉಕ್ಕಿ ಹರಿಯಿತು. ಆ ಆನಂದಾತಿರೇಕದಲ್ಲಿ ಒಂದು ದೊಡ್ಡ ಉತ್ಸವವನ್ನೇ ನಡೆಸಿಬಿಟ್ಟನು. ಬಿಂಬಿಸಾರಾದಿ ರಾಜರು ಕೂಡ ಅಂತಹ ಕೆಲಸ ಮಾಡಿರಲಿಲ್ಲ. ಆ ಉತ್ಸವಕ್ಕೆ ಜಂಬೂದ್ವೀಪದ

ಬೌದ್ಧ ಸಂನ್ಯಾಸಿ ಶ್ರೇಷ್ಠರು ನಾನೂರು ಸಾವಿರ ಮಂದಿ ಬಂದಿದ್ದರು. ದೊರೆಯು, ಚಂದನ ಕರ್ಪೂರ ಕೇಸರಿ ಕೂಡಿದ ಪರಿಮಳ ಜಲವನ್ನು ಐದು ಸಾವಿರ ಚಿನ್ನ ಬೆಳ್ಳಿ ಸ್ಫಟಿಕದ ಕುಂಭಗಳಲ್ಲಿ ತುಂಬಿ, ಬೋಧಿವೃಕ್ಷಕ್ಕೆ ಅಭಿಷೇಕ ಮಾಡಿದನು. ಸಹಸ್ರಾರು ಪುಷ್ಪಗಳನ್ನು ಅರ್ಪಿಸಿದನು. ಬೇಡಿದವರಿಗೆ ದರಿದ್ರ ಹರಿಯುವವರಿಗೂ ದಾನಮಾಡಿದನು. ಬಂದು ನೆರೆದ ಬೌದ್ಧ ಸಂನ್ಯಾಸಿಗಳನ್ನು ಐದು ತಿಂಗಳ ಕಾಲ ಬಹು ವಿಧಗಳಲ್ಲಿ ಸತ್ಕರಿಸಿದನು. ಐದು ತಿಂಗಳಾದಮೇಲೆ, ಯಾರೂ ನಡೆಸದ ದಾನವನ್ನು ತಾನು ನಡಸಲು ಮನಸ್ಸು ಮಾಡಿದನು. ತನ್ನ ಚಕ್ರಾಧಿಪತ್ಯದೊಡನೆ ಹೆಂಡಿರು ಮಕ್ಕಳನ್ನೂ, ಸಚಿವರನ್ನೂ, ತನ್ನನ್ನೂ, ತನ್ನ ಭಂಡಾರವೊಂದುಳಿದ ಸರ್ವಸ್ವವನ್ನೂ ಭಿಕ್ಷುಗಳ ಸಂಘಕ್ಕೆ ದಾನಮಾಡಿದನು. ಅನಂತರ ಅವರು ಕೇಳಿದ ಬೆಲೆ ಕೊಟ್ಟು ದಾನಮಾಡಿದುದನ್ನೆಲ್ಲ ಬಿಡಿಸಿಕೊಂಡನು.

ಅಶೋಕನ ಧರ್ಮಾನುರಾಗವು ಹೀಗೆ ದಿನೇ ದಿನೇ ಬೆಳೆಯುತ್ತಿತ್ತು.

**ಅಶೋಕನ ಮರಣ**:—

ಹಿಂದೆ, ಬುದ್ಧನು ಬದುಕಿದ್ದಾಗ, ಅನಾಥಪಿಂಡಿಕನೆಂಬವನು ಧರ್ಮಕ್ಕೆ ಒಂದು ನೂರು ಕೋಟಿ ಹೊನ್ನು ದಾನಮಾಡಿದನು. ಅದು ಕೇಳಿ, ತಾನೂ ಒಂದು ನೂರು ಕೋಟಿ ಹೊನ್ನು ದಾನಮಾಡಬೇಕೆಂದು ಅಶೋಕನಿಗೆ ಮನಸ್ಸಾಯಿತು.

ಅಶೋಕನು ೮೪,೦೦೦ ಸ್ತೂಪಗಳನ್ನು ಕಟ್ಟಿಸಿದನು. ಪ್ರತಿ ಸ್ಥಳದಲ್ಲಿಯೂ ಎ ರ ಡೆ ರ ಡು ಸಾವಿರ ಹೊನ್ನು ದಾನ

ಕೊಟ್ಟನು. ತಾನು ಸಂಚರಿಸಿದ ಪವಿತ್ರ ಕ್ಷೇತ್ರಗಳಲ್ಲಿಯೂ ಹಾಗೆಯೆ ದಾನಮಾಡಿದನು. ಭಿಕ್ಷುಗಳನ್ನು ವರುಷದ ಐದು ತಿಂಗಳೂ ಸತ್ಕರಿಸಿ, ಅವರಿಗಾಗಿ ನಾಲ್ಕು ಲಕ್ಷ ಸುವರ್ಣಗಳನ್ನು ವ್ಯಯಮಾಡಿದನು. ಒಂದು ಲಕ್ಷ ಬೌದ್ಧ ಸಂನ್ಯಾಸಿ ಶ್ರೇಷ್ಠರಿಗೆ ಮಾತ್ರವಲ್ಲದೆ ಮೂರು ಲಕ್ಷ ಸಾಧಾರಣ ಬೌದ್ಧ ಸಂನ್ಯಾಸಿಗಳಿಗೂ ಆಶ್ರಯಕೊಟ್ಟನು. ಅವರ ಸಂಘಕ್ಕೆ ತನ್ನ ಭಂಡಾರ ಹೊರತಾಗಿ ಸರ್ವಸ್ವವನ್ನೂ ದಾನಮಾಡಿ, ನಾಲ್ಕು ಲಕ್ಷ ಸುವರ್ಣಗಳಿಗೆ ಬಿಡಿಸಿಕೊಂಡನು. ಹೀಗೆ ಅಶೋಕನು ಧರ್ಮಕ್ಕಾಗಿ ತೊಂಬತ್ತಾರು ಕೋಟಿಗಳನ್ನು ದಾನಮಾಡಿದನು.

ಹೀಗಿರಲು ಅಶೋಕನ ಅಂತ್ಯಕಾಲ ಸಮೀಪಿಸಿತು. ಅಶೋಕನು ಮಾಡಬೇಕೆಂದಿದ್ದ ನೂರು ಕೋಟಿಯ ದಾನವು ಇನ್ನೂ ಮುಗಿದಿರಲಿಲ್ಲ. ಅದು ಮುಗಿಸುವ ಮುಂಚೆ ಎಲ್ಲಿ ಮೃತನಾದೇನೋ ಎಂದು ಬಹಳ ವ್ಯಾಕುಲನಾಗಿದ್ದನು. ಅರಸನ ವ್ಯಾಕುಲವನ್ನು ಕಂಡು ರಾಧಗುಪ್ತನೆಂಬ ಮಂತ್ರಿಯು ಕಾರಣವನ್ನು ಬೆಸಗೊಂಡನು. ಆಗ ಅಶೋಕನು, "ರಾಧಗುಪ್ತ! ನನ್ನ ಸಂಪತ್ತು ಹೋಯಿತೆಂದಾಗಲಿ, ನನ್ನ ಅರಸುತನ ಮುಗಿಯಿತೆಂದಾಗಲಿ, ನಾನು ಸಾಯುವೆನೆಂದಾಗಲಿ ದುಃಖಿಸುತ್ತಿಲ್ಲ. ಬೌದ್ಧ ಸಂನ್ಯಾಸಿಗಳನ್ನು ಬಿಟ್ಟು ಹೋಗಬೇಕಲ್ಲ ಎಂದು ಸಂಕಟವಾಗುತ್ತಿದೆ. ಸದ್ಗುಣ ಸಂಪನ್ನವಾಗಿ ದೇವಮಾನವರಿಗೆಲ್ಲ ಪೂಜಾರ್ಹವಾದ ಇಂತಹ ಸಂಘವನ್ನು ನಾನು ಮತ್ತೆಲ್ಲಿ ಕಂಡೇನು! ಅವರಿಗೆ ತಿಂಡಿ ತೀರ್ಥಗಳನ್ನು ಇನ್ನೆಲ್ಲಿ ಒದಗಿಸುವೆನು! ಇದನ್ನು ನೆನೆದು ಚಿಂತಿಸುವೆನು, ರಾಧಗುಪ್ತ! ಧರ್ಮಕ್ಕಾಗಿ ನೂರು ಕೋಟಿ ದಾನ ಮಾಡಬೇಕೆಂಬ ಮನಸ್ಸು

ಮಾಡಿದ್ದೆ. ಆ ಆಸೆ ಇನ್ನೂ ಪೂರ್ಣವಾಗಿಲ್ಲ” ಎಂದನು.

ಅದೇ ಸಮಯದಲ್ಲಿ ಕುಣಾಲನ ಮಗನಾದ ಸಂಪ್ರತಿಯು ಯುವರಾಜನಾಗಿದ್ದನು. ಕೆಲವು ಮಂತ್ರಿಗಳು ಅವನ ಬಳಿ ಹೋಗಿ, ‘ರಾಜಕುಮಾರ! ನೀನು ಮುಂದೆ ಅರಸಾಗತಕ್ಕವನು. ಅಶೋಕನ ಆಯುಸ್ಸು ಮುಗಿಯುತ್ತ ಬಂದಿದೆ. ಅವನು ತನ್ನ ಐಶ್ವರ್ಯವನ್ನೆಲ್ಲ ಬೌದ್ಧ ಸಂನ್ಯಾಸಿಗಳಿಗೆ ದಾನಮಾಡುತ್ತಿದ್ದಾನೆ. ಮಿಕ್ಕ ದೊರೆಗಳ ಭಂಡಾರಗಳು ತುಂಬಿ ತುಳುಕುತ್ತಿವೆ. ನಿನ್ನ ಭಂಡಾರ ಮಾತ್ರ ಬರಿದಾಗುತ್ತಿದೆ!” ಎಂದು ಚುಚ್ಚಿಕೊಟ್ಟರು. ಸಂಪ್ರತಿಯು ಅವರ ಬೋಧೆಗೆ ಕಿವಿಗೊಟ್ಟು, ಅಶೋಕನಿಗೆ ಹಣ ಕೊಡಬೇಡವೆಂದು ಬೊಕ್ಕಸದವನಿಗೆ ಆಜ್ಞೆಮಾಡಿದನು.

ಅಶೋಕನಿಗೆ ದಿನವೂ ಚಿನ್ನದ ಪಾತ್ರೆಗಳಲ್ಲಿ ಬಡಿಸುತ್ತಿದ್ದರು. ಬೊಕ್ಕಸದಿಂದ ಬರುವ ಹಣ ನಿಂತಮೇಲೆ, ಅಶೋಕನು ಆ ಚಿನ್ನದ ಪಾತ್ರೆಗಳನ್ನೇ ದಾನಕೊಡುತ್ತಿದ್ದನು. ಅದು ಕಂಡು, ಸಂಪ್ರತಿಯು, ಚಿನ್ನದ ಪಾತ್ರೆಗೆ ಬದಲು ಬೆಳ್ಳಿಯ ಪಾತ್ರೆ ಕಳುಹಿಸಿದನು. ಅದು ಕೂಡ ದಾನಕ್ಕಾಗಿ ವಿನಿಯೋಗವಾಗುತ್ತಿತ್ತು. ಕಡೆ ಕಡೆಗೆ ಅಶೋಕನಿಗೆ ಮಣ್ಣಿನ ಪಾತ್ರೆಗಳಲ್ಲಿ ಬಡಿಸಲಾರಂಭಿಸಿದರು. ಅಂತೂ, ಅಶೋಕನು ಬಯಸಿದ್ದ ನೂರು ಕೋಟಿ ಹೊನ್ನಿನ ದಾನವಿನ್ನೂ ಪೂರ್ಣವಾಗಲಿಲ್ಲ.

ಆಗ ಅಶೋಕನು ಒಂದು ಅರ್ಧ ನೆಲ್ಲಿಯ ಕಾಯನ್ನು ಕೈಯಲ್ಲಿ ಹಿಡಿದು, ತನ್ನ ಸಚಿವರನ್ನೂ ಪ್ರಜೆಗಳನ್ನೂ ಕರೆಯಿಸಿ, ‘ಈ ನಾಡಿನ ಅರಸನು ಯಾರು?” ಎಂದು ದುಃಖದಿಂದ ಕೇಳಿದನು.

ಎಲ್ಲರೂ ತಮ್ಮ ಪೀಠಗಳಿಂದ ಎದ್ದು ಕೈ ಜೋಡಿಸಿ,

'ದೇವ! ಈ ನಾಡಿಗೆ ನೀನಲ್ಲದೆ ಬೇರೆ ಅರಸನುಂಟೆ!' ಎಂದರು.

ಅಶೋಕನ ಕಣ್ಣಿನಲ್ಲಿ ನೀರು ತುಂಬಿತು. 'ನೀವೆಲ್ಲರೂ ನನ್ನ ಮೇಲಿನ ಅಭಿಮಾನದಿಂದ ನಿಜವಲ್ಲದುದನ್ನೇ ಹೇಳುವಿರಿ. ನನ್ನ ಅರಸುತನವು ಮುಗಿಯಿತು. ಈಗ ಈ ಅರ್ಧ ನೆಲ್ಲಿಯ ಕಾಯಿ ಬಿಟ್ಟರೆ, ದಾನ ಕೊಡಲು ನನಗೇನೂ ಇಲ್ಲ. ಚಕ್ರವರ್ತಿಯಾದರೂ ನನಗೆ ಈ ದುಃಖ ತಪ್ಪಲಿಲ್ಲ. ಮೊದಲು ಎಷ್ಟು ಸುಖ ಹೆಚ್ಚಿದರೆ, ಕಡೆಯಲ್ಲಿ ಅಷ್ಟು ದುಃಖ ಬರುವುದು—ಎಂದು ಬುದ್ಧದೇವನು ಹೇಳಿರುವನು. ಆತನ ಮಾತು ಎಂದೂ ಸುಳ್ಳಾಗದು. ಏಕಚಕ್ರಾಧಿಪತಿಯಾಗಿ, ಯುದ್ಧಗಳಲ್ಲಿ ವಿಜಯಿಯಾಗಿ, ಪ್ರತಿಷ್ಠೆಯಿಂದ ಕೊಬ್ಬಿದವರನ್ನು ಮೆಟ್ಟಿದೆನು. ಈಗ ಆ ವೈಭವ ಹೋಯಿತು. ಲತೆಯಿಂದ ಕತ್ತರಿಸಿದ ಹೂವಿನ ಹಾಗಾದೆನು' ಎಂದನು.

ಹಾಗೆ ಹೇಳಿ, ಬಳಿಯವನೊಬ್ಬನನ್ನು ಕರೆದು, 'ಗೆಳೆಯ! ನನಗೆ ಈಗ ಹಿಂದಿನ ಅಧಿಕಾರವಿಲ್ಲ. ಆದರೂ ನನ್ನ ಹಿಂದಿನ ಸುಕೃತಗಳ ಬಲದಿಂದ ನಿನಗೆ ಆಜ್ಞೆಮಾಡುತ್ತೇನೆ. ಇದೋ, ಈ ಅರ್ಧ ನೆಲ್ಲಿಯ ಕಾಯನ್ನು ಕುಕ್ಕುಟಾರಾಮದಲ್ಲಿರುವ ಭಿಕ್ಷುಗಳಿಗೆ ಅರ್ಪಿಸು. ಅರ್ಪಿಸಿ ಅವರಿಗೆ ನಮಸ್ಕರಿಸು. ಜಂಬೂದ್ವೀಪದ ಚಕ್ರವರ್ತಿಯಾದ ಅಶೋಕನ ಸ್ಥಿತಿ ಹೀಗಾಯಿತೆಂದು ಹೇಳು. ಇದೆ ನನ್ನ ಕಡೆಯ ಭಿಕ್ಷೆಯೆಂದು ತಿಳಿಸು. ಅರಸುತನ ಅಧಿಕಾರಗಳು ನನ್ನನ್ನು ತೊರೆದುವೆಂದು ನಿವೇದಿಸು. ಆ ಭಿಕ್ಷುಗಳಲ್ಲದೆ ನನಗೆ ಬೇರೆ ಆಶ್ರಯವಿಲ್ಲ. ಈ ಅರ್ಧ ನೆಲ್ಲಿಯ ಕಾಯನ್ನೇ ನನ್ನ ಕಡೆಯ ದಾನವೆಂದು ಅವರೆಲ್ಲರೂ ಸ್ವೀಕರಿಸಲಿ. ಎಂದಿನಂತೆ ನನಗೆ ಅನುಗ್ರಹ ಮಾಡಲಿ' ಎಂದು ನುಡಿದನು.

ನಿಯೋಗಿಯು ಅರಸನ ಆಜ್ಞೆಯನ್ನು ಶಿರಸಾವಹಿಸಿ ನಡೆದನು. ಅಲ್ಲಿನ ಭಿಕ್ಷುಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು. ನಮಸ್ಕರಿಸಿ, 'ಇದುವರೆಗೆ ಅಶೋಕನು ಸೂರ್ಯನಂತೆ ಸಮಸ್ತ ಲೋಕಕ್ಕೂ ಒಡೆಯನಾಗಿದ್ದನು. ಅವನ ಅಭಿವೃದ್ಧಿಯು ತುದಿಮುಟ್ಟಿ ಮುಳುಗಿತು. ಅಧಿಕಾರ ಹೀನನಾಗಿ ಸಂಜೆಯ ಸೂರ್ಯನಂತಾಗಿರುವನು' ಎಂದು ತಿಳಿಸಿ, ಅಶೋಕನು ಕಳುಹಿಸಿದ ಅರ್ಧ ಆಮಲಕವನ್ನು ಅವರಿಗೆ ಒಪ್ಪಿಸಿದನು. ಭಿಕ್ಷುಗಳು ಆ ದಾನವನ್ನು ಬಹು ವಿಶ್ವಾಸದಿಂದ ಸ್ವೀಕರಿಸಿದರು. ಅದನ್ನು ನುಣ್ಣಗೆ ಅರೆದು, ನೀರಿನಲ್ಲಿ ಕರಗಿಸಿ, ಎಲ್ಲರೂ ಸವಿದು ತಣಿದರು.

ಈ ನಡುವೆ ಅರಮನೆಯಲ್ಲಿ ಅಶೋಕನು ಮತ್ತೊಮ್ಮೆ ಮಂತ್ರಿಗಳನ್ನು ಕರೆದು, 'ಈ ನಾಡಿನ ಚಕ್ರವರ್ತಿಯಾರು ?' ಎಂದು ಕೇಳಿದನು. ಮಂತ್ರಿಗಳು ಮೊದಲಿನಂತೆ, 'ದೇವ ! ಈ ನಾಡಿನ ಚಕ್ರವರ್ತಿ ನೀನೇ !' ಎಂದರು. ಅದು ಕೇಳಿ ಅಶೋಕನು ಮೆಲ್ಲನೆ ಮೇಲೆದ್ದನು. ಭಿಕ್ಷುಗಳಿರುವ ದಿಕ್ಕಿಗೆ ತಿರುಗಿ ಭಕ್ತಿಯಿಂದ ಕೈಮುಗಿದನು.

'ನಾನು ಇನ್ನೂ ಈ ನಾಡಿನ ಚಕ್ರವರ್ತಿ ತಾನೆ ! ನನ್ನ ಭಂಡಾರ ಒಂದುಳಿದು, ಚಕ್ರಾಧಿಪತ್ಯವನ್ನೆಲ್ಲ ಭಿಕ್ಷುಗಳಿಗೆ ದಾನ ಕೊಡುವೆನು. ಹಸುರಿನ ಬಟ್ಟೆಯುಟ್ಟು, ಸಮುದ್ರವೆ ಒಡ್ಯಾಣವಾಗಿ, ಸಕಲ ರತ್ನಗಳನ್ನು ಧರಿಸಿ, ಅನೇಕ ಜೀವಿಗಳನ್ನು ಸಲಹಿ, ಮಂದಾರ ಗಿರಿಯನ್ನು ಹೊತ್ತಿರುವ ಈ ಭೂತಳವನ್ನು ಭಿಕ್ಷುಗಳಿಗೆ ಸಮರ್ಪಿಸುವೆನು. ಈ ದಾನದ ಫಲವು ನನಗಾಗಲಿ. ಈ ಸತ್ಕಾರ್ಯಕ್ಕಾಗಿ ನನಗೆ ಇಂದ್ರ ಪದವು ಬೇಡ, ಬ್ರಹ್ಮಲೋಕ

ಬೇಡ, ದೊರೆತನವಂತೂ ಮೊದಲೆ ಬೇಡ. ನಾನು ಈ ದಾನ ದಲ್ಲಿ ತೋರಿರುವ ಸುಬುದ್ಧಿಗಾಗಿ, ನನಗೆ ಬೌದ್ಧ ಸಂನ್ಯಾಸಿಗಳ ಪ್ರೀತಿ ಗೌರವಗಳು ದೊರಕಿದರೆ ಸಾಕು; ಬೇರೇನೂ ಬೇಡ. ಅದೆ ಬಲು ಹಿತಕರವಾದುದು.' ಎಂದು ಹೇಳಿ, ಅಶೋಕನು, ತನ್ನ ದಾನಕ್ಕೆ ತಕ್ಕ ದಾನಶಾಸನಗಳನ್ನು ಬರೆಯಿಸಿ, ಅವಕ್ಕೆ ತನ್ನ ರಾಜಮುದ್ರೆಯನ್ನು ಒತ್ತಿಸಿದನು.

ಹೀಗೆ ತನ್ನ ಸರ್ವಸ್ವವನ್ನೂ ಬೌದ್ಧ ಸಂನ್ಯಾಸಿಗಳಿಗೆ ದಾನಮಾಡಿ, ಅಶೋಕನು, ಕಾಲನಿಯಮಕ್ಕೆ ತಲೆಬಾಗಿ ಮೃತ ನಾದನು.

# ಅಶೋಕನ ಗುಣಗಾನ


ಅಶೋಕನು ತನ್ನ ಶಾಸನಗಳನ್ನು ಕುರಿತು 'ಈ ಶಾಸನಗಳಲ್ಲಿ ಕೆಲವು ಭಾಗಗಳು ಬಹು ಮಧುರವಾಗಿವೆ. ಜನರು ಅದರಂತೆ ನಡೆಯಲೆಂದು ಅವುಗಳನ್ನು ಪುನಃ ಪುನಃ ಹೇಳಲಾಗಿದೆ' ಎಂದನು. ಅದೇ ಮಾತನ್ನು ತಿರುಗಿಸಿ ಅಶೋಕನ ಕಾರ್ಯಗಳಿಗೂ ಹೇಳಬಹುದು. ನಮಗೆ ಅಶೋಕ ಚಕ್ರವರ್ತಿಯ ಪರಿಚಯವಾಗಬೇಕಾದುದು ಅವಶ್ಯಕ.

ನಮ್ಮ ಭರತಭೂಮಿಯಲ್ಲೂ ಪ್ರಪಂಚದ ಇತರ ಭಾಗಗಳಲ್ಲೂ ಅನೇಕಾನೇಕ ಅರಸರು ಆಳಿ ಹೋದರು. ಆದರೆ ಅಶೋಕನಂತಹ ದೊರೆಯು ಹಿಂದೆ ಹುಟ್ಟಲಿಲ್ಲ, ಇನ್ನೂ ಹುಟ್ಟಿಲ್ಲ. ನೂರಾರು ಪೈಲಿಗಳುಳ್ಳ ಬಿರುದಿನ ರಾಜ ಮಹಾರಾಜರು ನಕ್ಷತ್ರಗಳಂತಿದ್ದರೆ, ಅಂತಹ ಬಿರುದು ಬಾವಲಿಗಳಿಲ್ಲದ ಅಶೋಕನು ಆದಿತ್ಯನಂತೆ ಪ್ರಜ್ವಲಿಸುತ್ತಾನೆ. ರಾಜಕುಲಚೂಡಾಮಣಿ, ರಾಜಪರಮೇಶ್ವರ, ಮಹಾರಾಜಾಧಿರಾಜ, ಚಕ್ರವರ್ತಿಕುಲಮುಕುಟಮಣಿ, ಅವನಿಪತಿವ್ರಾತ ಮಣಿಮುಕುಟ ಕಿರಣ ದ್ಯೋತಿತಪಾದ, ಅಖಿಳಕ್ಷ್ಮಾಪಾಲಮೌಳಿಮಣಿ ಕಿರಣಾಪಾಳಿತ ನಖಮಯೂಖ ರಂಜಿತಚರಣ—ಮುಂತಾದವು ಮಿಕ್ಕ ರಾಜರ ಬಿರುದುಗಳು; ಅಶೋಕನದು ಬರಿಯ 'ದೇವಾನಾಂ ಪ್ರಿಯ', 'ಪ್ರಿಯದರ್ಶಿ'. ಆ ಅಟ್ಟಹಾಸವೆಲ್ಲಿ, ಈ ಅನಾಡಂಬರವೆಲ್ಲಿ! ಎರಡನ್ನೂ ಒಟ್ಟಿಗೆ ನೋಡಿದರೆ, ಕಪ್ಪಿನಮೇಲೆ ಬಿಳುಪು ಕಂಡಂತೆ ಆಗುತ್ತದೆ.

ಅಶೋಕನ ಅನಾಡಂಬರವನ್ನೂ, ಮೃದುತ್ವವನ್ನೂ, ವಿನ

ಯವನ್ನೂ ತಿಳಿಯಲು ಆತನ ಶಾಸನಗಳೇ ಸಾಕು. ಅವುಗಳನ್ನು ಶಾಸನಗಳೆಂದು ಕರೆದರೂ, ಅವುಗಳಲ್ಲಿ ಅಧಿಕಾರದ ದರ್ಪವಿಲ್ಲ, ಆಜ್ಞೆಯಿಲ್ಲ, ಅಟ್ಟಹಾಸವಿಲ್ಲ. ಅಶೋಕನ ಮನಸ್ಸಿನ ಕೋಮಲತೆಯೂ ಅಲ್ಲಿ ಸ್ಪಷ್ಟವಾಗಿದೆ. ಶಾಸನಗಳನ್ನು ಓದಿದರೆ-ಯಾವನೋ ಮಹಾತ್ಮನು ಸರ್ವ ಲೋಕಕ್ಕೆ ಹಿತ ಸುಖಗಳನ್ನು ಬೋಧಿಸುವಂತೆ, ತಾಯಿಯು ತಪ್ಪಿ ನಡೆಯುತ್ತಿರುವ ತನ್ನ ಒಂದೇ ಮಗುವನ್ನು ಅನುಕಂಪದಿಂದ ನುಡಿಸುವಂತೆ, ಪರಮ ಆಪ್ತನಾದ ಮಿತ್ರನು ಹಿತವಚನ ಹೇಳುವಂತೆ ತೋರುವುದು. ಅಶೋಕನು ಮಿಕ್ಕ ದೊರೆಗಳಿಗಿಂತ ಎಲ್ಲ ವಿಧಗಳಲ್ಲಿಯೂ ಭಿನ್ನನೆಂದು ಸ್ಪಷ್ಟಗೊಳಿಸಲು ಅವನ ಶಾಸನಗಳೇ ಸಾಕು.

ಅಶೋಕನ ಕೀರ್ತಿ ಹೀಗೆ ನಿಂತಿರಲು ಕಾರಣಗಳಿಲ್ಲದೆ ಇಲ್ಲ. ಯುದ್ಧಮಾಡಿ ರಾಜ್ಯ ವಿಸ್ತರಿಸುತ್ತಿರುವಾಗ, 'ಇಷ್ಟು ಸಾಕು. ಯುದ್ಧದಲ್ಲಿ ಜನರನ್ನು ಕೊಂದು ರಾಜ್ಯ ಕಟ್ಟುವುದು ಬೇಡ' ಎಂದು ಹೊಸ ರಾಜ್ಯ ಸಂಪಾದನೆಯನ್ನು ನಿಲ್ಲಿಸಿದವನು ಅಶೋಕನೊಬ್ಬನೇ. ಬೇರೆ ಯಾವ ದೊರೆಯೂ ಹೀಗೆ ಮಾಡಿ ಮದು ತಿಳಿದುಬಂದಿಲ್ಲ. ಎಲ್ಲರೂ ರಾಜ್ಯವಾದಮೇಲೆ ರಾಜ್ಯ ಕಟ್ಟುವವರೆ. ಜನರ ಸುಖದುಃಖಗಳಿಗೆ ಗಮನಕೊಡದೆ ತಮ್ಮ ರಾಜ್ಯವಿಸ್ತಾರದ ಆಸೆಗೆ ವಶವಾದವರೆ. ಅಶೋಕನು ಪರಾಕ್ರಮದಲ್ಲಿ ಮಿಕ್ಕ ದೊರೆಗಳಿಗಿಂತ ಕೀಳಾದವನಲ್ಲ. ತಂದೆ ತಾತಂದಿರು ಬಿಟ್ಟು ಹೋದ ವಿಶಾಲಸಾಮ್ರಾಜ್ಯವನ್ನು ವಿಚಕ್ಷಣೆಯಿಂದ ಆಳುತ್ತಿದ್ದನು. ಮಿಕ್ಕವರಂತೆ ಅವನಿಗೂ ರಾಜ್ಯ ವಿಸ್ತರಿಸುವ ಇಚ್ಛೆ ಇತ್ತು. ಕಳಿಂಗರೊಡನೆ ಕಾದಿ, ಅವರನ್ನು ಅನಾಯಾಸವಾಗಿ ಜಯಿಸಿದನು. ಆ ಒಂದು ಯುದ್ಧದ ಸಾವು ನೋವುಗ



'ಗಜತಮೋ'

[ ಈ ಚಿತ್ರವು ಕಾಲ್ಸೀಶಿಲಾಶಾಸನದ ಕೆಳಗಿದೆ. ಆನೆಯ ಕೆಳಗೆ, ಬ್ರಾಹ್ಮೀ ಲಿಪಿಯಲ್ಲಿ "ಗಜತಮೋ" ।ಎಂದು ಬರೆದಿದೆ. "ಗಜತಮೋ" ಎಂದರೆ "ಶ್ರೇಷ್ಠವಾದ ಆನೆ". ಬುದ್ಧದೇವನಿಗೆ "ಮಹಾನಾಗ" ಎಂಬ ಹೆಸರಿತ್ತು. "ಮಹಾನಾಗ" ಎಂದರೆ "ಗಚತಮೋ" ಎಂದರೆ "ಶ್ರೇಷ್ಠವಾದ ಆನೆ" ಎಂವರೆ ಬುದ್ಧನ ಗುರುತು]

ಳನ್ನು ನೋಡಿಯೇ ಅವನ ಹುಚ್ಚು ಮರೆಯಾಯಿತು. ತನ್ನ ರಾಜ್ಯಕ್ಕೆ ಸೇರಲಿ, ಸೇರದಿರಲಿ, ಜನಪದವೆಲ್ಲವೂ ಸುಖವಾಗಿ ಬಾಳಲೆಂಬುದೇ ಅವನ ತತ್ತ್ವವಾಯಿತು. ಅಂದಿನಿಂದ ಪುನಃ ಯುದ್ಧ ಮಾಡಲಿಲ್ಲ. ಶಾಂತಿದಂಡವು ಅಶೋಕನ ಕೈಬಿಟ್ಟು ಇಳಿಯಲಿಲ್ಲ. ಮತ್ತೆಂಯೂ ಹೇಳುವುದಾದರೆ, ಸಕಲ ಭೂಮಂಡಲದ ಇತಿಹಾಸವಲ್ಲಿ ಈ ರೀತಿ ವರ್ತಿಸಿದವನು ನಮ್ಮ ಅಶೋಕ ಚಕ್ರವರ್ತಿಯೊಬ್ಬನೇ !

ಅಶೋಕನು ಅನನ್ಯ ಸಾಮಾನ್ಯನಾಗಲು, ಮೇಲೆ ಹೇಳಿದುದೊಂದಲ್ಲದೆ, ಬೇರೊಂದು ಬಲವಾದ ಕಾರಣವುಂಟು. ಅದು ಆತನ ಧರ್ಮಶ್ರದ್ಧೆ, ಬಹು ವಿಶಾಲವಾದ ಧರ್ಮದೃಷ್ಟಿ.

ಅಶೋಕನು ಬೌದ್ಧನು. ಎಂದರೆ ಹುಟ್ಟು ಬೌದ್ಧನಲ್ಲ, ಬೌದ್ಧ ಧರ್ಮವನ್ನು ಸ್ವೀಕರಿಸಿದವನು. ಪಟ್ಟಕ್ಕೆ ಬಂದ ಐದು ವರುಷದ ನಂತರ ಬೌದ್ಧನಾದವನು. ಆದರೆ ಮನಸಾ ಬೌದ್ಧನಾಗಿರಲಿಲ್ಲ. ಎರಡು ಎರಡೂವರೆ ವರುಷ ಹಾಗೂ ಹೀಗೂ ಇರುವಾಗ ಕಳಿಂಗದ ಯುದ್ಧ ನಡೆಯಿತು. ಅಲ್ಲಿನ ಹಾವಳಿಯನ್ನು ಕಂಡು, ಅವನಿಗೆ ಬೌದ್ಧ ಧರ್ಮದಲ್ಲಿ ಕಲಿತ ಅಹಿಂಸಾ ತತ್ತ್ವವು ರುಚಿಸಿತು. ಅಂದಿನಿಂದ ಬೌದ್ಧ ಧರ್ಮದಲ್ಲಿ ಅವನ ಶ್ರದ್ಧೆ ಹೆಚ್ಚಿತು. ಕೆಲವು ಕಾಲದಮೇಲೆ ಅವನು ಬೌದ್ಧ ಸಂಘದ ರಕ್ಷಕನ ಸ್ಥಾನಕ್ಕೆ ಬಂದನು. ಮೂರನೆಯ ಬೌದ್ಧ ಸಭೆ ನಡೆದಾಗ, ಅಶೋಕನು ತಾನೇ ತಿಷ್ಯನೊಡನೆ ಕುಳಿತು ಬಂದ ಭಿಕ್ಷುಗಳನ್ನೆಲ್ಲ ಪರೀಕ್ಷಿಸಿದನು ; ಅಜ್ಞರಾದವರಿಗೆ ಬಿಳಿಯುಬಟ್ಟೆಯುಡಿಸಿ ಹೊರಗೋಡಿಸಿದನು. ಅಲ್ಲದೆ ಕೌಶಾಂಬಿ, ಸಾಂಚಿ ಮುಂತಾದ ಕಡೆಯಿರುವ ಶಾಸನಗಳಲ್ಲಿ "ಯಾವ ಭಿಕ್ಷುವೇ

ಆಗಲಿ, ಭಿಕ್ಷುಣಿಯೇ ಆಗಲಿ, ಸಂಘಕ್ಕೆ ತಪ್ಪು ಬೋಧಿಸಿ, ಸಂಘದಲ್ಲಿ ಒಡಕು ತರಲು ಪ್ರಯತ್ನಿಸಿದರೆ, ಅವರಿಗೆ ಬಿಳಿಯ ಬಟ್ಟೆಯುಡಿಸಬೇಕು. ಯಾರೂ ವಾಸಿಸದ ಕಡೆ ಅವರು ವಾಸ ಮಾಡಬೇಕು" ಎಂದು ಅನುಶಾಸಿಸಿರುವನು. ಅಶೋಕನು ಈ ರೀತಿ ಆಜ್ಞೆಮಾಡುವಷ್ಟರಮಟ್ಟಿಗೆ ಧರ್ಮದಲ್ಲಿ ಮುಂದುವರಿದಿದ್ದನು.


ಅಶೋಕನು ತಾನು ಬೌದ್ಧನಾದುದು ಮಾತ್ರವಲ್ಲ. ಅವನ ಪ್ರಭಾವದಿಂದ ರಾಜಮನೆತನದವರು ಅನೇಕರು ತಾವೂ ಬೌದ್ಧರಾದರು. ಹಾಗೆ ಬೌದ್ಧಧರ್ಮವನ್ನು ಆಚರಿಸಿ ಸಂನ್ಯಾಸವನ್ನು ಸ್ವೀಕರಿಸಿದವರು: ಅಶೋಕನ ತಮ್ಮ ವೀತಶೋಕ ಮತ್ತು ಮಕ್ಕಳಾದ ಕುಣಾಲ, ಮಹೇಂದ್ರ. ಸಂಘಮಿತ್ರೆಯರು. ಅಶೋಕನ ಬೇರೊಬ್ಬ ಮಗಳಾದ ಚಾರುಮತಿಯು ಚಿಕ್ಕಂದಿನಲ್ಲಿಯೆ ಪತಿವಿಯೋಗವಾಗಲು, ತಾನೂ ಭಿಕ್ಷುಣಿಯಾಗಿ ನೇಪಾಳದಲ್ಲಿ ನಿಂತಳು.

ಅಶೋಕನು ತಾನು ಧರ್ಮಚಾರಿಯಾಗಿ ಅಷ್ಟರಲ್ಲಿಯೆ ತೃಪ್ತನಾಗಲಿಲ್ಲ. ತಾನು ಕಲಿತ ಧರ್ಮವನ್ನು ತನ್ನ ಪ್ರಜೆಗಳಿಗೂ ಕಲಿಸಿದನು. ಅಶೋಕನು ಬೌದ್ಧನಾಗಿ ಸಂಘದ ರಕ್ಷಕನಾಗಿದ್ದವನು. ಆದರೂ ಅವನು ತನ್ನ ಪ್ರಜೆಗಳಿಗೆ ಬೋಧಿಸಿದುದು ಬೌದ್ಧಮತದ ತತ್ತ್ವಗಳನ್ನಲ್ಲ; ಆತನು ಬೋಧಿಸಿದುದು ಸಕಲ ಮತಗಳ ಸಾರವನ್ನು. ಧರ್ಮ ಎಂದರೆ ಎಲ್ಲರೂ ಮಾಡಬೇಕಾದ ಕರ್ತವ್ಯ. ಬ್ರಾಹ್ಮಣರಾಗಲಿ, ಬೌದ್ಧರಾಗಲಿ, ಜೈನರಾಗಲಿ, ಆಜೀವಕರಾಗಲಿ, ಯಾವ ಪಾಷಂಡರೇ ಆಗಲಿ – ಇಹಪರಗಳಲ್ಲಿ ಸುಖಪಡೆಯಲು ಅವರು ಎಲ್ಲರೂ ಮಾಡಬೇ

ಕಾದ ಕರ್ತವ್ಯ ಒಂದೇ. ಆ ಕರ್ತವ್ಯವು, ಆ ಧರ್ಮವು, ಅದೇ ಸರ್ವ ಮತಗಳಿಗೂ ಸಮಾನವಾದ ಧರ್ಮ. ಅದೇ ಅಶೋಕನ 'ಧರ್ಮ.'

'ಬ್ರಾಹ್ಮಣ ಶ್ರಮಣರಿಗೆ ದಾನಮಾಡಬೇಕು, ವೃದ್ಧರನ್ನು ಉಪಚರಿಸಬೇಕು ; ದಾಸಭೃತ್ಯರಲ್ಲಿ ಪ್ರೀತಿಯನ್ನೂ ಗುರುಗಳಲ್ಲಿ ಪೂಜ್ಯಭಾವವನ್ನೂ ತೋರಬೇಕು. ಪುಣ್ಯಕಾರ್ಯವು ಆದಷ್ಟು ಬಹುವಾಗಬೇಕು. ಪಾಪ ಆದಷ್ಟು ಕಡಿಮೆಯಾಗಬೇಕು. ಇಂದ್ರಿಯ ನಿಗ್ರಹ, ಭಾವಶುದ್ಧಿ, ಕೃತಜ್ಞತೆ, ದೃಢಭಕ್ತಿ, ದಯೆ, ದಾನ, ಸತ್ಯ ಮೊದಲಾದ ಸದ್ಗುಣಗಳಿರಬೇಕು. ಮನಸ್ಸು, ಮಾತು, ಕೆಲಸಗಳಲ್ಲಿ ಶುಚಿಯಾಗಿರಬೇಕು. ಇದು ಧರ್ಮ. ಇದು ಕರ್ತವ್ಯ.' ಎಂದು ಮೊದಲಾಗಿ ಅಶೋಕನು ಧರ್ಮವನ್ನು ವಿವರಿಸಿರುವನು. ಇದು ಧರ್ಮವಲ್ಲವೆಂದು ಯಾವ ಮತದವನೂ ಕಾದಾಡುವಂತಿಲ್ಲ. ಅದು ಸರ್ವಮತ ಸಾಮಾನ್ಯವಾದ ಶಿಷ್ಟಾಚಾರಗಳಿಂದ ಕೂಡಿ ಸರ್ವರನ್ನೂ ಒಲಿಸುವ ಧರ್ಮ. ಧರ್ಮವನ್ನು ಇಷ್ಟು ವಿಶಾಲದೃಷ್ಟಿಯಿಂದ ನೋಡಿದವರಲ್ಲಿ ಅಶೋಕನೆ ಮೊದಲನೆಯವನು.

ಅಶೋಕನು ಮೇಲೆ ಹೇಳಿದ ಧರ್ಮಬೋಧೆಯನ್ನು ತನ್ನ ಸಾಮ್ರಾಜ್ಯದಲ್ಲೂ ಹೊರಗೂ ಪ್ರಚಾರಗೊಳಿಸಿದನು. ಅವಲ್ಲದೆ ಬೌದ್ಧರಿಗಾಗಿಯೇ ಒಂದು ಪ್ರತ್ಯೇಕ ಧರ್ಮಶಾಸನವನ್ನು ಹೊರಡಿಸಿದನು. ಅದರಲ್ಲಿ, ಬುದ್ಧದೇವನು ಹೇಳಿದ್ದ ಬೌದ್ಧಸಾಹಿತ್ಯದಿಂದ ಆರು ಭಾಗಗಳನ್ನು ಆರಿಸಿದನು. ಪ್ರತಿ ಭಿಕ್ಷು ಭಿಕ್ಷುಣಿಯೂ ಆ ಭಾಗಗಳನ್ನು ಮೇಲಿಂದ ಮೇಲೆ ಕೇಳುತ್ತಿರಬೇಕೆಂದು ಆಜ್ಞಾಪಿಸಿದನು. ಬೌದ್ಧರಿಗೆ ಪ್ರತ್ಯೇಕವಾಗಿ ಬೋಧಿ




ಬ್ರಾಹ್ಮೀ ಮತ್ತು ಖರೋಷ್ಠೀ ಲಿಪಿ.

[ಈ ಚಿತ್ರದಲ್ಲಿ, ಮೇಲೆ ಇರುವುದು ಬ್ರಾಹ್ಮೀಲಿಪಿ. ಅದನ್ನು "ದೇವಾನಾಂ ಪಿಯೋ ಪಿಯದಸಿ ರಾಜಾ ಸರ್ವತ ಇಚ್ಛತಿ ಸವೇ ಪಾಸಂಡಾ ವಸೇಯು" ಎಂದು ಎಡಗಡೆಯಿಂದ ಬಲಗಡೆಗೆ ಓದಬೇಕು. ಕೆಳಗೆ ಇರುವುದು ಖರೋಷ್ಠೀಲಿಪಿ. ಅದನ್ನು "ದೇವನಂ ಪ್ರಿಯೋ ಪ್ರಿಯಶಿ ರಜ ಸವತ್ರ ಇಚ್ಛತಿ ಸವ್ರ ಪ್ರಷಂಡ ವಸೇಯು" ಎಂದು ಬಲಗಡೆಯಿಂದ ಎಡಗಡೆಗೆ ಓದಬೇಕು.]

ಸಿದ ಆ ಭಾಗಗಳಲ್ಲಿ ಏನಿದೆ ನೋಡೋಣ. ಮೊದಲನೆಯದು ಶೀಲ ಸದಾಚಾರಗಳನ್ನು ಕುರಿತುದು. ಒಂದು ಧರ್ಮಕ್ಕೆ ಮುಂದೆ ಬರಬಹುದಾದ ತೊಂದರೆಗಳನ್ನು ಕುರಿತುದು. ಎರಡು ಮುನಿಯಾದವನು ಹೇಗಿರಬೇಕೆಂದು ತಿಳಿಸುವುದು. ಆತ್ಮಪರೀಕ್ಷೆಯ ಅವಶ್ಯಕತೆ ಒಂದರಲ್ಲಿ. ಕಡೆಯದರಲ್ಲಿ ಸುಳ್ಳಾಡಬಾರದೆಂದು ಬುದ್ಧನು ಮಗನಾದ ರಾಹುಲನಿಗೆ ಹೇಳಿದುದು. ಹೀಗೆ ಬೌದ್ಧರಿಗೆ ಬೌದ್ಧಧರ್ಮವನ್ನು ಹೇಳುವಾಗಲೂ ಅಶೋಕನು ಎಲ್ಲರೂ ಸಮ್ಮತಿಸುವಂತಹ ಭಾಗಗಳನ್ನೇ ಆಯ್ದು ಹೇಳುತ್ತಿದ್ದನು.

ಚಂದ್ರಗುಪ್ತನಿಗೆ ಕೌಟಲ್ಯನೆಂಬ ಮಂತ್ರಿಯಿದ್ದನೆಂದು ಹಿಂದೆ ಹೇಳಿದೆ. ಆತನು ರಾಜನೀತಿಯಲ್ಲಿ ಬಹು ನುರಿತವನು. ಅವನು 'ಎಲ್ಲಾ ಮತಗಳನ್ನೂ ಒಂದೇ ರೀತಿಯಿಂದ ಆದರಿಸಿದರೆ, ದೇಶದಲ್ಲಿ ಶಾಂತಿ ನೆಲೆಗೊಳ್ಳುವುದು. ಒಂದು ದೇಶವನ್ನು ಗೆದ್ದರೆ, ಅವರ ಮತಾಚಾರಗಳನ್ನು ಬದಲಾಯಿಸದೆ ಅವರನ್ನು ಪಾಲಿಸಬೇಕು' ಎಂದು ಹೇಳಿದನು. ಆದರೆ ಅದೇ ಉಸಿರಿನಲ್ಲಿ, ಕೆಲವು ಸಂದರ್ಭಗಳಲ್ಲಿ ಬೌದ್ಧರನ್ನೂ ಆಜೀವಕರನ್ನೂ ಜೊತೆಗೆ ಸೇರಿಸಬಾರದೆಂದು ಹೇಳಿದ್ದಾನೆ. ಅಶೋಕನು ತನ್ನ ತಾತನ ಮಂತ್ರಿಗಿಂತ ಒಂದು ಹೆಜ್ಜೆ ಮುಂದೆ ಹೋದನು. ಅವನು ಆಚರಣೀಯವೆಂಬುದನ್ನು ಆಚರಿಸಿದನು. ಅವನು ನಿಷೇಧಿಸಿದುದು ಅಪ್ರಕೃತವೆಂದು ಆ ಅಡ್ಡಿಯನ್ನು ಕಿತ್ತುಹಾಕಿದನು. ಎಲ್ಲ ಮತದವರೂ ಎಲ್ಲ ಕಡೆಯೂ ವಾಸಿಸಬೇಕೆಂಬುದೇ ದೇವನಾಂ ಪ್ರಿಯನ ತೀವ್ರ ಬಯಕೆಯಾಯಿತು.

ಅಶೋಕನು ತನ್ನ ಬಯಕೆಯನ್ನು ತನ್ನ ಶಾಸನಗಳ ಉದ್ದಕ್ಕೂ ಹೇಳಿಕೊಂಡು ಬಂದಿದ್ದಾನೆ. ಅದು ಸಾಲದೆಂದು

ಒಂದು ಇಡೀ ಶಾಸನವನ್ನೇ ಅದಕ್ಕಾಗಿ ಮೀಸಲು ಮಾಡಿದ್ದಾನೆ. ಆ ಶಾಸನವು ಅವನ ಹದಿನಾಲ್ಕು ಶಿಲಾ ಶಾಸನಗಳಲ್ಲಿ ಹನ್ನೆರಡನೆಯದು. ಅಶೋಕನ ವಿಶಾಲದೃಷ್ಟಿಯನ್ನು ಚಿತ್ರಿಸುವ ಆ ದಿವ್ಯ ಶಾಸನದ ಕನ್ನಡ ರೂಪವನ್ನು ಈ ಪುಸ್ತಕದ ಮುವ್ವತ್ತುಮೂರನೆಯ ಪುಟದಲ್ಲಿ ಕಾಣಬಹುದು. ಹದಿನಾಲ್ಕು ಶಾಸನ ಸಿಕ್ಕುವ ಕಡೆಗಳಲ್ಲಿ ಈ ಶಾಸನವೂ ಸಿಗುತ್ತದೆ. ಅಲ್ಲದೆ, ಷಾಬಾಸ್‌ಗರ್ಹಿ ಎಂಬೆಡೆಯಲ್ಲಿ ಈ ಶಾಸನವೊಂದೇ ಪ್ರತ್ಯೇಕವಾದ ಬಂಡೆಯ ಮೇಲಿದೆ. ಹಿಂದಿನ ಕಾಲದಲ್ಲಿ ಕೈಬರ್ ಕಣಿವೆಯ ಮಾರ್ಗವಾಗಿ ಹಿಂದೂದೇಶಕ್ಕೆ ಬರಬೇಕಾದರೆ, ದಾರಿಯಲ್ಲಿ ಷಾಬಾಸ್ ಗರ್ಹಿ ಸಿಕ್ಕುತ್ತಿತ್ತು. ಪರದೇಶದಿಂದ ಬಂದವನಿಗೆ, ಅಶೋಕನ ರಾಜ್ಯದಲ್ಲಿ ಎಲ್ಲ ಮತದವರೂ ಅನ್ಯೋನ್ಯವಾಗಿ ಸೌಹಾರ್ದದಿಂದ ವಾಸಿಸಬೇಕೆಂದು ಹೇಗೆ ತಿಳಿಯಬೇಕು? ಸ್ವಮತವನ್ನು ಹೊಗಳದೆ, ಪರಮತವನ್ನು ದೂಷಿಸದೆ, ಪರಸ್ಪರ ಮತಗಳ ಸಾರವನ್ನು ಗ್ರಹಿಸಿ,ಅಣ್ಣತಮ್ಮಂದಿರಂತೆ ಬದುಕಬೇಕೆಂದು ಹೇಗೆ ಗೊತ್ತಾಗಬೇಕು?ಹಾಗೆ ಬಂದವರಿಗೆ,ಹಿಂದೂದೇಶಕ್ಕೆ ಕಾಲಿಡುವ ಮೊದಲು ಕಣ್ಣಿಗೆ ಬೀಳುತ್ತಿದ್ದುದು ಷಾಬಾಸ್‌ಗರ್ಹಿಯ ಹನ್ನೆರಡನೆಯ ಶಿಲಾಶಾಸನ. ಎಲ್ಲ ಮತಗಳ ಸಾರಾಭಿವೃದ್ಧಿಯನ್ನು ಬಯಸಿ, ತನ್ನ ಸಾಮ್ರಾಜ್ಯದಲ್ಲಿ ಎಲ್ಲರೂ ಒಂದಾಗಿ ಬಾಳಲೆಂದು ಮೊದಲು ಪ್ರಯತ್ನಿಸಿದವನು ಅಶೋಕನೇ. ಅಶೋಕನು ಬೌದ್ಧನಾದರೂ, ತನ್ನ ಜನಪದದಲ್ಲಿ ಬೌದ್ಧ ಧರ್ಮವನ್ನೇ ಅನುಶಾಸಿಸಿ, ಜನರೆಲ್ಲರೂ ಬೌದ್ಧರಾಗುವಂತೆ ಮಾಡಲು ಕ ನ ಸಿ ನ ಲ್ಲಿ ಯೂ ಯೋಚಿಸಲಿಲ್ಲ. ಅವನಿಗೆ ಆ ಧರ್ಮೋನ್ಮಾದದ ಸೋಂಕೇ ಇರಲಿಲ್ಲ. ಪ್ರತಿಯೊಬ್ಬರೂ ತಮ್ಮ ತಮ್ಮ ಮತರೀತಿಯಲ್ಲಿಯೇ

ಪುಣ್ಯಗಳಿಸಿ ಸ್ವರ್ಗ ಪಡೆಯಲೆಂದು, ತ್ರಿಕರಣ ಪೂರ್ವಕವಾಗಿ ಪ್ರಯತ್ನಿಸಿದನು. ಆ ಒಂದು ದಿವ್ಯ ದೃಷ್ಟಿಯೆ ಕಾರಣವಾಗಿ, ಅವನ ಹೆಸರು ಸೂರ್ಯ ಚಂದ್ರರಿರುವವರೆಗೂ ನಿಲ್ಲುವಂತಾಗಿದೆ. ಇಂತಹ ಉದಾತ್ತ ಭಾವನೆಗಳನ್ನು ಬೆಳೆಸಿ, ಹಿಡಿದುದನ್ನು ಸಾಧಿಸಿದವರಲ್ಲಿ ಮೊತ್ತಮೊದಲಿಗನು ಅಶೋಕನೇ.

ಅಶೋಕನ ಇನ್ನೊಂದು ಹಿರಿಯ ಗುಣವೆಂದರೆ - ತಾನು ಬೋಧಿಸಿದಂತೆ ತಾನೂ ಆಚರಿಸಿದುದು. ಎಲ್ಲ ಮತಗಳನ್ನೂ ಒಂದೇ ರೀತಿ ಆದರಿಸಬೇಕೆಂದು ಅವನು ಹೇಳಿದನಷ್ಟೆ. ತಾನು ಕೂಡ ಹಾಗೆಯೇ ಮಾಡಿದನು. ಅಶೋಕನ ಕಾಲದಲ್ಲಿ ಬ್ರಾಹ್ಮಣರು, ಬೌದ್ಧರು, ಜೈನರು, ಆಜೀವಕರು, ಇತರ ಪಾಷಂಡರು ಮುಂತಾಗಿ ಅನೇಕ ಪಂಗಡಗಳಿದ್ದವು. ಬೌದ್ಧರಲ್ಲಿಯೂ ಜೈನರಲ್ಲಿಯೂ ಒಳಪಂಗಡಗಳುಂಟಾಗಿ, ಅಂತಃಕಲಹ ಬಹಳವಾಗಿತ್ತು. ಬೌದ್ಧರನ್ನು ಕಂಡರೆ ಜೈನರಿಗಾಗದು, ಜೈನರನ್ನು ಕಂಡರೆ ಆಜೀವಕರಿಗಾಗದು; ಒಬ್ಬರನ್ನು ಕಂಡರೆ ಒಬ್ಬರಿಗಾಗದು. ಈ ರೀತಿಯ ಮತ ಸಂಬಂಧವಾದ ಕಲಹಗಳಿಂದ ದೇಶದ ಹಿತಕ್ಕೂ ಜನಗಳ ಏಳಿಗೆಗೂ ಅಡ್ಡಿಯಾಗಿತ್ತು. ಅಶೋಕನ ಧರ್ಮಬೋಧೆಯಿಂದ ಅವರ ಕಲಹಗಳು ನಿಂತು ಸೌಹಾರ್ದ ಬೆಳೆಯಿತು. ಅಶೋಕನು ಸಮದೃಷ್ಟಿಯಿಂದ ಬೌದ್ಧರನ್ನೂ ಬ್ರಾಹ್ಮಣರನ್ನೂ ಒಂದೇ ವಿಧವಾಗಿ ಆದರಿಸುತ್ತಿದ್ದನು. ಜೈನರು ಕೂಡ ಧರ್ಮಾಚಾರಿಗಳಾಗಲೆಂದು ಅವರ ನಡುವೆ ಕೆಲಸಮಾಡಲು ಧರ್ಮ ಮಹಾಮಾತ್ರರೆಂಬ ಅಧಿಕಾರಿಗಳನ್ನು ನೇಮಿಸಿದನು.

ಆ ಕಾಲದಲ್ಲಿ ಬೌದ್ಧರಲ್ಲಿ ಎರಡು ಪಂಗಡವಿತ್ತು. ಒಂದು

ಪಂಗಡದವರು ಗೌತಮ ಬುದ್ಧನನ್ನು ಮಾತ್ರ ಪೂಜಿಸುತ್ತಿದ್ದರು. ಇನ್ನೊಂದು ಗುಂಪು ಗೌತಮ ಬುದ್ಧನ ಹಿಂದಿನ ಇಪ್ಪತ್ತುಮೂರು ಬುದ್ಧರನ್ನು ಪೂಜಿಸುತ್ತಿತ್ತು. ಒಂದು ಗುಂಪನ್ನು ಕಂಡರೆ ಇನ್ನೊಂದಕ್ಕೆ ಆಗುತ್ತಿರಲಿಲ್ಲ. ಅಶೋಕನು ಗೌತಮ ಬುದ್ಧನ ಅನುಯಾಯಿ. ಆದರೂ, ಅವನು ಮಿಕ್ಕಿನ ಇಪ್ಪತ್ತುಮೂರು ಬುದ್ಧರಲ್ಲಿ ಒಬ್ಬನಾದ ಕನಕಮುನಿ ಬುದ್ಧನ ಸ್ತೂಪವನ್ನೂ ದೊಡ್ಡದು ಮಾಡಿಸಿದನು; ಆ ಸ್ತೂಪವನ್ನು ತಾನೇ ಹೋಗಿ ದರ್ಶಿಸಿ, ಅಲ್ಲಿ ಒಂದು ಶಿಲಾಸ್ತಂಭವನ್ನು ನೆಡಿಸಿದನು! ಅದೇ ಸರ್ವ ಮತ ಸಮತೆಯೆ ಕಾರಣವಾಗಿ, ಆಜೀವಕರಿಗೆ ಕೂಡ ಮೂರು ಪರ್ವತ ಗುಹೆಗಳನ್ನು ದಾನಕೊಟ್ಟನು.

ಒಂದು ಮತದವರು ಇನ್ನೊಂದು ಮತದವರನ್ನು ಗೌರವಿಸಲು ಕಲಿತುದು ಅಶೋಕನ ಕಾಲದಲ್ಲಿ. ಅಶೋಕನು ಹೀಗೆ ಶಾಂತಿ ಸ್ಥಾಪನೆಗೆ ಪ್ರಯತ್ನಪಟ್ಟುದಕ್ಕೆ ಅವನ ಪ್ರಜಾವಾತ್ಸಲ್ಯವೇ ಕಾರಣ. ಪ್ರಜೆಗಳೆಲ್ಲರೂ ಇಹಪರಗಳಲ್ಲಿ ಸುಖಿಗಳಾಗಲೆಂದು ಎಷ್ಟು ಪರಾಕ್ರಮದಿಂದ ವರ್ತಿಸಿದನು! ಅವರೆಲ್ಲರಿಗೂ ತನ್ನ ಧರ್ಮೋಪದೇಶವು ತಿಳಿಯಲೆಂದು ಅನೇಕ ಶಾಸನಗಳನ್ನು ಬರೆಸಿದನು. ಕೆಲವನ್ನು ಕಲ್ಲುಬಂಡೆಗಳ ಮೇಲೆ ಕೆತ್ತಿಸಿದನು. ಬಂಡೆಗಳು ಸಿಕ್ಕದ ಕಡೆ ಕಲ್ಲುಕಂಬಗಳನ್ನು ತರಿಸಿದನು. ಚೂನಾರ್ ಮಲೆಯಿಂದ ಆ ಕಲ್ಲುಕಂಬಗಳನ್ನು ರಾಜ್ಯದ ಮೂಲೆ ಮೂಲೆಗೂ ಸಾಗಿಸುವುದು ಬಾಯಿ ಮಾತಾಗಿರಲಿಲ್ಲ. ಆದರೂ ಅಶೋಕನು ಅದನ್ನು ಸಾಧಿಸಿದನು. ಶಾಸನ ಬರೆಸಿ ಅಷ್ಟರಿಂದಲೇ ಅವನು ತೃಪ್ತನಾಗಲಿಲ್ಲ. ತನ್ನ ಶಾಸನದಂತೆ ಜನರು ಆಚರಿಸುವುದನ್ನು ಮೇಲು ವಿಚಾರಿಸುವುದಕ್ಕೆ ಅನೇಕ ಅಧಿಕಾರಿಗಳನ್ನು ನೇಮಿಸಿ,

ದನು. ಅಷ್ಟೂ ಸಾಲದೆಂದು, ತಾನೇ ಸ್ವಯಂ ಆಗಿ ಜನರನ್ನು ಕಂಡುಬರುತ್ತಿದ್ದನು.

ಅಶೋಕನು ಪಟ್ಟವೇರಿದಾಗ ಅವನ ರಾಜ್ಯವು ದಕ್ಷಿಣೋತ್ತರ ಮಹಿಷಮಂಡಲದಿಂದ ಹಿಮಾಲಯದ ವರೆಗಿತ್ತು, ಪೂರ್ವಪಶ್ಚಿಮ ಬರ್ಮಾದಿಂದ ಪಾರ್ಸಿಸ್ಥಾನದ ವರೆಗಿತ್ತು. ಎಂಟು ವರುಷ ವಜ್ರಮುಷ್ಟಿಯಿಂದ ರಾಜ್ಯವಾಳಿದನು. ಕಳಿಂಗವು ಕೈವಶವಾಯಿತು. ಅಲ್ಲಿಂದ ಮುಂದೆ ಮುವ್ವತ್ತು ವರುಷ ಯುದ್ಧ ಮಾಡದೆ ಶಾಂತಿಯಿಂದಲೇ ರಾಜ್ಯಪರಿಪಾಲನೆ ಮಾಡಿದನು. ಯುದ್ಧಬಿಟ್ಟರೂ ರಾಜ್ಯ ಕ್ಷೀಣಿಸಲಿಲ್ಲ, ಇದ್ದಂತೆಯೆ ಇತ್ತು. ಪ್ರಜೆಗಳ ಹಿತಸುಖ ಬಹುವಾಗಿ ವೃದ್ಧಿಯಾಗಿತ್ತು. ಶಾಂತತೆಯಿಂದ ವರ್ತಿಸಿ, ಪ್ರಜೆಗಳ ಅನುರಾಗವನ್ನು ಸಂಪಾದಿಸಿ, ಎಷ್ಟೇ ವಿಶಾಲವಾದ ರಾಜ್ಯವನ್ನಾದರೂ ವಿಚಕ್ಷಣೆಯಿಂದ ಆಳಬಹುದೆಂದು ಅಶೋಕನು ತೋರಿಕೊಟ್ಟನು; ಪೃಥ್ವಿಗೇ ತಾನೊಂದು ಮೇಲು ಪಂಕ್ತಿಯಾದನು.

ಅಶೋಕನ ಈ ತೆರನಾದ ಧರ್ಮವಿಜಯದ ಮಹಾತ್ಮೆಯನ್ನು ನಾವು ಚೆನ್ನಾಗಿ ತಿಳಿಯಬೇಕಾದರೆ, ಮೌರ್ಯವಂಶದ ನಾಶವನ್ನೂ ತಿಳಿಯಬೇಕು. ತನ್ನ ತಂದೆ ತಾತಂದಿರು ಬಿಟ್ಟು ಹೋದ ಅಖಂಡ ಚಕ್ರಾಧಿಪತ್ಯವನ್ನು ಅಶೋಕನು ಶಾಂತಿಯಿಂದಲೇ ನಿರ್ವಹಿಸಿದನಷ್ಟೆ. ಅಶೋಕನಿಗೆ ಸಂಪ್ರತಿ, ದಶರಥರೆಂಬ ಮೊಮ್ಮಕ್ಕಳಿದ್ದರು. ಅಶೋಕನು ಬದುಕಿರುವಾಗಲೇ ಅವರಿಬ್ಬರೂ ರಾಜ್ಯಭಾರಕ್ಕಾಗಿ ಜಗಳವಾಡುತ್ತಿದ್ದರು. ಅಶೋಕನು ಸತ್ತ ಮೇಲಂತೂ ಅವರ ಕಲಹ ಹೆಚ್ಚಿತು. ಆ ಒಳಗಲಹವನ್ನು ಕಂಡು, ಹಿಂದೆ ಮೌರ್ಯರಿಗೆ ಸೋತಿದ್ದ ಪ್ರಾಂತಗಳೆಲ್ಲವೂ ಪ್ರಬಲ

ವಾದುವು, ಸ್ವತಂತ್ರವಾದುವು. ಶತದ್ರು ನದಿಯಿಂದ ಬ್ರಹ್ಮಪು ತ್ರದವರೆಗಿನ ಭಾಗ ಹೊರತು, ಮಿಕ್ಕ ಮೌರ್ಯಚಕ್ರಾಧಿಪತ್ಯವು ಕರಗಿ ಕೈಗೆ ಸಿಕ್ಕದೆ ಹೋ ಯಿ ತು. ಆ ಉಳಿದ ಚೂರಿನಲ್ಲಿ ಪೂರ್ವ ಭಾಗವನ್ನು ದಶರಥನೂ ಪಶ್ಚಿಮ ಭಾಗವನ್ನು ಸಂಪ್ರ ತಿಯೂ ಹಂಚಿಕೊಂಡರು. ಸ್ವಲ್ಪ ಕಾಲದಲ್ಲಿಯೇ ಸಂಪ್ರತಿಯ ವಂಶಸ್ಥರು ತಮ್ಮ ಭಾಗವನ್ನು ಕಳೆದುಕೊಂಡರು. ದಶರಥನ ವಂಶಸ್ಥರು ಹಾಗೂ ಹೀಗೂ ಐವತ್ತು ವರುಷ ರಾಜ್ಯವಾಳಿದರು. ಅವರಲ್ಲಿ ಕಡೆಯ ರಾಜನು ಬೃಹದ್ರಥನೆಂಬವನು. ಅವನ ಸೇನಾ ಪತಿ ಪುಷ್ಯಮಿತ್ರನು ಶುಂಗವಂಶದವನು. ಪುಷ್ಯಮಿತ್ರನು ಸ್ವಾಮಿ ಯಾದ ಬೃಹದ್ರಥನನ್ನು ಕೊಲ್ಲಿಸಿ ತಾನೇ ರಾಜನಾದನು. ಮೌರ್ಯ ವಂಶವು ಹೇಳ ಹೆಸರಿಲ್ಲದಂತಾಯಿತು.

ಚಂದ್ರಗುಪ್ತನು ಸ್ಥಾಪಿಸಿದ ಮೌರ್ಯಸಾಮ್ರಾಜ್ಯದ ಅಂಕುರವು, ಐವತ್ತು ವರುಷಗಳೊಳಗೆ ಬೆಳೆದು ಮೌರ್ಯ ಮಹಾ ಚಕ್ರಾಧಿಪತ್ಯವಾಯಿತು. ಅಲ್ಲಿಂದ ಮುಂದೆ ಅಶೋಕನ ಕಾಲದಲ್ಲಿ, ಬಹು ಬೆಳೆಯದಿದ್ದರೂ, ನಲುವತ್ತು ವರುಷದ ಉತ್ಕೃಷ್ಟ ಬಾಳುವೆಯೊಂದರಿಂದಲೇ ಜಗತ್ತಿಗೆಲ್ಲ ಆದರ್ಶಪ್ರಾ ಯವಾಯಿತು. ಆದರೆ ಅಶೋಕನು ಸತ್ತು ಐವತ್ತು ವರ್ಷವಾ ಗುವುದರೊಳಗೆ ಚೂರು ಚೂರಾಗಿ, ಪುಡಿ ಪುಡಿಯಾಗಿ, ಆ ಮಹಾ ಸಾಮ್ರಾಜ್ಯವು ನೆಲಸಮವಾಯಿತು. ಅಶೋಕನಂತೆ ಧರ್ಮಗುಣಗಳನ್ನು ಬೆಳೆಸದೆ, ಧರ್ಮಮಂಗಲಗಳನ್ನು ಆಚರಿ ಸದೆ, ಧರ್ಮಪಥದಲ್ಲಿ ನಡೆಯದೆ ಹೋದುದರ ಫಲವನ್ನು ಒಡೆದು ತೋರುವಂತೆ ಮೌರ್ಯ ಚಕ್ರಾಧಿಪತ್ಯವು ನಿರ್ನಾಮ ವಾಯಿತು.

ಇಲ್ಲಿಗೆ ಅಶೋಕನ ಚರಿತ್ರೆ ಮುಗಿಯಿತು. ಮುಗಿಯಿತೆಂದರೆ, ಅಶೋಕನ ಚರಿತ್ರೆ ಓದಿ ಮುಗಿದುದು ಸಾಲದು. ಆತನು ಹೇಳಿರುವ ಧರ್ಮಗುಣಗಳನ್ನು ಬೆಳೆಸಬೇಕು, ಧರ್ಮಮಂಗಲಗಳನ್ನು ಆಚರಿಸಬೇಕು, ಅವನ ಧರ್ಮಪಥದಲ್ಲಿ ನಡೆಯಬೇಕು. ಅಶೋಕನಂತಹ ಮಹಾತ್ಮನು ನಮ್ಮಲ್ಲಿ ಇದ್ದನೆಂದು ಹಿಗ್ಗಿದರೆ ಸಾಲದು. ಅಶೋಕನಂತೆ ಅಹಿಂಸಾ ವ್ರತವನ್ನು ಆಚರಿಸಬೇಕು. ದಾನ, ದಯೆ, ಸತ್ಯ, ಕ್ಷಮೆ ಮುಂತಾದ ಗುಣಗಳನ್ನು ಬೆಳೆಸಬೇಕು. ಹಿರಿಯರನ್ನು ಗೌರವಿಸಿ, ಸಮಾನರನ್ನು ಆದರಿಸಿ, ಕೈಲಾಗದವರಿಗೆ ಸಹಾಯ ಮಾಡಬೇಕು. ಮತ ಮತಾಂತರಗಳೆಂಬ ಭೇದಭಾವವನ್ನು ಮರೆಯಬೇಕು. ಅನ್ಯಮತಗಳನ್ನು ಅರ್ಥಮಾಡಿಕೊಂಡು, ಅವುಗಳ ಗುಣಗಳನ್ನು ಗ್ರಹಿಸಿ, ಎಲ್ಲರೂ ಅನ್ಯೋನ್ಯವಾಗಿ ಸಹೋದರರಂತಿರಬೇಕು; ಒಂದೆ ತಾಯಿಯ ಮಕ್ಕಳಂತಿರಬೇಕು. 'ಲೋಕಕ್ಕೆಲ್ಲ ಹಿತವಾಗಬೇಕು, ಸುಖವಾಗಬೇಕು, ಶುಭವಾಗಬೇಕು' ಎಂಬುದೆ ಗಾಯತ್ರಿಯಾಗಬೇಕು. ಜಪಿಸಿ, ಅದನ್ನು ಸಾಧಿಸಬೇಕು. ಆಗ ಮನುಷ್ಯ ಜನ್ಮ ಸಾರ್ಥಕವಾದೀತು.

(ಹೆಚ್ಚು ವಿಚಾರಕ್ಕೆ ಹಿರಿಯರು ಈ ಗ್ರಂಥಗಳನ್ನು ನೋಡಬಹುದು.)

## ಸಾಧನ ಸಾಹಿತ್ಯ

ಹುಲ್ಟ್ಸ್: ಅಶೋಕನ ಶಾಸನಗಳು.
ಭಂಡಾರಕರ್: ಅಶೋಕ.
ರಾಧಾಕುಮುದ ಮುಖರ್ಜಿ: ಅಶೋಕ.
ಹುಯೆನ್‌ತ್ಸಾಂಗನ ಯಾತ್ರೆಗಳು.
ದಿವ್ಯಾವದಾನ.
ಮಹಾವಂಶ.